ಮಂಜುದಲ್ಲಿ 25 ಕವನಗಳಿವೆ. ಪ್ರೀತಿ, ಪ್ರೇಮ ನಿಸರ್ಗದ ಚಿತ್ರಗಳೊಡನೆ ಸಾಮಯಿಕ ವಿಷಯಗಳ ಕುರಿತಾದ ಕವನಗಳು ಸರಳ ಭಾಷೆಯಲ್ಲಿವೆ. ಪ್ರಾರಂಭದ ಪ್ರಯತ್ನದಲ್ಲಿಯೂ, ಹೊಸ ವರುಷ ಎಂತು ಬದುಕೀತು ಉಷೆ ಮೊದಲಾದ ಕವನಗಳು ಓದುಗರ ಗಮನ ಸೆಳೆಯುತ್ತವೆ. ವಿದ್ಯಾರ್ಥಿ, ಕವಿ ಚುಟುಕುಗಳು ಚುರುಕಾಗಿವೆ. ಸತತ ಅಧ್ಯಯನ ಹಾಗೂ ಭಾಷಯ ಬಳಕೆಯ ಕಡೆಗೆ ಕೊಡುವೆ ಗಮನಗಳಿಂದಾಗಿ ವೆಂಕಟರಾವ ಕುಲಕರ್ಣಿ ಅವರು ಇನ್ನು ಮುಂದಿನ ಕೃತಿಗಳಲ್ಲಿ ಯಶಸ್ಸನ್ನು ಅಧಿಕಗೊಳಿಸಲಿ ಎಂದು ಹಾರೈಸುವೆ ಎಂದು ಸರಿಯಾಗಿ ಹೇಳಿದ್ದಾರೆ.

ಶ್ರೀ ಬಿ.ಮಹಾದೇವಪ್ಪನವರು ಮುನ್ನುಡಿಯಲ್ಲಿ ವೇಣಿವೆಂಕಟ ಕಾವ್ಯನಾಮದ ಶ್ರೀ ವೆಂಕಟರಾವ ಕುಲಕರ್ಣಿ ಅವರು ಮುಂಜಾವಿನ ಮಂಜು ಎಂಬ ತಮ್ಮ ಪ್ರಥಮ ಕವನ ಸಂಕಲನವೊಂದನ್ನು ಕನ್ನಡ ಸಾಹಿತ್ಯ ಲೋಕಕ್ಕೆ ಅರ್ಪಿಸುತ್ತಿರುವರು. ಉದಯೋನ್ಮುಖರೂ, ತರುಣರೂ ಅವರಾಗಿರುವುದರಿಂದ ಬಾಳಿನ ಬಿಸಿಲುಣ್ಣದ ನೇತಿ–ಪ್ರೀತಿಗಳ ಗಾಳಿ ತಾಕದ ಮೊಗ್ಗೆಯ ಅವಸ್ಥೆಯಲ್ಲಿಯೇ ಇದ್ದಾರೆಂದು ತಾಕದ ಮೊಗ್ಗೆಯ ಅವಸ್ಥೆಯಲ್ಲಿಯೇ ಇದ್ದಾರೆಂದು ಭಾವಿಸಬೇಕಾಗುತ್ತದೆ. ಆದರೂ ಸೋದರ ಮಾವ ಮತ್ತು ನನ್ನ ಬಹುದಿನಗಳ ಸ್ನೇಹಿತ ಶ್ರೀ ರಂಗರಾವ ಕುಲಕರ್ಣಿ ಮುಷ್ಠೂರ ಅವರಿಂದ ಸಾಹಿತ್ಯ ದೀಕ್ಷಾ ಪ್ರೇರಣೆಯನ್ನು ಪಡೆದು ಕಾವ್ಯ ಕ್ಷೇತ್ರದಲ್ಲಿ ಹೆಜ್ಜೆ ಇಡಲು ಮುನ್ನಡೆದಿದ್ದಾರೆ ಎಂದು ಅವರನ್ನು ಹಾರೈಸಿದ್ದಾರೆ. ಗೊ.ರು. ಚನ್ನಬಸಪ್ಪ ಅವರು ಮುಂಜಾವಿನ ಮಂಜು ಕಾವ್ಯ ಸಂಸ್ಕಾರದ ಭಾವಜೀವಿ ಶ್ರೀ ವೇಣಿವೆಂಕಟ ಅವರ ಚೊಚ್ಚಲು ಕವನ ಸಂಗ್ರಹ ಇಲ್ಲಿರುವ ಕವನಗಳಲ್ಲಿ ಕವಿಯ ಭಾವಲಹರಿಯ ಸರಳ ವಿಹಾರವನ್ನು ಕಾಣಬಹುದು.

ವಸಂತದ ನೆನಪು ಮೈಲಿಗೆಯ ಮನ ಹಾಡದ ಹಾಡು ಶಿಕ್ಷಕರ ದಿನಾಚರಣೆ ಮೊದಲಾದ ಕವನಗಳು ಗಮನ ಸೆಳೆಯುತ್ತವೆ. ಅನಂತ ಸೃಷ್ಟಿ ವಿಷ, ಒಲುಮೆ, ಅಂತರಂಗ ಶುದ್ಧಿಗಳ ಸುತ್ತ ಹೆಣೆದಿರುವ ಈ ಭಾವಗೀತೆಗಳ ಸಹಜವಾಗಿ ಮೂಡಿಬಂದಿವೆ ಎಂದು ಹಾರೈಸಿದ್ದಾರೆ. ಒಟ್ಟಿನಲ್ಲಿ ಈ ಕವನ ಸಂಕಲನದಲ್ಲಿಯ ಕವನಗಳು ಸರಳ ಸುಂದರ ಭಾಷಾ ಶೈಲಿಯಲ್ಲಿ ಕವಿಯ ಭಾವನೆಗಳ ಭಾವ ಲಹರಿಯಾಗಿ ಮೂಡಿ ಬಂದು ಕವನಗಳಾಗಿವೆ.

**ಶರಣಪ್ಪ ತೋಟದ**

ಶರಣಪ್ಪ ತೋಟದ 1980 ಅವರು ನವಭಾರತ ಸಂಘ ತಿಮ್ಮಾಪುರ ರಂಗಂಪೇಟೆಯಿಂದ

ಹೂಬುಟ್ಟಿ ಕವನ ಸಂಕಲನವನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಈ ಕವನ ಸಂಗ್ರಹದಲ್ಲಿ 44 ಕವನಗಳಿವೆ. ಸುಮಾರು 31 ಕವಿಗಳ ಕವನಗಳು ಈ ಸಂಗ್ರಹದಲ್ಲಿವೆ.

1. ತವರ ಹರಸಮ್ಮ

– ಸುಖಾನಂದ ತೋಟದ

ದಾಸವಾಳದ ಹೂ
ದ್ಯಾಸದಲ್ಲಿ ತಂದಿನಿ
ಬ್ಯಾಸರದ ನಿಟ್ಟುಸಿರು
ಬಿಡಬ್ಯಾಡ ನನ್ನವ್ವ
ತುಂಬಿದ ಮನಿಯಾಗ
ಚೆಂದುಳ ಚಲುವಮ್ಮ
ಗಂಧದ ಕೊರಡಿನ್ಹಾಂಗ
ನೀ ಬಾಳಿ ಬೆಳಗಮ್ಮ॥

ಈ ಕವನದಲ್ಲಿ ಕವಿ ಸುಖಾನಂದ ತೋಟದವರು ತವರ ಮನೆಯನ್ನು ಹರಸಿ ಹಾಡಿದ್ದಾರೆ. ಇಲ್ಲಿ ಕವಿಗಳು ಸಮಾಜ, ಜಾತಿ, ಧರ್ಮ, ಸಂಸ್ಕಾರ, ಭ್ರಷ್ಟಾಚಾರ, ಬಡತನ, ದೇಶಭಕ್ತಿ ಹೀಗೆ ಅನೇಕ ವಿಷಯಗಳ ಕುರಿತು ಬರೆಯಲು ಪ್ರಯತ್ನಿಸಿರುವರು.

**ಎ.ಕೃಷ್ಣಸುರಪುರ, ಕೆ.ವೀರಪ್ಪವಡವಡಗಿ**

ಎ.ಕೃಷ್ಣಸುರಪುರ ಹಾಗೂ ಕೆ. ವೀರಪ್ಪ ವಡವಡಗಿಯವರ ಪರಿಚಯವನ್ನು ನಾವು ಈಗಾಗಲೇ ಆಯಾ ವಿಭಾಗಗಳಲ್ಲಿ ಮಾಡಿಕೊಂಡಿದ್ದೇವೆ. ಪ್ರಸ್ತುತ ಶ್ವೇತ ಪಕ್ಷಿ ಎಂಬ ಕವನ ಸಂಕಲನ 44 ಕವಿಗಳ 44 ಕವನಗಳ ಒಳ ಸಾಮಾಜಿಕ ದೃಷ್ಟಿಕೋನ ಮುಂತಾದ ವಿಚಾರಗಳು ಒಳಗೊಂಡಿವೆ. ಕೆಲವು ಕವನಗಳು ಈ ಕೆಳಗಿನಂತಿವೆ.

1. ನಿದ್ದೆ ತೊರೆದೆದ್ದೇಳಿ

– ಚಕ್ರ

ತರುಣ ಪೀಳಿಗೆ ಮಾತೃ ಸೇವೆಗೆ
ನಿದ್ದೆ ತೊರೆದೆದ್ದೇಳಲಿ
ಹೆಪ್ಪುಗಟ್ಟಿದ ರಕ್ತ ಕರಗಲಿ
ಕುದಿದು ನರದಲ್ಲಿ ಹರಿಯಲಿ
ಜಾತಿ ದ್ವೇಷಗಳೆಲ್ಲ ಅಳಿಯಲಿ
ಕೀರ್ತಿಯಾಸೆಯ ತೊಲಗಲಿ
ನಮ್ಮ ನಾಡಿನ ಮೂಲೆ ಮೂಲೆಗೂ
ಪ್ರೀತಿಯುಕ್ಕುತೆ ಹರೆಯಲಿ॥

ಈ ಕವನ ದೇಶಾಭಿಮಾನದ ಕಿಚ್ಚು ಎತ್ತಿ ತೋರುತ್ತಿದೆ

2. ಹೂವಿನ ಬನದಾಗ

ಹೂವಿನ ಬನದಾಗ ಅರಸೂತ ಬರುವಾಗ
ಹೂವಿನ ಕಂಪು ಚೆಲ್ಲಿತ ನನ ನಲ್ಲೆ
ಮುತ್ತಿನ ಸರವ ಕೊಡುಬಾರೆ
ನಲ್ಲ ಕಾದಿಹನೆಂದು ಕಳ್ಳ ಹೆಜ್ಜೆಹನಿಟ್ಟು
ಮೆಲ್ಲನೆ ಮೆಲ್ಲನೆ ಬರುವಾಗ ನನ ನಲ್ಲೆ
ಮುಳ್ಳಿನ ಕಂಟಿ ಎಳೆದಿತ್ತ
ಚಂದ್ರಕಾಳಿಯ ಸೀರಿ ನಡೆವಿಗೆ ಸುತಿಗೊಂಡು
ನಲಿನಲಿಯುತ್ತ ಬರುವಾಗ ನನ ನಲ್ಲೆ
ಕುಸುಮಗಳು ಅರಳಿ ನಿಂತಾವ॥

ಈ ಕವನದಲ್ಲಿ ಕವಿ ಪ್ರೇಮದ ವರ್ಣನೆಯನ್ನು ಮಾಡಿದ್ದಾರೆ.

ಈ ಕವನ ಸಂಕಲನವನ್ನು ಕುರಿತು ಅಷ್ಟಾವಧಾನಿ ನರಸಿಂಹಶಾಸ್ತ್ರಿ ಅವರು ಪ್ರಸ್ತುತ ಕವನ ಸಂಕಲನದ ಎಲ್ಲಾ ಕೃತಿಗಳನ್ನು ನೋಡಿದರೆ ಅವುಗಳಲ್ಲಿ ಇದೇ ಭಾವ ಅಂತರಾತ್ಮದ ಕೂಗು, ನರನಿಂದ

ನಾರಾಯಣನಾಗುವ ಬಗೆ ಶುದ್ಧ ಸಾತ್ವಿಕ ಪ್ರೇಮದ ವರ್ಣನೆ, ಶರಣಾಗತಿ, ಆತ್ಮೋದ್ಧಾರದ ಪ್ರಾಮಾಣಿಕ ಪ್ರಯತ್ನ, ಆಧ್ಯಾತ್ಮಿಕ ವಿಚಾರ, ದೇಶಾಭಿಮಾನ ಮತ್ತು ಸಮಾಜೋದ್ದಾರ ಮೊದಲಾದ ದೃಷ್ಟಿಕೋನಗಳಿಂದ ರಚಿತವಾದ ವಿವಿಧ ಕವಿಗಳ ಕೃತಿಗಳು ಪಿಯೂಷ ವರ್ಷದಷ್ಟೇ ನನ್ನ ಹೃದಯಕ್ಕೆ ಆನಂದವನ್ನು ತಂದು ಕೊಟ್ಟಿದೆ. ಶೈಶವಾವಸ್ಥೆಯಲ್ಲಿರುವ ಈ ಸಂಘದಿಂದ ಮೊದಲನೆಯ ಕುಸುಮವಾಗಿ ವಿಕಸಿತವಾಗಿರುವ ಶ್ವೇತ ಪಕ್ಷಿ ಎಂಬ ಕವನ ಸಂಕಲನವೇ ಈ ಉತ್ತಮ ಮಟ್ಟದಲ್ಲಿರುವಾಗ ಭವಿಷ್ಯದಲ್ಲಿ ಇನ್ನೂ ಅನೇಕ ಕಾವ್ಯಗಳು, ಪ್ರಬಂಧಗಳು, ನಾಟಕಗಳು, ವಿಮರ್ಶೆಗಳು ಹೊರ ಬೀಳುವುದರಲ್ಲಿ ನನಗೆ ಸುತಾರಂ ಸಂಶಯವಿಲ್ಲ ಎಂದಿದ್ದಾರೆ.

**ಶರಣಗೌಡ ಪಾಟೀಲ, ಶೇಖರಯ್ಯ ಕಳ್ಳೀಮಠ** ಅವರ ಕವನಗಳನ್ನು ಮಾತು ಮೌನದ ಮಧ್ಯ ಎಂಬ ಕವನ ಸಂಕಲನದಲ್ಲಿ ಕಾಣಬಹುದು. ಇಲ್ಲಿ ಬರುವ ಕವನಗಳು ಸರಳ, ಸುಂದರ ಹಾಗೂ ಆಡು ಭಾಷೆಯ ಸೊಗಡಿನಲ್ಲಿವೆ.

ಮಾನವೀಯ ಮೌಲ್ಯಗಳು ಸ್ತ್ರೀಯರ ಹಾಗೂ ದಲಿತ ವರ್ಗಗಳ ಶೋಷಣೆ, ಸ್ವಾರ್ಥ ರಾಜಕಾರಣಿಗಳು ವಾಸ್ತವಿಕ ಪ್ರಪಂಚದ ನಿಜಾಂಶಗಳು ಇಲ್ಲಿಯ ಕವನಗಳಲ್ಲಿ ಅಡಕವಾಗಿವೆ. ಶ್ರೀ ಶೇಖರಯ್ಯ ಕಳ್ಳಿ ಮಠರವರು ಬಿ.ಕಾಂ.ಪದವೀಧರರಾಗಿದ್ದು ಸಾಹಿತ್ಯ ಪ್ರೇಮಿಗಳು, ಸಾಹಿತ್ಯ ಆರಾಧಕರಾಗಿದ್ದು ಸೇಡಂ ತಾಲೂಕಿನ ವಾಸವದತ್ತಾ ಸಿಮೆಂಟ ಕಂಪನಿಯ ಪ್ಯಾಕಿಂಗ ಪ್ಲಾಂಟಿನಲ್ಲಿ ಕೆಲಸ ನಿರ್ವಹಿಸುತ್ತಿದ್ದರು.

ಈ ಸಂಕಲನದ ಮೊದಲ 12 ಕವನಗಳು ಶ್ರೀ ಕಳ್ಳಿಮಠರವರದು. ಹೆಣ್ಣು, ಪ್ರೇಮ, ಆಧ್ಯಾತ್ಮ ಲೋಕಜ್ಞಾನ, ಕಾರ್ಮಿಕರ ಬಗ್ಗೆ ಕಳಕಳಿ ಮುಂತಾದ ವಿಷಯಗಳನ್ನು ತಮ್ಮ ಕವಿತೆಯಲ್ಲಿ ವ್ಯಕ್ತ ಪಡಿಸಿದ್ದಾರೆ.

ಅರಿಕೆ ಎನ್ನುವ ಕವನದಲ್ಲಿ ಸುಸಂಸ್ಕೃತ ಭಾರತೀಯ ನಾರಿಯ ವೇಷ ಭೂಷಣ ವಿಚಾರವನ್ನು ವ್ಯಕ್ತ ಪಡಿಸಿದ್ದಾರೆ.

ಅರಿಕೆ

ಓ ಹೆಣ್ಣೆ
ಎಲ್ಲಿ ಮರೆತೆ ನೀ ಲಜ್ಜೆ ಅಂಜಿಕೆ?
ಕೈಯಲ್ಲಿ ಬಳೆಯಿಲ್ಲ ಹಣೆಯಲ್ಲಿ ತಿಲಕವಿಲ್ಲ
ಮೂಗಿಗೆ ಮೂಗುತಿ ಮೊದಲೇ ಇಲ್ಲ
ತಿಳು ಬಟ್ಟೆಯ ಧರಿಸಿ ತುಂಬಿದೆವ್ವನದ ಮೆರೆಸುವಿ ಏಕೆ?
ಇದು ಭಾರತಾಂಬೆಗೆ ತರವಲ್ಲ
ನೀನು ಹೆಣ್ಣಾಗಿ ಹುಟ್ಟಿದಾಗಲೇ ಅರ್ಪಿತವಾಗಿರುವ
ಒಬ್ಬ ನಲ್ಲನಿಗೆ
ನಿನ್ನ ಮಧುರ ಸುಖವನ್ನೆಲ್ಲ ಮೀಸಲಾಗಿರಿಸು
ನಿನಗೊಲಿವ ನಲ್ಲನಿಗೆ||

ಶರಣಗೌಡ ಪಾಟೀಲರು ಮೂಲತಃ ಜೇವರ್ಗಿ ತಾಲೂಕಿನ ಜೈನಾಪೂರ ಗ್ರಾಮದವರು. ಎಂ.ಕಾಂ.ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ಪಾಸು ಮಾಡಿ ಸುರಪುರ ತಾಲೂಕಿನ ರಂಗಂಪೇಟೆಯಲ್ಲಿರುವ ಡಾ.ಅಂಬೇಡ್ಕರ ಕಾಲೇಜಿನ ವಾಣಿಜ್ಯಶಾಸ್ತ್ರದ ಉಪನ್ಯಾಸಕರಾಗಿದ್ದರು.

ಈ ಕವನ ಸಂಕಲನದಲ್ಲಿ ಶ್ರೀಯುತರ 20 ಕವನಗಳಿವೆ. ನಗಬೇಕೋ ಅಳಬೇಕೋ ಎಂಬ ಕವನದಲ್ಲಿ ಇಂದಿನ ಕುತಂತ್ರ ರಾಜಕಾರಣಿಗಳು ನಾಯಕರೆಲ್ಲರೂ ತಮ್ಮ ಕರ್ತವ್ಯ ಮರೆತು ವರ್ತಿಸುತ್ತಿರುವ ಸ್ಥಿತಿಗತಿಗಳ ಬಗ್ಗೆ ನಗಬೇಕೋ ಅಳಬೇಕೋ ಎಂದು ಕವಿ ಹೇಳುತ್ತಾರೆ.

ಮಂತ್ರಿಗಳೆಲ್ಲರೂ ಕಂತ್ರಿಗಳಾಗುತ್ತಿರುವದನು ನೋಡಿ
ರಕ್ಷಕರೆಲ್ಲರು ಭಕ್ಷಕರಾಗುತ್ತಿರುವಹನು ನೋಡಿ
ನಾಯಕರೆಲ್ಲರೂ ನಾಯಿಗಳಾಗಿರುವದನ್ನು ನೋಡಿ
ಭೋದನೆ ಮಾಡುವರು ಸಾಧನೆ ಮರೆಯುವದನು
ನೋಡಿ ನಗಬೇಕೋ ಅಳಬೇಕೋ?
ಮಡದಿ ಮಾತನು ಕೇಳಿ ಹಡೆದ ತಾಯಿಗೆ ಹೊಡೆದು

ಪಡೆದ ತಂದೆಗೂ ಬಡಿದು ಮುಗ್ಧ ವೇಷ ತೊಟ್ಟು

ಮೂರ್ಖರಂತೆ ವರ್ತಿಸುವ ಮೂಢ ಮನುಜರ

ಕಂಡು ನಗಬೇಕೋ ಅಳಬೇಕೋ॥

ಈ ಕವನ ಸಂಕಲನವನ್ನು ಕುರಿತು ಶ್ರೀ ಕೆ.ಎಲ್.ಚವ್ಹಾಣರು ಹಿನ್ನುಡಿಯಲ್ಲಿ ಉದಯೋನ್ಮುಖ ಬರಹಗಾರರಾದ ಶ್ರೀ ಶರಣಗೌಡ ಪಾಟೀಲ ಮತ್ತು ಶೇಖರಯ್ಯ ಕಳ್ಳಿಮಠ ವಿರಚಿತ ಮಾತು ಮೌನದ ಮಧ್ಯೆ ಕವನ ಸಂಕಲನದಲ್ಲಿ ಕವಿತೆಗಳು ಸರಳವಾಗಿದ್ದು ನೇರ ನಿರೂಪಣೆಯೊಂದಿಗೆ ಆಡು ಭಾಷೆಯ ಸೊಗಡು ಮನ ಸೂರೆಗೊಳ್ಳುವಂತಿದೆ. ನಿನಗಿಲ್ಲವೇ ಸ್ವಾತಂತ್ರ್ಯ ಕವಿತೆಯಲ್ಲಿ ಹೆಣ್ಣಿಗೆ ಎಷ್ಟು ಸ್ವಾತಂತ್ರ್ಯ ಕೊಟ್ಟರು ಸಾಲದು ಎನ್ನುವ ಮಾತು ಒಪ್ಪಿಕೊಳ್ಳುವಂತಹದು ಪಾಟೀಲರ ನಾಸ್ತಿಕ ನಾನಾದಾಗ ಕವಿತೆಯಲ್ಲಿ ಪ್ರಕೃತಿಯ ವೈಚಿತ್ರ್ಯ ಜೊತೆಗೆ ವಿಶಾಲ ಸೈದ್ಧಾಂತಿಕ ಕಲ್ಪನೆ ಕಾಣಬಹುದಾಗಿದೆ. ವಾಸ್ತವಿಕ ಪ್ರಪಂಚದಲ್ಲಿನ ಸಿಹಿ ಕಹಿ ಸತ್ಯಗಳು ವಿಚಿತ್ರ ಸತ್ಯದಲ್ಲಿ ವ್ಯಂಗವಾಗಿ ಪ್ರಕಟಗೊಂಡಿವೆ. ಕನ್ನಡ ಕವಿತೆಯಲ್ಲಿ ಭಾಷಾಭಿಮಾನ ವ್ಯಕ್ತವಾದರೆ ಭಾರತಿಯಲ್ಲಿ ದೇಶಾಭಿಮಾನ ಚಿತ್ರಿತಗೊಂಡಿದೆ ಎಂದು ಸರಿಯಾಗಿ ಹೇಳಿದ್ದಾರೆ.

ಮುನ್ನುಡಿಯಲ್ಲಿ ಡಾ.ವಾಸುದೇವ ಅಗ್ನಿಹೊತ್ರಿಯವರು ನನ್ನ ವಿದ್ಯಾರ್ಥಿ ಮಿತ್ರರಾದ ಶ್ರೀ ಶರಣಗೌಡ ಪಾಟೀಲರು ಕವಿಗೊಷ್ಟಿಗಳಲ್ಲಿ ಕನ್ನಡ ಕವಿತೆಗಳನ್ನು ವಿದ್ಯಾರ್ಥಿ ದೇಸೆಯಿಂದಲೇ ವಾಚನ ಮಾಡಿ ಸೇಡಂ ಗುಲಬರ್ಗಾ ಕಾವ್ಯ ಪ್ರೀಯರಿಗೆ ಆಪ್ತರಾಗಿದ್ದಾರೆ. ಈ ಹಿಂದೆಯೇ ಆರಂಭ ಮೊಗ್ಗಯಮಾಲೆ ಹಾಗೂ ಯುವ ಸಂಗಮ ಮೊದಲಾದ ಕವನ ಸಂಕಲನಗಳಲ್ಲಿ ಮತ್ತು ಸ್ಥಳೀಯ ಪತ್ರಿಕೆಗಳಲ್ಲಿ ತಮ್ಮ ಉದಯೋನ್ಮುಖ ಪ್ರತಿಭೆ ಬೆಳಗಿದ್ದಾರೆ ಎಂದು ಸರಿಯಾಗಿ ಹಾರೈಸಿದ್ದಾರೆ.

**ವಿರೇಶ ಹಿರೇಮಠ ಬಸವ ರಾಜಸ್ವಾಮಿ ರುಮಾಲ ಮತ್ತು ಗೌತಮ** ಈ ಮೂವರು ಮಿತ್ರರ ಪ್ರಾಯದ ಅನಿಸಿಕೆಗಳು ಇಲ್ಲಿ ಕವನಗಳಾಗಿ ಮೂಡಿವೆ. ಇಲ್ಲಿನ ಕವನಗಳೆಲ್ಲವು ಪ್ರೇಮ ಕವನಗಳಾಗಿವೆ.

1. ತ್ರಿವೇಣಿ ಸಂಗಮ

1. ವಿರೇಶ ಹಿರೇಮಠ : ವಿರೇಶ ಹಿರೇಮಠರವರ ಪರಿಚಯವನ್ನು ಗದ್ಯ ಹಾಗೂ ಪದ್ಯ ಸಾಹಿತ್ಯ ವಿಭಾಗಗಳಲ್ಲಿ ಮಾಡಿಕೊಂಡಿದ್ದೇವೆ. ವೃತ್ತಿಯಲ್ಲಿ ಶಿಕ್ಷಕರಾಗಿದ್ದ ಶ್ರೀ ವಿರೇಶರವರು ಶೃಂಗಾರ ಶೈಲಿಯ ಪ್ರಣಯ ಗೀತೆಗಳನ್ನು ಸುಂದರವಾಗಿ ತ್ರೀವೆಣಿ ಸಂಗಮದಲ್ಲಿ ರಚಿಸಿದ್ದಾರೆ. ಶ್ರೀಯುತರ ಒಟ್ಟು 6

ಕವಿತೆಗಳಿವೆ.

1. ಸಿಂಗಾರಿ ಸಿರಿಗೌರಿ : ಇದು ವಿರೇಶ ಹಿರೇಮಠರವರ ಮೊದಲ ಕವನ. ಪ್ರಣಯದ ಮಧುರ ಭಾವನೆಗಳು ಈ ಕವನದಲ್ಲಿ ಅಡಕವಾಗಿವೆ.

ನನ್ನೆದೆಯ ವನದಲ್ಲಿ
ಚೆಲು ನವಿಲಿನಂದದಲಿ
ಗರಿಗೆದರಿ ಕುಣಿಯುತ್ತ ಸಿರಿಗೌರಿ ಬಾರೆ
ನನ್ನೆದಯ ಮಾಮರದಿ
ಕೋಗಿಲೆಯ ಇಂಚರದಿ
ಪಂಚಮದ ಹಾಡುತ್ತ ಮನ ತಣಿಸು ಬಾರೆ
ನನ್ನೆದೆಯ ಬಾಂದಳದಿ
ಪೂರ್ಣಿಮೆಯ ಶಶಿ ತೆರದಿ
ಸೊಗದ ಬೆಳುದಿಂಗಳನು ಹರಡತ್ತ ಬಾರೆ
ನನ್ನೆದೆಯ ಕಮಲದಲಿ
ಮರಿದುಂಬಿಯಂದದಲಿ
ಮಧು ಹೀರಿ ಹಾರುತ್ತ ಝೇಂಕರಿಸು ಬಾರೆ।।

2. ಬಸವ ರಾಜಸ್ವಾಮಿ ರುಮಾಲ :

ಬಸವರಾಜ ಸ್ವಾಮಿ ರುಮಾಲರವರು ಸುರಪುರ ತಾಲೂಕಿನ ತಿಮ್ಮಾಪುರದವರು ಅಲ್ಲಿಯ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿದ್ದು ಇವರ ಹಲವಾರು ಕವನಗಳು ಆಕಾಶವಾಣಿಯಿಂದ ಪ್ರಸಾರಗೊಂಡಿವೆಯಲ್ಲದೆ ಹಲವಾರು ಪತ್ರಿಕೆಗಳಲ್ಲಿಯೂ ಪ್ರಕಟಗೊಂಡಿವೆ.

ಪ್ರಸ್ತುತ ತ್ರಿವೇಣಿ ಸಂಗಮದಲ್ಲಿ ಶ್ರೀಯುತರ ಒಟ್ಟು ಏಳು ಕವನಗಳಿವೆ.

ಯಾರನರಸುವೆ?
ನವಿಲಿನ ನಡುಗೆಯ

ನಲ್ಮೊಗದ ಕನ್ನೆ

ರಾಗ ರಂಜಣಿಗೆಯ

ಕೆನೆ ಹಾಲ್ಗೆನ್ನೆ

ಪ್ರಣಯ ಗೀತೆಗೆ

ತುಟಿಯ ತಾಳ ಬಡೆದು

ಮೋಹ ಮಂಚೂಣಿಗೆ

ಹೂ ಮಂಚ ಹಿಡಿದು।।

**ಗೌತಮ**

ಗೌತಮ ಎಂಬ ಕಾವ್ಯನಾಮದಿಂದ ಬರೆಯುವ ಶರಣಪ್ಪ ತೋಟದ ಇವರು ತಿಮ್ಮಾಪುರದವರು ನವ್ಯ ಬಂಡಾಯ, ಜಾನಪದ ಸಾಹಿತ್ಯ ದತ್ತ ವಿಶೇಷ ಒಲವಿರುವ ಇವರು ಹೂಬುಟ್ಟಿ ಎಂಬ ಸಂಕಲನ ಸಂಪಾದಿಸಿದ್ದಾರೆ. ಪ್ರಸ್ತುತ ತ್ರಿವೇಣಿ ಸಂಗಮ ಎಂಬ ಕವನ ಸಂಕಲನದಲ್ಲಿ ಶ್ರೀಯುತರು

1. ನಲಿದು ಬಾರಾ ಹೃದಯಕ್ಕೆ

ಬಾಳ ದಾರಿಗೆ ಹೂವ ಚೆಲ್ಲುವ

ಮಧುರ ಗೀತೆಯು ಹಾಡಿದೆ

ಹೃದಯ ಕಮಲವು ಅರಳಿ ನಿಲ್ಲುತ

ನಿನ್ನ ಸ್ವಾಗತ ಬಯಸಿದೆ

ಮಧುವು ತುಂಬಿದ ಕೆಂಪು ಅದರಕೆ

ಬಯಸಿ ದುಂಬಿಯು ಹಾರಿದೆ

ತನುವು ತಣಿದಿದೆ ಮನದ ಕುಣಿತಕೆ

ನಿನ್ನ ನೆನಪದು ಕಾಡಿದೆ।।

ಈ ಕವನ ಸಂಕಲನವನ್ನು ಕುರಿತು ಮುನ್ನುಡಿಯಲ್ಲಿ ಸುಮತೀಂದ್ರ ನಾಡಿಗ ಅವರು, ಮೂವರು ಕವಿಗಳ ತ್ರಿವೇಣಿ ಸಂಗಮಕ್ಕೆ ಮುನ್ನುಡಿಯನ್ನು ಬರೆಯುವುದು ಸಂತೋಷದ ಕೆಲಸ ಈ ಮೂವರನ್ನು ಕಣ್ಣೆದುರಿಗೆ ನೋಡಿದ ನೆನಪು ಇಲ್ಲ, ಇವರ ಹಿನ್ನೆಲೆಗಳು ಗೊತ್ತಿಲ್ಲ, ಇವರು ಬೆಂಗಳೂರಿನಿಂದ ಸಾಕಷ್ಟು

ದೂರದಲ್ಲಿರುವವರು ಆದರೆ ಇವರ ಕವಿತೆಗಳನ್ನು ನೋಡಿದಾಗ ಇವರು ನನ್ನ ಸಂಬಂಧಿಕರೆಂದು ಗೊತ್ತಾಯಿತು. ಕವಿ ಜಾತಿಗೆ ಸೇರಿದ ಈ ಮೂವರಿಗೆ ಈ ಮುನ್ನುಡಿಯ ಮೂಲಕ ಸ್ವಾಗತಿಸುತ್ತ ಒಳ್ಳೆಯದಾಗಲಿ ಎಂದು ಹಾರೈಸುತ್ತೇನೆ.

ಇಲ್ಲಿ ಕವಿತೆಗಳಲ್ಲಿ ಎಲ್ಲವೂ ಪ್ರೇಮ ಕವನಗಳೇ ಎನ್ನುವುದನ್ನು ಗಮನಿಸಿದ್ದೇನೆ. ಈ ಎಲ್ಲ ಕವಿತೆಗಳಿಗೂ ಭಾವಗೀತೆಯ ಬಂಧಗಳನ್ನೇ ಆರಿಸಿ ಕೊಂಡಿರುವುದನ್ನು ನೋಡಿದಾಗ , ಇವರು ನವ್ಯ ಕಾವ್ಯದಿಂದ ಬೇಕೆಂದೇ ದೂರವಾಗಿದ್ದಾರೆ, ಅನಿಸುತ್ತದೆ. ನವ್ಯ ಕಾವ್ಯಕ್ಕೆ ಬೇಕಾದ ಬುದ್ಧಿಯ ಮೇಲಿನ ಹಿಡಿತಕ್ಕಿಂತ ನವ್ಯ ಕಾವ್ಯದ ವಿಚಾರ ಪ್ರಧಾನತೆಗಿಂತ ಭಾವನೆಗಳ ಸಹಜ ಅಭಿವ್ಯಕ್ತಿಯೇ ಈ ಕವಿಗಳಿಗೆ ಪ್ರಿಯವಾಗಿದೆ ಎಂದು ತೂಕಬದ್ಧವಾದ ಮಾತುಗಳನ್ನು ಹೇಳಿದ್ದಾರೆ.

**ವೆಂಕಟರಾವ ಕುಲಕರ್ಣಿ**

ಶ್ರೀಯುತರ ಪರಿಚಯವನ್ನು ನಾವು ಈಗಾಗಲೇ ಮಾಡಿಕೊಂಡಿದ್ದೇವೆ. ಶ್ರೀಯುತರ ಮುಂಜಾವಿನ ಮಂಜು ಎಂಬ ಕವನ ಸಂಕಲನದ ಪರಿಚಯವನ್ನು ನಾವು ಈಗಾಗಲೇ ಮಾಡಿಕೊಂಡಿದ್ದೇವೆ. ಈಗ ಅವರ ಇನ್ನೊಂದು ಸಂಪಾದಿತ ಕವನ ಸಂಕಲನವಾದ ಗಿರಿ ಕೋಗಿಲೆಗಳು ಪರಿಚಯವನ್ನು ಈಗ ಮಾಡಿಕೊಳ್ಳಲಾಗುವುದು.

1. ಗಿರಿಕೋಗಿಲೆಗಳು (ಸಂ)

ಯಾದಗಿರಿಯ ಹತ್ತು ಕವಿಗಳ ಕವನಗಳನ್ನು ಒಂದೆಡೆಯಲ್ಲಿ ಸೇರಿಸಿ ಗಿರಿ ಕೋಗಿಲೆಗಳು ಎಂಬ ಕವನ ಸಂಕಲನವನ್ನು ಪ್ರಕಟಿಸಿದ್ದಾರೆ. ಈ ಕವನ ಸಂಕಲನಲ್ಲಿ ಒಟ್ಟು 71 ಕವನಗಳಿವೆ. ಇಲ್ಲಿಯ ಕವಿಗಳು ವೃತ್ತಿಯಲ್ಲಿ ಹೆಚ್ಚಿನವರು ಶಿಕ್ಷಕರಾಗಿದ್ದು ಪ್ರವೃತ್ತಿಯಲ್ಲಿ ಸಾಹಿತಿಗಳಾಗಿದ್ದಾರೆ. ವಿಭಿನ್ನ ಕವಿಗಳ ವಿಭಿನ್ನಾಭಿರುಚಿಯ ಕವನಗಳನ್ನು ಇಲ್ಲಿ ಕಾರಣಬಹುದು.

ಹಿರಿಯ ಕವಿಗಳಾದ ನರಸಿಂಹಗುಪ್ತ ಬಳಿಚಕ್ರ, ಸಂಗಣ್ಣ ಹೋತಪೇಟ್, ಜ್ಞಾನೇಶ್ವರ ಸಂದೇನಕರ್ ವಿ.ಎಂ.ಪತ್ತಾರ, ಶ್ರೀಮತಿ ಜಯಶ್ರೀ ರಾಜಶೇಖರ ಚೌದ್ರಿ, ಶ್ರೀಮತಿ ಗಿರಿಜಾ ಇಟಗಿ, ಕುಪೇಂದ್ರ ವಟಾರ್, ವೆಂಕಣ್ಣ ಡೊಣ್ಣೆಗೌಡ, ಡಾ.ಸರ್ವೋದಯ ಶಿವಪುತ್ರ ವೆಂಕಟರಾವ್ ಕುಲಕರ್ಣಿ ಇವರೆಲ್ಲರ ಕೆಲವು ಕವನಗಳನ್ನು ಸಂಗ್ರಹಿಸಿ ಇಲ್ಲಿ ಪ್ರಕಟಿಸಲಾಗಿದೆ.

ಇಲ್ಲಿಯ ಕವನಗಳಲ್ಲಿ ಸಮಾಜದಲ್ಲಿಯ ಭ್ರಷ್ಟಾಚಾರ, ಧರ್ಮ, ಜಾತಿಯತೆ ದುಶ್ಚಟ, ಪ್ರೀತಿ, ಅನುಕಂಪ, ಸ್ವಾತಂತ್ರ್ಯ, ಶೋಷಿತ ಜನಾಂಗ ದೀನ ದಲಿತ, ರಾಜಕಾರಣ ನಗೆ-ಹನಿ, ಮುಗ್ಧ ಮಗು, ಜೀವನದ ಮೂಲ್ಯ, ಯುವಶಕ್ತಿ, ನಾಡು-ನುಡಿ ಹಬ್ಬ ಹರಿದಿನ ಮುಂತಾದ ವಿಷಯಗಳ ವಿಚಾರ ಇಲ್ಲಿ ಅಡಗಿವೆ. ಇಲ್ಲಿ ಬರುವ ಒಬ್ಬೊಬ್ಬ ಕವಿಗಳ ಬಗ್ಗೆ ಒಂದೊಂದಾಗಿ ನೋಡೋಣ.

ಯಾದಗಿರಿ ತಾಲೂಕಿನ ಹಿರಿಯ ಸಾಹಿತಿಗಳಲ್ಲಿ ಒಬ್ಬರಾದ ಶ್ರೀ ನರಸಿಂಹಗುಪತ್ತ ಬಳಿಚಕ್ರರು ಆದರ್ಶ ಶಿಕ್ಷಕರಾಗಿದ್ದವರು. ಈಗ ನಿವೃತ್ತಿ ಜೀವನ ನಡೆಸುತ್ತಿದ್ದಾರೆ. ತಾಲೂಕಿನ ಯುವ ಸಾಹಿತಿಗಳಿಗೆ ಮಾರ್ಗದರ್ಶಕರಾದ ಶ್ರೀಯುತರು ಸರಳ ಸಜ್ಜನರು

1. ಆಸಕ್ತಿ ಧೀಶಕ್ತಿ ಇನ್ನೆಲ್ಲಿ ಎಲ್ಲಿ?

ಸ್ವಾತಂತ್ರ್ಯವು ಜನ್ಮಸಿದ್ದಹಕ್ಕು
ಎಂದ ಲೋಕಮಾನ್ಯ ತಿಲಕರ
ಸ್ವಾತಂತ್ರ್ಯವೆಂದರೆ ಮನ ಬಂದಂತೆ
ಬಾಳ ಬಹುದು ಎಂದೆನಿಸಿತು ಮನ ಪುಲಕ॥
ಸಹಕಾರ, ಮಮಕಾರ
ನೆರವೀವ ಔದಾರ್ಯ
ಪರಿಶ್ರಮ ಮುಡಿತ
ಮರೆತ ಹೀನಗುಣಗಳ ಬೆರೆತ ॥
ಮನುಷ್ಯರು ನಾವು
ನೈಜ ಸ್ವಾತಂತ್ರ್ಯವ
ಹೇಗೆ ತಿಳಿದೇವು॥

ಹಿಂದೆ ನಮ್ಮ ದೇಶವನ್ನು ಬ್ರಿಟಿಷರ ಕಪಿಮುಷ್ಟಿಯಿಂದ ಮುಕ್ತಗೊಳಿಸಲು ಹಲವಾರು ಮಹನೀಯರು ತಮ್ಮ ಪ್ರಾಣಾರ್ಪಣೆ ಮಾಡಿದರು. ಸ್ವಾತಂತ್ರ್ಯವು ಜನ್ಮ ಸಿದ್ಧ ಹಕ್ಕು ಎಂಬ ಘೋಷಣೆ ಮೂಲಕ ತಿಲಕರು ಸ್ವಾತಂತ್ರ್ಯ ಪಡೆಯಲು ಕರೆ ಕೊಟ್ಟರು.

ಆದರೆ ಆ ಸ್ವಾತಂತ್ರ್ಯ ಇಂದು ಏನಾಗಿದೆ? ಸಹಕಾರ, ಮಮಕಾರ, ಪರಿಶ್ರಮಗಳನ್ನು ಮರೆತು

ನಾವು ಹೀನಗುಣಗಳಿಗೆ ಬೆರೆತು ಹೋಗಿದ್ದೇವೆ. ಭಾರತೀಯತೆಗಳನ್ನು ತೊರೆದು ಪಾಶ್ಚಾತ್ಯೀಕರಣದ ಥಳಕು ಬೆಳಕುಗಳಿಗೆ ಮಾರು ಹೋಗಿದ್ದೇವೆ ಎಂದು ಕವಿಗಳು ಕಳ-ಕಳಿ ವ್ಯಕ್ತ ಪಡಿಸುತ್ತಾರೆ.

ಸಂಗಮೇಶ ಎಂಬ ಕಾವ್ಯ ನಾಮದಿಂದ ಸಂಗಣ್ಣ ಹೋತಪೇಟ ಅವರು ಸಾಹಿತ್ಯ ಲೋಕದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು ಇವರ ಕಾವ್ಯ ಕವನಗಳಲ್ಲಿ ಹಾಸ್ಯ ಚಟಾಕಿ ಮಗುವಿನ ಮುಗ್ದತೆ ಸಾಮಾಜಿಕ ವಿಡಂಬನೆ ಅಡಗಿದೆ.

ಮಗು-ನಗು

ಮಕ್ಕಳಿರಲು ಮನೆ ಚಂದ<br>
ಮಕ್ಕಳು ನಕ್ಕಾಗ ಮನೆಯಂದ<br>
ನಗುತ್ತಿರಲು ಮಗು ನಗುವದು ಮನೆಯು<br>
ತೊದಲುತ್ತಾ ನಕ್ಕರೆ ಮಗುವು<br>
ತಾಯಿ-ತಂದೆಗೆ ತರುವುದು ಹರ್ಷವು<br>
ಅತ್ತರಾ ಮಗುವು ಬಹು ದುಃಖವು<br>
ಅಜ್ಜ ಅಜ್ಜಿಗೆ ಬೇಕು ಮಗುವು<br>
ಮಗುವಿನೊಂದಿಗೆ ತಾವು ಮಗುವು<br>
ಮಗುವಿನ ನಗುವು ತರುವುದು ವಿನೋದವು।।

ಹಾವ ಭಾವಗಳು ಯಾವ ರೀತಿ ಮನಕ್ಕೆ ಮುದ ನೀಡುತ್ತವೆ ಎಂಬುದನ್ನು ಕವಿ ಈ ಕವನದಲ್ಲಿ ತಿಳಿಸಿದ್ದಾರೆ.

ಶಾಂತ ಮನಸ್ಸಿನ, ಜ್ಞಾನೇಶ್ವರ ಸಂದೇನಕರ್ ಅವರು ವಿನಮ್ರ ಜೀವಿಗಳು, ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಗಳೇ ಇವರ ಹವ್ಯಾಸ.

1. ಹರಕೆ ಕುರಿ

ಮದುವೆಯ ಈ ಸಂಭ್ರಮ<br>
ಮಧುರ ಬಂಧದ ಸಂಗಮ<br>
ವರದಕ್ಷಿಣೆಯ ಮಹಾಸಂಗ್ರಾಮ

ಅಲ್ಲಿ ಹೆಣ್ಣಿನ ಮಾರಣ ಹೋಮ

ಏತಕ್ಕಾಗಿ ಈ ಹೆಣ್ಣಿನ ಜನುಮ

ಇದುವೆ ಏನು ಈ ಸಮಾಜದ ನಿಯಮ||

ಮದುವೆಯ ಚಪ್ಪರ ಇಲ್ಲಿಹುದು

ಬಾಳು ಸದಾ ಹರುಷದ ಹಸಿರಾಗಿರಲು

ವಾದ್ಯ ಮೇಳಗಳ ಘೋಷವು

ಬಾಳಲಿ ಮಂಗಲ ಜರುಗಲು

ಎರಡು ಮತ್ತೊಂದು ಸೇರಲು

ಮಗುವಿನ ಮುಗುಳ್ನಗೆ ಬೀರಲು||

ಈ ಕವನದಲ್ಲಿ ಕವಿಗಳು ಹೆಣ್ಣಿನ ಜೀವನದಗೋಳನ್ನು ಬಹಳ ಸುಂದರವಾಗಿ ತಿಳಿಸಿದ್ದಾರೆ.

ಮಾನಜ್ಞ ಎಂಬ ಅಂಕಿತನಾಮದ ಮೂಲಕ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿದ ವಿಠೋಬಾ ಎಂ. ಪತ್ತಾರ ಅವರು ಶಾರದಾಸುತ ಕಾವ್ಯನಾಮದ ಮೂಲಕ ಕವನಗಳ ರಚನೆ ಮಾಡಿದ್ದಾರೆ. ಇವರ ಕವನ, ತ್ರಿಪದಿ, ವೈಚಾರಿಕ ಲೇಖನಗಳು ಹಲವಾರು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ಶ್ರೀಯುತರು ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಯಾದಗಿರಿ ಕ್ಷೇತ್ರ ಸಮನ್ವಯಾಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿರುವರು. ಇವರು ಸರ್ಕಾರದ ವಿವಿಧ ಹುದ್ದೆಗಳಲ್ಲಿ ಸೇವಾನುಭವ ಹೊಂದಿದವರು.

ಜೀವನ ಮೌಲ್ಯಗಳ ದರ್ಶನ

ಶಿಸ್ತು ಸದ್ಗುಣ ಕ್ಷಮೆಗಳನ್ನು ನಿಷ್ಠೆಯಿಂದಲಿ ಕಲಿತು

ಸತ್ಯ ನೀತಿಯನ್ನು ಭೋದಿಸುವ ಶಿಕ್ಷಕರು

ನಿತ್ಯವೂ ಮೌಲ್ಯ ಮೌನಜ್ಞ||

ತಾ ಬದುಕಿ ತನ್ನೊಡನೆ ಇನ್ನೊಬ್ಬ ಇರಲೆಂಬ

ಶೋಭೆ ವಿಚಾರವನ್ನು ಸರ್ವಾಂಗ ತುಂಬಿರುವ

ವಿಭೂತಿ ಶಿಕ್ಷಕನು ಮೌನಜ್ಞ||[1]

ಶಿಕ್ಷಣದಿ ಶೀಲವಿರೆ ರಕ್ಷಣೆಯು ತಾನಹುದು

ಲಕ್ಷಣವು ಬಂದು ದೇಶದಾ ತುಂಬೆಲ್ಲ

ದಕ್ಷತೆಯ ನಿಲುವು ಮೌನಜ್ಞ॥

ವಿಜ್ಞಾನ ಸಾಹಿತ್ಯ ಸಂಸ್ಕೃತಿಯ ಒರೆಗಲ್ಲು

ಅಜ್ಞಾನದ ಕಳೆಯ ಕಿತ್ತೊಗೆಯುವ ಶಿಕ್ಷಣವು

ವೈಜ್ಞಾನಿಕ ಮೌಲ್ಯ ಮೌನಜ್ಞ॥

ಮೌನಜ್ಞ ಎಂಬ ಅಂಕಿತನಾಮದಿಂದ ರಚಿಸಿದ ಅವರ ತ್ರಿಪದಿಗಳು ಸರ್ವಜ್ಞನ ತ್ರಿಪದಿಗಳಂತೆ ಮೌಲ್ಯಯುತವಾದ ಸಾಮಾಜಿಕ ವಿಷಯಗಳನ್ನು ಒಳಗೊಂಡಿವೆ. ಶ್ರೀಯುತರು ಮೌನಜ್ಞ ಅಂಕಿತನಾಮದ ಮೂಲಕ 200ಕ್ಕೂ ಅಧಿಕ ವಚನಗಳ ರಚನೆ ಮಾಡಿದ್ದಾರೆ. ಶಿಕ್ಷಣದ ಮೌಲ್ಯ ಜಾತ್ಯಾತೀತ ಸಮಾಜ ಇವರ ವಚನಗಳಲ್ಲಿ ಕಂಡು ಬರುವ ಪ್ರಮುಖ ವಿಷಯಗಳಾಗಿವೆ.

ಯಾದಗಿರಿ ತಾಲೂಕಿನ ಶ್ರೀಮತಿ ಜಯಶ್ರೀ ರಾಜಶೇಖರ ಚೌಧರಿ ಹರಿತ ಬರಹದ ಕವಿಯತ್ರಿ ಪುರುಷ ಪ್ರಧಾನ ಸಮಾಜ ವ್ಯವಸ್ಥೆಯಲ್ಲಿಯ ಅಂಕು ಡೊಂಕುಗಳನ್ನು ತಿರಸ್ಕರಿಸುವ ಸ್ತ್ರೀವಾದಿ ಕವಿಯತ್ರಿ. ವೃತ್ತಿಯಿಂದ ಶಿಕ್ಷಕಿ ಪ್ರವೃತ್ತಿಯಿಂದ ಬರಹಗಾರ್ತಿ ಇವರ ಕವನ ಲೇಖನಗಳು ಪತ್ರಿಕೆ, ಆಕಾಶವಾಣಿಯಲ್ಲಿ ಪ್ರಕಟಗೊಂಡಿವೆ.

ಟೆನ್‌ಷನ್

ಆತ್ಮ ಒಂದು ಅಲೆದಾಡುತಿದೆ

ಶಾಂತಿಯ ಸುಳಿವಿಗಾಗಿ

ಕುರ್ಚಿಯ ಮೇಲೆ ಕುಮಾರಣ್ಣನಿಗೆ

ಗಣಿ ಹಗರಣವೇ ಒಂದು ಟೆನ್‌ಷನ್

ಆದರೆ ಕ್ಷಣಕ್ಷಣಕ್ಕೂ ಕುಗ್ಗಿಸುತ್ತಿರುವ

ಕುತಂತ್ರಗಳಿಗೆ ಮತ್ತೊಂದು ಟೆನ್‌ಷನ್

ಕೋಟ್ಯಾಧೀಶನಿಗೆ ಕಾಯುವ ಟೆನಷನ್

ಭೀಕ್ಷಾಧೀಶನಿಗೆ ಬದುಕುವ ಟೆನಷನ್॥[21]

ಟೆನಷನ್ ಎಂಬ ಕವಿತೆಯಲ್ಲಿ ಕವಿಯತ್ರಿ ಜೀವನದಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ತರಹದ

ಟೆನಷನ್ ಇರುತ್ತದೆ. ಈ ಟೆನಷನ್ ಪರಿಹಾರಕ್ಕೆ ಯಾವುದೇ ಮೆಡಿಸಿನ್ ಬೇಕಾಗಿಲ್ಲ, ಮೆಡಿಟೇಷನ್ ಇದಕ್ಕೆ ತಕ್ಕ ಪರಿಹಾರ ಎಂದು ಹೇಳಿದ್ದಾರೆ.

ಹರಿತ ಶೈಲಿಯ ಯುವ ಬರಹಗಾರರಲ್ಲಿ ಕುಪೇಂದ್ರ ವಠಾರ್ ಒಬ್ಬರು. ಬಡತನ, ಅನಕ್ಷರತೆ, ನಿರುದ್ಯೋಗ, ಹಸಿವಿನಂತಹ ಪ್ರಮುಖ ಸಮಸ್ಯೆಗಳಿಗೆ ಸಾಹಿತ್ಯದ ಮೂಲಕ ಪರಿಹಾರ ಕಂಡು ಕೊಳ್ಳುವ ಸರಳ, ಸಜ್ಜನಿಕೆಯ ಜೀವ. ಅಪರೂಪದ ವ್ಯಕ್ತಿತ್ವ:

ಲಂಚದ ಮಹಿಮೆ

ಲಂಚದಿ ಬಂದ ಹಣದಿ
ಕಲರ್ ಟಿವಿ ಕೊಂಡೇನಯ್ಯಾ
ಗುಡುಗು ಮಿಂಚಿಗೆ ಬಲಿಯಾಗಿ
ಸ್ಫೋಟಾಗಿ ಹೋಯಿತಯ್ಯಾ।
ಲಂಚದಿ ಬಂದ ಹಣದಿ
ಬಂಗಾರ ಕೊಂಡೆನಯ್ಯಾ
ಪಾಪ ಪರಿಹಾರಕ್ಕೆ ನದಿಯಲ್ಲಿ ಮುಳುಗಿದಾಗ
ನೀರಲ್ಲಿ ಹರಿದೋಯಿತಯ್ಯ॥

ಈ ಕವನದಲ್ಲಿ ಕವಿಗಳು ಲಂಚ ತೆಗೆದುಕೊಳ್ಳುವುದು ಮಹಾಪಾಪ ಎಂಬ ವಿಷಯವನ್ನು ವ್ಯಕ್ತಪಡಿಸುತ್ತಾರೆ. ನಾವು ಇನ್ನೊಬ್ಬರ ಕುತ್ತಿಗೆ ಕೊಯ್ಯುವ ಕೆಲಸ ಮಾಡಿದರೆ ನಮ್ಮ ಕುತ್ತಿಗೆ ಕೊಯ್ಯುವನು ಒಬ್ಬನಿದ್ದಾನೆ ಎಂದು ದೇವರ ಬಗ್ಗೆ ಎಚ್ಚರಿಕೆ ಇರಲಿ ಎಂಬ ಮಾತನ್ನು ತಿಳಿಸುತ್ತಾರೆ.

ಶ್ರೀಯುತ ಡಾ.ವೆಂಕಣ್ಣ ದೊಣ್ಣೆಗೌಡರು ಯಾದಗಿರಿ ಕೊಂಕಲ್ ಎಂಬ ಊರಿನವರು ವೃತ್ತಿಯಿಂದ ಉಪನ್ಯಾಸಕರು ಪ್ರವೃತ್ತಿಯಿಂದ ಸಾಹಿತ್ಯ ಉಪನ್ಯಾಸಕರು ಸಮಾಜದ ಸೂಕ್ಷ್ಮ ಓರೆ ಕೋರೆಗಳನ್ನು ತಿದ್ದಿ ಹೇಳುವ, ಕುಶಲ ಶೈಲಿಯ ಬರಹಗಾರರು :

ದೇವರು

ನಿನ್ನಲ್ಲಿ ದೇವರಾನ ತಿಳಿದು ನೋಡೋ
ಅಲ್ಲಿ ಇಲ್ಲಿ ಹುಡುಕಬೇಡ ನಿನ್ನಲ್ಲಾನೋ

ಗುಡಿ ಗುಂಡಾರ ಮಠಗಳಲ್ಲಿ ದೇವರಾನ

ವೃತಾ, ಪೂಜೆ ಮಾಡಿದರೆ ಒಲಿತಾನ

ಅಂತ ಹೇಳುವ ಷಂಡರಿಗೆ ಫಲ ಸಿಗುತಾದ

ಮೂಢರಾದ ಭಕ್ತರಿಗೆ ಕ್ಷೌರ ಆಗುತಾದ

ಸ್ವಾರ್ಥಕ್ಕಾಗಿ ಕಟ್ಟಿಸ್ಯಾರ ಗುಡಿ-ಗುಂಡಾರ

ದೇವರ ಹೆಸರಲ್ಲಿ ಶೋಷಣೆ ಮಾಡತಾರ

ದೇವರ ಸೇವೆಗೆ ಸ್ತ್ರೀ ಬೇಕೆಂದಾರ

ದೇವರಂಥ ಮುಗ್ದ ಮೂನಿನಿಯರನ ಭೋಗಿಸ್ಯಾರ

ಈ ಕವನದಲ್ಲಿ ದೇವರು ಎಲ್ಲಿಯೂ ಇಲ್ಲ, ನಿನ್ನಲ್ಲೆ ಇದ್ದಾನೆ ಅದನ್ನು ತಿಳಿದುಕೋ ಎಂದು ನಿಷ್ಟೆಯಿಂದ ಕೆಲಸ ಮಾಡಿ ಅದರಲ್ಲೇ ದೇವರನ್ನು ಕಾಣಿ ಎಂಬ ಸಂದೇಶ ಕೊಡುತ್ತಾರೆ.

ಶ್ರೀಮತಿ ಗಿರಿಜಾ ಇಟಗಿಯವರು ವೃತ್ತಿಯಿಂದ ಶಿಕ್ಷಕಿ, ಇವರ ಕವನಗಳಲ್ಲಿ ಬದುಕಿನ ಹಲವಾರು ಜಟಿಲ ಸಮಸ್ಯೆಗಳು ನಾಡು-ನುಡಿಯ ಅಭಿಮಾನ ಮುಂತಾದ ವಿಷಯಗಳು ಕಾಣಬಹುದು.

ಕನ್ನಡ ನಾಡಿನ ಕಥೆ

ಕೇಳಿರಿ ಕೇಳಿರಿ ಕನ್ನಡ ಜನಗಳೆ

ಕನ್ನಡ ನಾಡಿನ ಕಥೆಯನ್ನು

ಇಂದಿನ ಇದರ ವ್ಯಥೆಯನ್ನು

ಕದಂಬ ಗಂಗರು ಭವ್ಯದಿ

ಬೆಳೆಸಿದ ನಾಡಿದು ನೋಡಿರಿ ಕನ್ನಡವು

ಚಾಲುಕ್ಯ ಹೊಯ್ಸಳ ರಾಷ್ಟ್ರಕೂಟ

ಮೈಸೂರು ಒಡೆಯರಾ ನಾಡಿದುವೆ

ಪಂಪರನ್ನರ ಕಾವ್ಯದ ಸುಧೆಯೊಳ್

ತೇಲಿ ಮುಳುಗಿದ ನಾಡಿದುವೆ

ಶರಣದಾಸರ ಅನುಭವದಮೃತ

ಸವಿದು ಬೆಳೆಯಿತು ಜನಪದವು।।

ಈ ಕವನದಲ್ಲಿ ಕವಿಯತ್ರಿ ನಾಡು ನುಡಿಯ ಅಭಿಮಾನವನ್ನು ವ್ಯಕ್ತಗೊಳಿಸಿದ್ದಾರೆ.

ಸರಳ ಹಾಗೂ ಸಹಜ ಶೈಲಿಯ ಡಾ.ಸರ್ವೋದಯ ಶಿವಪುತ್ರ ಅವರಲ್ಲಿ ಪ್ರೀತಿ, ಪ್ರೇಮ ಬಂಡವಾಳಶಾಹಿ ಧೋರಣೆಯ ವಿರುದ್ಧದ ಕೂಗು ಕಂಡುಬರುತ್ತದೆ.

ಅಮ್ಮ

ಅಮ್ಮನಿಲ್ಲದ ಮನೆ ಮನ ಬೀಕೋ ಎನ್ನುತಿದೆ
ಅಮ್ಮನ ಎದು ಹಾಲು ಕುಡಿದು
ಕೈ ತುತ್ತು ಮಾಡಿ ಉಣಬಡಿಸಿದ್ದು
ನೆನಪಿಸಿಕೊಳ್ಳುತ್ತೇನೆ ಏಕಾಂಗಿಯಾದಾಗ
ಅಮ್ಮನ ಪ್ರೀತಿ, ಮಮತೆ
ಎಲ್ಲವನ್ನು ಕಳೆದುಕೊಂಡಿರುವೆ ಬಾಲ್ಯದಲ್ಲಿ
ಅಮ್ಮ ಜಗದೊಳಗೆ ಮೊದಲು ಜನಿಸಿದಳು
ಅಮ್ಮನ ಮೂಲ ಹುಡುಕಿದರೂ ಸಿಗದು
ಕರುಣೆಯ ಕಡಲವರು ಗುಡಿ ಇರದ ದೇವತೆಯಿವಳು
ಅಮ್ಮನಿರದಿದ್ದರೆ ನಾನು ಭೂಮಿಗೆ ಬರುತ್ತಿರಲಿಲ್ಲ
ಈ ಸೃಷ್ಟಿಯಲ್ಲಿ ಅಮ್ಮನ ಸಮಾನ ಬೇರೆನೂ ನಾಕಣೆ।।

ಈ ಕವನದಲ್ಲಿ ಕವಿ ತಾಯಿಯ ಪ್ರೀತಿ, ಮಮತೆ, ವಾತ್ಸಲ್ಯ ತ್ಯಾಗಳನ್ನು ಮನತುಂಬಿ ನೆನಪಿಸಿಕೊಳ್ಳುತ್ತಾರೆ.

ಶ್ರೀ ವೆಂಕಟರಾವ್ ಕುಲಕರ್ಣಿ ಅವರು ಪ್ರಸ್ತುತ ಗಿರಿ ಕೋಗಿಲೆಗಳೆಂಬ ಈ ಕವನ ಸಂಕಲನವನ್ನು ಸಂಪಾದಿಸಿ ಪ್ರಕಟಿಸಿ ಯಾದಗಿರಿಯ ಹತ್ತು ಜನ ಕವಿಗಳನ್ನು ಒಂದೆಡೆ ಪರಿಚಯಿಸಿದ ಸಾಹಿತಿ ಸದಾ ಕ್ರಿಯಾಶೀಲರು, ಉತ್ಸಾಹಿಗಳು, ಸಾಹಿತ್ಯ ಆರಾಧಕರು.

ಧೋತಿ ಜುಬ್ಬಾ ಟೋಪಿ ಮಾಯ

ಧೋತಿ ಜುಬ್ಬಾ ಟೋಪಿ ಮಾಯ

ಶರ್ಟು, ಪ್ಯಾಂಟು, ಸೂಟು ಜನಪ್ರಿಯ

ಸೀರೆ, ರವಿಕೆ, ರೇಷ್ಮೆ, ಉಡುಪು ನಿಸ್ಸಾರ

ಸ್ಕರ್ಟ, ಮಿಡಿ, ಚೂಡಿದಾರಗಳದೆ ಪ್ರಚಾರ

ಕುಶಲ, ಕ್ಷೇಮದ ಪದಗಳು ಮಂಗಮಾಯ

ಓಕೆ, ಸೀಯೂ, ಬೈ ತುಂಬಾ ಜನಪ್ರಿಯ

ಬ್ಯಾಂಗಲೋರ, ಮ್ಯಾಂಗಲೋರ, ಗುಲಬರ್ಗಾ

ಪದಗಳೇ ನಮಗೆ ಬೇಕು

ಬೆಂಗಳೂರು, ಮಂಗಳೂರು, ಕಲಬುರ್ಗಿ

ಪದಗಳು ಎಮಗೆ ಸಾಕು||

ಈ ಕವನದಲ್ಲಿ ಕವಿ ಇಂದು ಜನರು ಪಾಶ್ಚಾತ್ಯ ಸಂಸ್ಕೃತಿಗೆ ಮಾರು ಹೋಗಿ ನಮ್ಮ ಸಂಸ್ಕೃತಿ ಮರೆಯುತ್ತಿದ್ದಾರೆ ಎಂದು ಅಸಹಾಯಕತೆಯನ್ನು ವ್ಯಕ್ತ ಪಡಿಸುತ್ತಾರೆ. ಕವಿ ಹಾಗೂ ಕವನ ಸಂಕಲನವನ್ನು ಕುರಿತು ಬೆನ್ನುಡಿಯಲ್ಲಿ ಜ್ಯೋತಿ ಬಿ. ಕುಲಕರ್ಣಿಯವರು, ವೆಂಕಟರಾವ ಕುಲಕರ್ಣಿ ಅವರ ಸಂಪಾದನೆಯಲ್ಲಿ ಪ್ರಕಟಗೊಂಡ ಗಿರಿ ಕೋಗಿಲೆಗಳು ಕವನ ಸಂಕಲನ ಹತ್ತು ಕವಿಮನಗಳಿಂದ ಅರಳಿದ ಕವನಗಳ ಗುಚ್ಛ, ವಿಭಿನ್ನ ಕವಿಗಳ ಏಕರೂಪವಾದ ಜೀವನ ಸಂಸ್ಕೃತಿಯ ಜೀವಧಾತುವಿನ ತುಡಿತದಿಂದ ಈ ಎಲ್ಲಾ ಕವಿತೆಗಳನ್ನು ಏಕಸೂತ್ರದಲ್ಲಿ ಹಿಡಿದಿಡಲಾಗಿದೆ. ಇದರೊಳಗೆ ಇಣುಕಿದಾಗ ಸಾಮಾಜಿಕ ಅಸಮತೋಲನದ ಬಗ್ಗೆ ಕವಿಗಳ ಕಿನಿಸು ಹೊರ ಹೊಮ್ಮಿರುವುದು. ಹೆಜ್ಜೆ ಹೆಜ್ಜೆಗೂ ಗೋಚರವಾಗುತ್ತದೆ ಎಂದು ಗುರುತಿಸಿದ್ದಾರೆ.

ಮುನ್ನುಡಿಯಲ್ಲಿ ಡಾ.ಕೃಷ್ಣ ಕೋಲಾರ ಕುಲಕರ್ಣಿಯವರು ಇಲ್ಲಿಯ ಹತ್ತು ಕವಿಗಳಲ್ಲಿ ಮೂವತ್ತರ ಆಸುಪಾಸಿನಿಂದ ಎಪ್ಪತ್ತರ ಅಂಚಿನವರೆಗಿನ ಕವಿಗಳೂ ಇದ್ದಾರೆ. ಅವರೆಲ್ಲ ವಿವಿಧ ವೃತ್ತಿಗಳಲ್ಲಿದ್ದವರು ಬಹುತೇಕರು ಶಿಕ್ಷಕರು, ಇಲ್ಲವೆ ಶಿಕ್ಷಣ ಇಲಾಖೆಯ ವೃತ್ತಿಯಲ್ಲಿದ್ದವರು. ಒಬ್ಬರೇ ಒಬ್ಬರು ಅಂಚೆ ಇಲಾಖೆಯಲ್ಲಿದ್ದವರು.

ಭಾವನೆಗಳ ಉತ್ಕಟತೆಯಿಂದ ಅಭಿವ್ಯಕ್ತಗೊಳ್ಳುವ ಜೀವಂತ ಭಾಷೆಯೇ ಕಾವ್ಯ ಎನ್ನುತ್ತಾರೆ. ಇಂದಿನ

ಕಾವ್ಯ ವಿಮರ್ಶಕರು ಭಾವನೆಗಳ ಉತ್ಕಟತೆ ಎಂದಾಗ ಅದು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುವುದು ಸಹಜ. ಇದನ್ನು ಇನ್ನಷ್ಟು ಸ್ಪಷ್ಟವಾಗಿ ಹೇಳಬೇಕೆಂದರೆ, ಸೂರ್ಯೋದಯ ಕುರಿತು ಅನೇಕ ಕವಿತೆಗಳನ್ನು ನಮ್ಮ ಕವಿಗಳು ಬರೆದಿದ್ದಾರೆ ಎನ್ನುತ್ತಾರೆ.

**ನರಸಿಂಹಗುಪ್ತ ಬಳಿಚಕ್ರ**

ಶ್ರೀಯುತರ ಪರಿಚಯವನ್ನು ನಾವು ಈಗಾಗಲೇ ಮಾಡಿಕೊಂಡಿದ್ದೇವೆ. ಶ್ರೀಯುತರು ಅನೇಕ ಕವನ ಸಂಕಲನಗಳನ್ನು ರಚಿಸಿ ಪ್ರಕಟಿಸಿದ್ದಾರೆ. ಜೊತೆಗೆ ಜನಪದಗೀತೆಗಳನ್ನು ಕೂಡ ರಚಿಸಿದ್ದಾರೆ.

1. ಜನಪದಗೀತೆಗಳು :

ಈ ಕೃತಿಯು ನರಸಿಂಹಗುಪ್ತ ಬಳಿಚಕ್ರರವರ ಐದು ಕವನಗಳ ಒಂದು ಕವನ ಸಂಕಲನ. ಈ ಐದು ಕವನಗಳು ವಿವಿಧ ವಿಷಯಗಳನ್ನು ಒಳಗೊಂಡ ದೀರ್ಘ ಗೀತೆಗಳಾಗಿವೆ.

ಹರದೇಶಿ ನಾಗೇಶಿ ಹಾಡು

ಸ್ತ್ರೀ ಆದಿ ಶಕ್ತಿಯನು ನೆನೆಯುತ ಪೇಳುವೆ

ಆದರದಿಂದಲಿ ನಿವೆಲ್ಲಕೇಳಿ

ಹೆಣ್ಣಿನ ಶಕ್ತಿಯ ಘನತೆಯನೆಲ್ಲ

ಬಣ್ಣಿಸಲಳವೇ? ನಿಮ್ಮಿಂದೆಲ್ಲ

ಈ ಗೀತೆಯಲ್ಲಿ ಸ್ತ್ರೀ ಪುರುಷರ ಸಂವಾದೊಂದಿಗೆ ಹೆಣ್ಣು ಒಲಿದರೆ ನಾರಿ ಮುನಿದರೆ ಮಾರಿ ಹೆಣ್ಣು ಸಂಸಾರವನ್ನು ನೀಗಿಸಿಕೊಂಡು ಹೋಗುವ ಗೃಹಿಣಿ ಎಂಬ ಮಾತನ್ನು ತಿಳಿಸಿದ್ದಾರೆ.

ಮಹಾತ್ಮ ಗಾಂಧಿ

ಕೇಳಿರಿನೀವೆಲ್ಲ ಗಾಂಧಿಯ ಕಥೆಯ

ತಾಳಿರಿ ಹರುಷವ ತೇರೆಯುತ ವ್ಯಥೆಯ

ಜಯ ಜಯ ಗಾಂಧಿ ಮಹಾತ್ಮ ಗಾಂಧಿ

ಜಯ ಜಯ ಗಾಂಧಿ ಮಹಾಗಾಂಧಿ

ಪೋರಬಂದರಿನ ರಾಜಕೋಟೆಯೊಳು

ಧೀರಗಾಂಧಿಯು ಬನಿಯರ ಕುಲದೊಳು

ಜನಿಸಲು ಮೋಹನದಾಸದೆಂಬನಾಮ

ಜನನಿ ಜನಕರಿಡೆ ಹೊಂದಾತ ಪ್ರೇಮ॥

ಈ ಗೀತೆಯು ಲಾವಣಿ ಗೀತೆಯಾಗಿದ್ದು ದ್ವಿಪದಿಯಲ್ಲಿದೆ. ಗಾಂಧೀಜಿಯ ಜೀವನ ಚರಿತ್ರೆಯನ್ನು ಹಾಡಿನ ಮೂಲಕ ರಚಿಸಿದ್ದಾರೆ. ಈ ಸಂಕಲನ ಕುರಿತು ಸೂಗಣ್ಣ ಹುಂಡೇಕಾರರವರು ಮುನ್ನುಡಿಯಲ್ಲಿ, ಶ್ರೀಗುಪ್ತರವರು ಹಳಗನ್ನಡ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿದ್ದಾರೆ. ಜಾನಪದ ಕಾವ್ಯಗಳನ್ನು ಸಹ ಚೆನ್ನಾಗಿ ತಿಳಿದು ಕೊಂದಿದ್ದಾರೆ. ಭಕ್ತಿಗೀತೆಗಳ ರಚನೆಯಲ್ಲಿ ಸರಿಯಾಗಿ ಪಳಗಿದ್ದಾರೆ. ಅನೇಕ ಸಭೆ ಸಮ್ಮೇಳನಗಳಲ್ಲಿ ತಮ್ಮ ಕವನ ಸುಧೆಯನ್ನು ಹರಿಸಿದ್ದಾರೆ ಎಂದು ಹೇಳಿದ್ದಾರೆ.

ಒಟ್ಟಿನಲ್ಲಿ ಈ ಕವನ ಸಂಕಲನದಲ್ಲಿ ಐದು ಜನಪದ ಗೀತೆಗಳಿದ್ದು, ಚೌಪದಿ, ದ್ವಿಪದಿ, ಲಾವಣಿ, ಗೀಗೀ ಹಾಡುಗಳಿವೆ. ಸರಳ ಹಾಗೂ ಸುಂದರ ಆಡು ಭಾಷೆಯಲ್ಲಿ ಈ ಸಂಕಲನ ರಚಿತಗೊಂಡಿದೆ. ನಾವು ಜನಪದ ಶೈಲಿಯಲ್ಲಿ ಬರೆಯಬಹುದೇ ವಿನಃ ಜನಪದದಂತೆ ಬರೆಯಲು ಸಾಧ್ಯ ಆಗುವುದಿಲ್ಲ ಎಂಬುದನ್ನು ಒಪ್ಪಬೇಕಾಗುತ್ತದೆ.

**ದೊಡ್ಡಬಸಪ್ಪ ಬಳೂರಗಿ**

ದೊಡ್ಡ ಬಸಪ್ಪ ಬಳೂರಗಿಯವರು ವೃತ್ತಿಯಿಂದ ಉಪನ್ಯಾಸಕರಾಗಿದ್ದು ಪ್ರವೃತ್ತಿಯಿಂದ ಸಾಹಿಸಿಗಳಾಗಿದ್ದಾರೆ. ಕವಿಯಾಗಿ, ಸಾಹಿತಿಯಾಗಿ, ವಚನ ರಚನಕಾರರಾಗಿ ಸಾಹಿತ್ಯ ರಂಗಕ್ಕೆ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಶ್ರೀಯುತರು ಜೀವನಚರಿತ್ರೆ ಕವನಗಳನ್ನು ರಚಿಸಿ, ಸಂಪಾದಿಸಿ ಪ್ರಕಟಿಸಿದ್ದಾರೆ. ಅವರ ಸಂಪಾದಿತ ಕವನ ಸಂಕಲನವು

1. ಜೀವಂತ ಶವಗಳು ನಕ್ಕಾಗ

ಇದು ಶಹಾಪೂರ ತಾಲೂಕಿನ ಭೀಮರಾಯನ ಗುಡಿಯ ಉದಯೋನ್ಮುಖ ಕವಿಗಳ ಕವನ ಸಂಕಲನವಾಗಿದೆ. ಈ ಭಾಗದ ಎಷ್ಟೋ ಜನ ಕವಿಗಳು ಪ್ರತಿಭಾನ್ವಿತರಿದ್ದರೂ ಪ್ರಚಾರದಿಂದ ಹಿಂದೆ ಉಳಿದಿದ್ದು ಅವರೆಲ್ಲರ ಕವನಗಳನ್ನು ಪ್ರತಿಭೆಯನ್ನು ಕನ್ನಡ ಸಾಹಿತ್ಯ ರಂಗಕ್ಕೆ ಪರಿಚರಿಸುವ ಕಾರಣದಿಂದ ಶ್ರೀ ಬಳೂರಗಿ ಅವರು ಜೀವಂತ ಶವಗಳು ನಕ್ಕಾಗ, ಸಂಕಲನವನ್ನು ಸಂಪಾದಿಸಿ ಕೊಟ್ಟಿದ್ದಾರೆ.

ಈ ಕವನ ಸಂಕಲನದಲ್ಲಿ ಸುಮಾರು 85 ಕವನಗಳಿವೆ ಸುಮಾರು 50 ಕವಿಗಳ ಕವನಗಳು ಇಲ್ಲಿವೆ. ಅದರಲ್ಲಿಯ ಕೆಲವು ಕವನಗಳು

ಬಿಸಿಲು ಬೆಳದಿಂಗಳು

– ವಿರೇಶ ಹಿರೇಮಠ ಹಳ್ಳೂರ

ಬಿಸಿಲು ತೆರಳಿದ ಬಳಿಕ
ಬೆಳದಿಂಗಳು ಬರದಿಹುದೆ?
ಇಂದು ವಿಷವಿರಲು
ಅಮೃತವು ಬರದಿಹುದೆ?

ಬಿಸಿಲು ಹೋದ ಮೇಲೆ ಹೇಗೆ ಬೆಳದಿಂಗಳು ಬರುತ್ತದೆಯೋ ಹಾಗೇ ವಿಷವು ಹೋದ ಮೇಲೆ ಅಮೃತ ಸಿಗುತ್ತದೆ. ಹಾಗೆಯೇ ಜೀವನದಲ್ಲಿ ಬಂದ ಕಷ್ಟಗಳಿಗೆ ನೀ ಸೋಲದೆ ಜೀವನದಲ್ಲಿ ಮುನ್ನುಗ್ಗು ಎಂದು ಕವಿಗಳು ಹೇಳುತ್ತಾರೆ.

ವಿಚಾರಿಸು

– ದೊಡ್ಡ ಬಸಪ್ಪ ಬಳೂರಗಿ

ಸಾವಿತ್ರಿ ನೀ ಹುಟ್ಟಿ ಬರಬೇಡ
ನೀ ಹುಟ್ಟಿದರೆ ಈಗ
ಸತ್ಯವಾನನೇ ಇಲ್ಲವಲ್ಲ?
ಯಮನಂತೂ ವೃದ್ಧನಾಗಿರಬೇಕು
ಕರ್ತವ್ಯದ ಕೈ ಮರೆತಿರಬೇಕು
ಇಲ್ಲ ಬೇಸತ್ತಿರಬೇಕು
ಇಲ್ಲದಿರೆ

ಈ ಕವನದಲ್ಲಿ ಕವಿಗಳು ಇಂದು ಸಮಾಜದಲ್ಲಿ ಸತ್ಯ ಅಹಿಂಸೆಗಳು ಮಾಯವಾಗಿವೆ ಎಂದು ಮಾರ್ಮಿಕವಾಗಿ ವಿಡಂಬಿಸಿ ನುಡಿಯುತ್ತಾರೆ.

ಈ ಕವನ ಸಂಕಲನವನ್ನು ಕುರಿತು ಮುನ್ನುಡಿಯಲ್ಲಿ ಬಿ.ಮಹಾದೇವಪ್ಪನವರು, ಜೀವಂತ ಶವಗಳು

ನಕ್ಕಾಗ, ಸಂಕಲನ ಉದಯೋನ್ಮುಖ ಕಲಾವಿದರ ಬಳಗದಿಂದ ಪ್ರಕಾಶನಗೊಳ್ಳುತ್ತಿದ್ದರೂ ಎಲ್ಲ ಕವಿಗಳು ಉದಯೋನ್ಮುಖರೇನೂ ಅಲ್ಲ. ಅವರು ಅರಿತು ನುರಿತವರಾದರೂ ಅಪ್ರಸಿದ್ದರಿದ್ದಾರೆಯೆಂಬ ಕಾರಣದಿಂದ ಈ ಸಂಕಲನದಲ್ಲಿ ಸೇರಿಸಿಕೊಂಡಂತೆ ಕಾಣುತ್ತದೆ. ನಮ್ಮ ಭಾಗದ ಒಂದು ದುರ್ದೈವ ಈ ಭಾಗದಲ್ಲಿ ರಾಜ್ಯದ್ಯಂತ ಅಧಿಕ ಪ್ರಸಾರದ ಪತ್ರಿಕೆಗಳು ಬೆಳೆದು ಬರದೆ, ಕವಿಗಳು ಎಷ್ಟು ಪ್ರತಿಭಾನ್ವಿತರಿದ್ದರೂ ಅಪ್ರಸಿದ್ಧರಾಗಿಯೇ ಉಳಿಯುವ ಪರಿಸ್ಥಿತಿ ಇದೆ. ಅದಕ್ಕಾಗಿಯೇ ಹಲವು ಜನರು ತಮ್ಮನ್ನು ತಾವು ಬದುಕಿದ್ದರು ಸತ್ತಂತೆಯೇ ಇದ್ದೆಯಲ್ಲಾ ಎಂದು ಪ್ರಶ್ನಿಸಿಕೊಳ್ಳುತ್ತಾರೆ. ಈ ಕಾರಣದಿಂದಲೇ ಶ್ರೀ ಬಳೂರಗಿ ಅವರು ಜೀವಂತ ಶವಗಳು ನಕ್ಕಾಗ ಎಂಬ ಹೆಸರನ್ನು ತಮ್ಮ ಕವನ ಸಂಕಲನಕ್ಕೆ ಇಟ್ಟಿರಬಹುದು ಎಂದು ಸರಿಯಾಗಿ ಗುರುತಿಸಿರುವರು.

ಜಿ.ಆರ್.ಕುಲಕರ್ಣಿ – ಎ.ಕೃಷ್ಣ

ಗೀತಾಂಜಲಿ (ಅನುವಾದ)

ಗೀತಾಂಜಲಿ ವಿಶ್ವಕವಿ ರವೀಂದ್ರರ ಕಾವ್ಯ ಇದರ ಅನೇಕ ಕನ್ನಡ ಅನುದಾಗಗಳು ಬಂದವಾದರೂ ಎ.ಕೃಷ್ಣಸುರಪುರ ಅವರು ಹಾಗೂ ಜಿ.ಆರ್.ಕುಲಕರ್ಣಿಯವರು ಗೀತಾಂಜಲಿಯ ದರ್ಶನವನ್ನು ನಮಗೆ ಮತ್ತೊಮ್ಮೆ ಮಾಡಿಸಿದ್ದಾರೆ. ಜಿ.ಆರ್.ಕುಲಕರ್ಣಿ ಹಾಗೂ ಎ.ಕೃಷ್ಣ ಸುರಪುರ ಅವರು ಸೇರಿ ಎರಡು ಕಣ್ಣಾಗಿ ಒಂದೇ ದೃಶ್ಯವನ್ನು ಇಲ್ಲಿ ಕಂಡಿದ್ದಾರೆ. ಜಿ.ಆರ್.ಕುಲಕರ್ಣಿಯವರು ಗದ್ಯಭಾಗವನ್ನು ಎ.ಕೃಷ್ಣರವರು ಪದ್ಯಭಾಗವನ್ನು ಅತ್ಯಂತ ಸರಳ ಸುಲಲಿತವಾಗಿ ಕನ್ನಡಿಸಿದ್ದಾರೆ.

ಕುಲಕರ್ಣಿಯವರು ಸ್ವಂತಃ ಕವಿ ಹಾಗೂ ಆಂಗ್ಲ ಭಾಷೆಯನ್ನು ಆಳವಾಗಿ ಅಧ್ಯಯನ ಮಾಡಿದವರು. ಸುರಪೂರದ ಪ್ರಸಿದ್ಧ ಮನೆತನದ ದಿ.ಗಿರಿರಾವ ಕುಲಕರ್ಣಿ ನ್ಯಾಯವಾದಿಗಳ ಸುಪುತ್ರರು. ಶ್ರೀ ಗೋವಿಂದರಾವ ಕುಲಕರ್ಣಿಯವರು ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ಅತ್ಯುನ್ನತ ಹುದ್ದೆಯನ್ನಲಂಕರಿಸಿದರು. ಸದ್ಯ ಇವರು ಸಾಹಿತ್ಯಾಭ್ಯಾಸದ ಸಾರ್ಥಕ ವಿಶ್ರಾಂತಿ ಜೀವನವನ್ನು ನಡೆಸುತ್ತಿದ್ದಾರೆ.

ಗದ್ಯಾನುವಾದವನ್ನು ಮಾಡಿದ ಜಿ.ಆರ್.ಕುಲಕರ್ಣಿಯವರು ಈ ರೀತಿಯಾಗಿ ಹೇಳಿದ್ದಾರೆ. ಕಾವ್ಯವನ್ನು ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಅನುವಾದಿಸುವಾಗ ಪರಿಷೂರ್ಣತೆ ಎಂಬುದು

ಕಷ್ಟಸಾಧ್ಯ. ಭಾಷಾಂತರಗಳಾಗಲಿ, ಭಾವಾನುವಾದಗಳಾಗಲಿ ಅಂಶಾವತಾರಿಗಳಾಗುವುದಷ್ಟೇ ಸಾಧ್ಯ. ಆದರೂ ಮೂಲಕ್ಕೆ ಸರಿದೊರೆಯಾಗಿ ಕವಿತೆಯ ಮೂಲಭಾವಕ್ಕೆ ಅಪಚಾರವಾಗದಂತೆ ಸೊಬಗು ಸ್ವಾರಸ್ಯ ಕೆಡದಂತೆ ಅನುವಾದಿಸುವುದು ಅಪೇಕ್ಷಣೀಯವೂ ಅವಶ್ಯಕವೂ ಅಹುದು. ಹೀಗಾಗಿ ಮೂಲ ಕವಿತೆಗಳ ಆಶಯ ಮತ್ತು ಅಭಿವ್ಯಕ್ತಿಗೆ ಕುಂದು ಬರದಂತೆ ನನ್ನ ಶಕ್ತ್ಯನುಸಾರ ಇಂಗ್ಲೀಷ ಆವೃತ್ತಿಯಲ್ಲಿರುವ ಕವಿತೆಗಳ ಗದ್ಯಾನುವಾದವನ್ನು ಮಾಡಿದ್ದೇನೆ ಎಂದಿದ್ದಾರೆ. ಕೆಲವು ಸಾಲುಗಳು ಈ ಕೆಳಗಿನಂತಿವೆ :

ನೀನು ನನ್ನನ್ನು ಅಂತ್ಯವಿಲ್ಲದವನಾಗಿಸಿದ್ದೀಯೆ. ಇದುವೇ ಆಗಿದೆ. ನಿನ್ನ ಅಭಿಲಾಷೆ ಈ ಮಣ್ಣಿನ ಪಾತ್ರೆಯನ್ನು ಮತ್ತೆ ಮತ್ತೆ ಬರಿದು ಮಾಡುತ ನವ ಜೀವನದಿಂದ ಸದಾ ತುಂಬುತ್ತಿದ್ದಿಯೆ

ಪದ್ಯಾನುವಾದ

– ಎ.ಕೃಷ್ಣ ಸುರಪುರ

ಗೀತಾಂಜಲಿಯ ಒಟ್ಟು 103 ಪದ್ಯಗಳನ್ನು ಅನುವಾದಿಸಲಾಗಿದೆ. ಸಗರ ನಾಡಿನ ವರಕವಿ ಶ್ರೀ ಕೃಷ್ಣರವರು ತಮ್ಮ ಆಳವಾದ ಅಧ್ಯಯನದ ಮೂಲಕ ಕವಿ ರವೀಂದ್ರರ ಕಾವ್ಯದರ್ಶನವನ್ನು ಇಲ್ಲಿ ಮಾಡಿಸಿದ್ದಾರೆ. ಎ.ಕೃಷ್ಣ ಸುರಪುರ ಅವರ ಪರಿಚಯವನ್ನು ಕಾವ್ಯ ಸಾಹಿತ್ಯ ವಿಭಾಗದಲ್ಲಿ ನಾವು ಮಾಡಿಕೊಂಡಿದ್ದೇವೆ.

1. ನಿನ್ನ ಸಂಕಲ್ಪದೋಲು

ನಿನ್ನ ಸಂಕಲ್ಪದೊಲು ನನ್ನ ನೀನಾಗಿಸಿಹೆ
ಅಂತ್ಯವಿಲ್ಲದ ದಿವಿಜ ಮನುಜನಾಗಿ
ಈ ಮಣ್ಣಪಾತ್ರೆಯನು ಬರಿ ಬರಿದು ಮಾಡುತ್ತ
ನವ್ಯ ಚೇತನ ತುಂಬಿ ನವಜೀವಿಯಾಗಿ।।
ನನ್ನೊಡಲ ಬಿದಿರಿನಲ್ಲಿ ಪುಟ್ಟಕೊಳಲನು ರಚಿಸಿ
ಗಿರಿಕಂದರಂಗಳಲಿ ನವಭಾವ ಮಿಡಿಸಿ
ನಿನ್ನ ಸಂಸ್ಪರ್ಶದಿಂ ಸಂತಸವು ಮಿತಿಮೀರಿ
ಭಾವಗೀತೆಯ ಮಧುರ ಹೊಸರಾಗ ನುಡಿಸಿ ।।

ಈ ಕೃತಿಯನ್ನು ಕುರಿತು ಮುನ್ನುಡಿಯಲ್ಲಿ ಸೀತಾರಾಮ ಜಾಗೀರದಾರ ಅವರು ಪಾರಿಜಾತದ

ಒಂದು ಕೊಂಬೆಯಲ್ಲಿ ಅಂಕುರಿಸಿ ಪಲ್ಲವಿಸಿ ಕೊನೆಗೆ ಅರಳಿದ ಎರಡು ಪುಷ್ಪಗಳು ಒಂದೇ ಸಲಕ್ಕೆ ಸರಸ್ವತಿಯ ಕೊರಳನ್ನು ಅಲಂಕರಿಸಬೇಕೆಂದು ಬಯಸಿದಾಗ ಅವಕ್ಕೆ ಒಂದೆಡೆ ಇರಲು ನಾರಿನ ಎಳೆಯ ಆಸರೆ ಬೇಕಾಗುತ್ತದೆ. ಶ್ರೀ ಜಿ.ಆರ್.ಕುಲಕರ್ಣಿ ಹಾಗೂ ಶ್ರೀ ಎ.ಕೃಷ್ಣಸುರಪುರ ಎಂಬುವೇ ಆ ಎರಡು ಪುಷ್ಪಗಳು ಈ ಎರಡು ಪುಷ್ಪಗಳು ಠಾಕೂರರ ಕೊಂಬೆಯಲ್ಲಿ ಅರಳಿ ನಿಂತಿವೆ. ಇವಕ್ಕೆ ಮೂಲೆಯಾಗಲು ಮುನ್ನುಡಿಯ ಒಂದು ಎಳೆ ಬೇಕಾಗಿದೆ. ಆ ಎಳೆ ವಯಸ್ಸಾದ ಬಾಳೆಯ ದಿಂಡಿನಲ್ಲಿ ಮಾತ್ರ ದೊರೆಯಲು ಸಾಧ್ಯ. ದಿಂಡು ಎತ್ತರವಾಗಿ ರುಕ್ಷವಾಗಿ ಭೂಮಿಯಿಂದ ಗೊನೆಯವರೆಗೆ ನೀಳವಾಗಿ ಬೆಳೆದು ನಿಂತಿರುತ್ತದೆ. ಅದರ ಆ ಕಾಂಡದಿಂದ ಎಳೆದದ್ದು ಈ ಎಳೆ ಎಂದು ಒಗಟ್ಟಿನ ರೂಪದಲ್ಲಿ ನುಡಿದಿದ್ದಾರೆ.

**ಡಿ.ಎಸ್.ಕುಮಾರ**

ಡಿ.ಎಸ್.ಕುಮಾರ ಶ್ರೀಯುತರು ಕಾದಂಬರಿ, ನಾಟಕ, ವಚನಗಳನ್ನು ಬರೆದು ಪ್ರಕಟಿಸಿದ್ದಾರೆ. ಜೊತೆಗೆ ಹಾಡುಗಳನ್ನು ರಚಿಸಿ ಪ್ರಕಟಿಸಿದ್ದಾರೆ.

1. ಅಪರೋಕ್ಷ ಜ್ಞಾನ ಸಾಗರ

ಈ ಕೃತಿಯಲ್ಲಿ ಸದ್ಗುರು ಶ್ರೀ ಜಗಲಿಂಗೇಶ್ವರರು ಅಂಧಕಾರ ಕಳೆದು ಜ್ಞಾನದಮಾರ್ಗ ತೋರಿಸಿದ ಮಹಿಮೆಯ ಹಾಡುಗಳಿವೆ. ಇಲ್ಲಿ ಸುಮಾರು 71 ಹಾಡುಗಳು ಇವೆ. ಈ ಎಲ್ಲಾ ಹಾಡುಗಳು ಭಕ್ತಿ ಭಾಗಗಳಿಂದ ತುಂಬಿದ ಭಜನೆ ಹಾಡುಗಳು ಈ ಕೃತಿಯು ಮೊದಲು ಗಜಾನನ ಸ್ತುತಿ ಸ್ತೋತ್ರಗಳೊಂದಿಗೆ ಪ್ರಾರಂಭಗೊಳ್ಳುತ್ತದೆ. 3ನೇ ಹಾಡು ಶ್ರೀ ಜಗಲಿಂಗೇಶ್ವರ ಸುಪ್ರಭಾತವಾಗಿದೆ. ಹಂದ್ರಿಕಿಯ ಯೋಗಿ, ಸಿದ್ಧಿ ಪುರುಷ, ಸದ್ಗುರು ಶ್ರೀ ಜಗಲಿಂಗೇಶ್ವರ ಕುರಿತಾದ ಹಾಡುಗಳು ಈ ಕೃತಿಯಲ್ಲಿವೆ. ಗುರುವಿಗೆ ಸಾಟಿ ಬೇರಿಲ್ಲ ಎಂಬ ಹಾಡಿನಲ್ಲಿ ಶ್ರೀ ಜಗಲಿಂಗೇಶ್ವರನನ್ನು ತನು–ಮನ–ಧನದಿಂದ ಸೇವೆ ಮಾಡಿದರೆ ಭಕ್ತಿ, ಮುಕ್ತಿಗಳುಂಟಾಗುತ್ತವೆ ಎಂದು ಕೊಂಡಾಡಿದ್ದಾರೆ.

ಗುರುವಿಗೆ ಸಾಟಿ ಬೇರಿಲ್ಲ<br>
ಹರ ಗುರು ಎಂದರೆ ಭಯವಿಲ್ಲ<br>
ಗುರು ನಾಮಕ್ಕೆ ಸಾಟಿ ಬೇರಿಲ್ಲ<br>
ಸದ್ಗುರುವಿಗೆ ಸಾಟಿ ಬೇರಿಲ್ಲ

ಗುರು ಭಕ್ತರಿಗೆ ದುರಿತವಿಲ್ಲ ಜನುಮ ಜನುಮದಲ್ಲಿ ಪಾಪವು ಇಲ್ಲ।।

ಗುರು ನೀ ಹುಟ್ಟಿ ಬಂದಿ ಎಂಬ ಹಾಡಿನಲ್ಲಿ ಶ್ರೀ ಜಗಲಿಂಗೇಶ್ವರರ ಹಂದ್ರಿಕಿ ಎಂಬ ಗ್ರಾಮದಲ್ಲಿ ಹುಟ್ಟಿ ಬಂದು ದುಷ್ಟ ಗುಣಗಳನ್ನು ನಾಶ ಪಡಿಸಿ ಶ್ರೇಷ್ಟ ಗುಣಗಳನ್ನು ಈ ಜಗಕ್ಕೆಲ್ಲಾ ತೋರಿಸಿದೆ ಎಂದು ಕವಿಯು ಹಾಡಿ ಹೋಗಳಿದ್ದಾರೆ.

ಹುಟ್ಟಿ ಬಂದಿ ಹಂದ್ರಿಕಿ ಪುರದಿ
ನೀ ಜಗದೊಳ ಮೆರದಿ
ಹುಟ್ಟಿ ಬಂದಿ ಹಂದ್ರಿಕಿ ಪುರದಿ
ಸೃಷ್ಟಿಕರ್ತ ಜಗದೀಶ ಜನದೊಡೆಯ ಪರಮೇಶ
ಭವ ಬಂಧನದ ದೋಷ ನಾಷ ಮಾಡಿ ನಮ್ಮ ಈಶ

ಈ ರೀತಿಯಾಗಿ ಕವಿಗಳಾದ ಡಿ.ಎಸ್.ಕುಮಾರ ಅವರು ಜಗಲಿಂಗೇಶ್ವರ ಗುರುಗಳ ಮಹಿಮೆಯನ್ನು ಸರಳವಾದ ಭಾಷೆಯಲ್ಲಿ ಹಾಡಿ ಹೊಗಳಿದ್ದಾರೆ.

**ಶಿವಣ್ಣ ಇಜೇರಿ**

ಯಾದಗಿರಿ ಜಿಲ್ಲೆಯ ಶಹಾಪೂರ ತಾಲೂಕಿನವರಾದ ಶಿವಣ್ಣ ಇಜೇರಿ ಅವರು 13&05&1952ರಂದು ಜನಿಸಿದರು. ತಂದೆ ಬಸಣ್ಣ ತಾಯಿ ಪರಮವ್ವ ಒಂಬತ್ತನೇ ತರಗತಿಯ ವರೆಗೆ ಶಿಕ್ಷಣ ಇಜೇರಿಯವರು ವೃತ್ತಿಯಿಂದ ಅಡತಿ, ಅಂಗಡಿ ಗುಮಾಸ್ತರು ಪ್ರವೃತ್ತಿಯಿಂದ ಸಾಹಿತಿಗಳು, ಅಡತಿ, ಅಂಗಡಿಯಲ್ಲಿ ಗುಮಾಸ್ತನಾಗಿ ಕೆಲಸ ಮಾಡುತ್ತಲೇ ಸಹಜ ಪ್ರತಿಭೆ, ಸತತ ಅಭ್ಯಾಸ ಹಾಗೂ ಸಾಹಿತಿಗಳ ಒಡನಾಟದಲ್ಲಿ ಕವಿಯಾಗಿದ್ದಾರೆ. ಕವಿತೆಗಳನ್ನು ಬರೆದು ಕವಿಗೋಷ್ಟಿಯಲ್ಲಿ ಓದುವುದು ಅವರ ಒಂದು ಹವ್ಯಾಸ.

ಶ್ರೀಯುತರು ಹನಿಗವನ, ಕವಿತೆ ಬರೆದು ಪ್ರಕಟಿಸಿದ್ದಾರೆ. ಅವರ ಕವನ ಸಂಕಲನ ಹಾಗೂ ಹನಿಗವನ ಸಂಕಲನಗಳು ಈ ಕೆಳನಂತಿವೆ.

1. ಉಡಿಯಲ್ಲಿಯ ಉರಿ

2. ಕರಗದ ಬೆಣ್ಣೆ

ಉಡಿಯಲ್ಲಿಯ ಉರಿ ಎಂಬ ಹನಿಗವನಗಳ ಸಂಗ್ರಹದಲ್ಲಿ ನೂರು ಹನಿಗವನಗಳಿವೆ. ರಾಜಕೀಯ ಪ್ರಚಲಿತ ಸಮಸ್ಯೆ ಮಳೆ, ಬೆಳೆ, ಜಾತಿ, ಧರ್ಮ ಮುಂತಾದ ವಿಷಯಗಳ ವಿಡಂಬನೆಗಳನ್ನು ಇಲ್ಲಿ ಕಾಣಬಹುದು. ರಾಮಾಯಣ, ಮಹಾಭಾರತದಂತಹ ಪೌರಾಣಿಕ ವಿಷಯಗಳ ವ್ಯಂಗ್ಯವನ್ನು ಇಲ್ಲಿ ಕಾಣಬಹುದು.

ಬಾಳು ಹಾಳು

ಮನ ಕೆಟ್ಟವರ ಜೊತೆ ಮಾತು

ಗುಣ ಕೆಟ್ಟವರ ಜೊತೆ ಗೆಳೆತನ

ದೇಹ ಕೆಟ್ಟವರ ಜೊತೆ ಸಂಪರ್ಕ

ಈ ಮೂರು ಜನರ ಜೊತೆ

ಬಾಳುವವನ ಬಾಳು

ಜೀವನವೆಲ್ಲ ಹಾಳು।।[1]

ಸುಗ್ರಿವಾಜ್ಞೆ

ವಾಲಿಯನು

ಎದುರಿಸಲಾಗದ

ತನ್ನ ಹೆಂಡತಿಯನ್ನೇ

ಬಿಡಿಸಲಾಗದ

ಸುಗ್ರೀವ

ಸೀತೆಯನ್ನು

ರಾವಣನಿಂದ ಬಿಡಸಲು

ವಾನರರಿಗೆ

ಆಜ್ಞೆ ಮಾಡಿದ್ದೇ

ಸುಗ್ರಿವಾಜ್ಞೆ।।

ಉಡಿಯಲ್ಲಿಯ ಉರಿ ಹನಿಗವನ ಸಂಕಲನದ ಬಗ್ಗೆ ಹಾಗೂ ಕವಿ ಕುರಿತು ಹಿನ್ನುಡಿಯಲ್ಲಿ ಸಿದ್ದರಾಮ ಹೊನ್ಕಲ್ ಅವರು, ಕಾಯಕವೇ ಕೈಲಾಸ ಎಂಬುದನ್ನೇ ಉಸಿರಾಗಿಸಿಕೊಂಡ ಶ್ರೀ ಶಿವಣ್ಣ ಇಜೇರಿ ನಮ್ಮ ಮಧ್ಯದ ಅಪ್ಪಟ ವೈಚಾರಿಕ ನೆಲೆಯ ಮನುಷ್ಯ ಶರಣರ ಓದು–ವಿಚಾರ ಒಬ್ಬ ಸಾಮಾನ್ಯನಲ್ಲೂ ಅಸಮಾನ್ಯತೆಯ ಹೊಳಹುಗಳನ್ನು ನೀಡಬಲ್ಲದು ಎಂಬುದಕ್ಕೆ ಈ ಉಡಿಯಲ್ಲಿಯ ಉರಿ ಹನಿಗವನ ಸಂಕಲನವೇ ಸಾಕ್ಷಿ.

ಇಲ್ಲಿಯ ಕಾವ್ಯ ಕಾವ್ಯವನ್ನು ಕಟ್ಟುವ ಹಠದಿಂದ ಒಡಮೂಡಿದವುಗಳಲ್ಲ, ತನ್ನ ಸುತ್ತಲಿನ ಬದುಕು ಪುರಾಣ ಪುಣ್ಯಕಥೆ, ರಾಜಕೀಯ ಮುಂತಾಗಿ ವ್ಯವಸ್ಥೆಯಲ್ಲಿ ಕಂಡದೆಲ್ಲಾ ಒಡಲಲ್ಲಿ ಕುದ್ದು ಕಾವ್ಯವಾಗಿ ಪುನರ್‌ಸೃಷ್ಟಿಗೊಂಡಿವೆ. ಇಲ್ಲಿ ಸಾರ್ವಕಾಲಿಕವಾಗುವ ಸತ್ಯಗಳಿರುವಂತೆ ವ್ಯಂಗ್ಯ ಗೇಲಿಗಳಿವೆ. ಅಷ್ಟೇ ತಕ್ಷಣದ ಪ್ರತಿಕ್ರಿಯೆಗಳಿವೆ ಎಂದು ಸರಿಯಾಗಿ ಹೇಳಿದ್ದಾರೆ. ಡಾ.ವೀರಣ್ಣ ದಂಡೆಯವರು ಮುನ್ನುಡಿಯಲ್ಲಿ ಇಜೇರಿ ಅವರು ಸ್ನೇಹಿತರ ಒಡನಾಟದಿಂದ ತಾವು ಬರೆಯಬೇಕೆಂಬ ಪ್ರಭಾವಕ್ಕೆ ಒಳಗಾಗಿದ್ದಾರೆಯೇ ಹೊರತು ಎಲ್ಲರೂ ಬರೆದದನ್ನು ಬರೆದಿಲ್ಲ ಎಂಬುದು ಮುಖ್ಯ ಸಂಗತಿ. ಇಡೀ ಈ ನೂರು ಹನಿಗವನಗಳಲ್ಲಿ ಅವರ ಬದುಕು ಕಾಣಿಸಿಕೊಂಡಿದೆ. ಪ್ರಾಮಾಣಿಕತೆ ಎಂದರೆ ಏನು? ನಡೆದಂತೆ ನುಡಿಯುವುದು ಎಂದರೆ ಏನು? ಎಂಬುದಕ್ಕೆ ನಾವು ಈ ಸಂಗ್ರಹವನ್ನು ಗಮನಿಸಬೇಕು. ಅದಕ್ಕಾಗಿ ಶಿವಣ್ಣನವರು ಬರೆದವು. ಬರೀ ಕವನಗಳಲ್ಲ, ಅವು ವಚನಗಳೇ ಆಗಿವೆ. ಅವರ ಬದುಕು ಶರಣರ ಬದುಕಾಗಿದೆ. ಅವರ ವಿಚಾರ ಶರಣರ ವಿಚಾರಗಳಾಗಿವೆ ಎಂದು ಸರಿಯಾಗಿ ಹೇಳಿರುವರು.

ಈ ಹನಿಗವನ ಸಂಕಲನದಲ್ಲಿ ಕವಿಯ ಅನುಭವದ ಅನಿಸಿಕೆಗಳು ಕವನಗಳಾಗಿ ಹೊರ ಹೊಮ್ಮಿವೆ. ಬಸವಾದಿ ಶರಣರ ವಚನಗಳಂತೆ ಕವಿಯ ಮನಸ್ಸಿನ ಅನಿಸಿಕೆಗಳು ರಾಜಕೀಯ, ಸಾಮಾಜಿಕ, ಐತಿಹಾಸಿಕ ವ್ಯವಸ್ಥೆಯ ಕುರಿತು ಬರೆದ ವಿಚಾರಗಳು ಇಲ್ಲಿ ವ್ಯಕ್ತವಾಗಿವೆ.

ಸರಳವಾದ ಭಾಷಾ ಶೈಲಿಯಲ್ಲಿ ಮೂಡಿ ಬಂದಿದ್ದು ಸಹೃದಯನ್ನು ಓದಿ ಆನಂದಿಸುವಂತೆ ಇಲ್ಲಿಯ ಹನಿಗವನಗಳಿವೆ.

## 2. ಕರಗದ ಬೆಣ್ಣೆ

ಕರಗದ ಬೆಣ್ಣೆ ಇದು ಇಜೇರಿಯವರ ಎರಡನೇ ಕವನ ಸಂಕಲನ ಇದರಲ್ಲಿ ಒಟ್ಟು 65 ಕವನಗಳಿವೆ.

ಇಲ್ಲಿರುವ ಕವನಗಳು ಹನ್ನೆರಡನೆಯ ಶತಮಾನದ ಬಸವಾದಿ ಶರಣರ ನಡೆ-ನುಡಿ ಆಚಾರ-ವಿಚಾರಗಳಿಂದ ಪ್ರಭಾವಿತಗೊಂಡ ಅನುಭವದ ಮಾತುಗಳು ಕವನಗಳ ರೂಪದಲ್ಲಿ ಹರಿದು ಬಂದಿವೆ. ಕವಿಯು ಈ ಕವನ ಸಂಕಲನದಲ್ಲಿ ಸಗರ ನಾಡಿನ ದೇಶಿಯ ಸೊಗಡಿನಿಂದ ಕೂಡಿದ ಸರಳವಾದ ಭಾಷಾ ಶೈಲಿಯಲ್ಲಿ ಚಿತ್ರಣ ಮಾಡಿದ್ದಾರೆ.

ತಿಳಿದಿಲ್ಲ

ಇಲ್ಲಿಯೇ ಹುಟ್ಟು ಇಲ್ಲಿಯೇ ಸಾವು
ಎರಡರ ಮಧ್ಯೆ ಬದುಕುವ ನಾವು
ಕಲ್ಪಿಸಿಕೊಂಡಿರುವ ಲೋಕಗಳು ಹಲವು।।

ತಿಳಿದಿಲ್ಲ ಎಂಬ ಕವಿತೆಯಲ್ಲಿ ಹುಟ್ಟು ಸಾವುಗಳು ಎರಡೂ ಇಲ್ಲೇ ಇವೆ. ಆದರೆ ನಾವು ಕಲ್ಪಿಸಿಕೊಳ್ಳುವ ಲೋಕಗಳು ಮಾತ್ರ ಹಲವು. ಅದರ ರಹಸ್ಯ ಯಾರಿಗೂ ತಿಳಿದಿಲ್ಲ ಎಂಬ ವಿಷಯ ವ್ಯಕ್ತ ಪಡಿಸುತ್ತಾರೆ.

ಗಾಂಧೀಜಿ

ಗಾಂಧಿ ನೀನು ಸ್ವಾತಂತ್ರ್ಯ ಕೊಡಿಸಿ
ನಿನ್ನ ಬದುಕುವ ಸ್ವಾತಂತ್ರ್ಯವನ್ನೇ ಕಳೆದುಕೊಂಡೆ
ಗಾಂಧಿ ನೀನು ಸ್ವಾತಂತ್ರ್ಯ ಕೊಡಿಸಿ
ಪರದೇಶದವರ ಜೊತೆ
ಗಾಢ ಪ್ರೀತಿ ಉಳಿಸಿಕೊಂಡೆ
ಸ್ವದೇಶ ಬಾಂಧವರ ಜೊತೆ
ಗಾಢ ದ್ವೇಷ ಉಳಿಸಿಕ್ಕೊ
ಗಾಂಧಿ ನೀನು ಅಂದು ಸತ್ತಿದ್ದು
ಗೋಡ್ಸೆ ನಿನ್ನ ಎದೆಗೆ ಗುಂಡಿಟ್ಟಾಗ ಅಲ್ಲವೆ?

ಗಾಂಧೀಜಿ ಎಂಬ ಈ ಕವನದಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಮಹಾತ್ಮ ಗಾಂಧೀಜಿಯವರು ನಮ್ಮ ಭಾರತ ದೇಶವನ್ನು ರಾಮರಾಜ್ಯವನ್ನಾಗಿ ಮಾಡ ಬಯಸಿದರು. ಆದರೆ ಇಂದಿನ

ಭ್ರಷ್ಟ ರಾಜಕೀಯದ ಆಡಳಿತದಿಂದ ಅವೆಲ್ಲ ಕನಸು ನುಚ್ಚುನೂರಾಗಿವೆ, ಎಂದು ಕವಿಗಳು ಖೇದ ವ್ಯಕ್ತ ಪಡಿಸುತ್ತಾರೆ.

ಕಾಕರಾಜನ ಪ್ರಶ್ನೆ

ಮಗು ಊಟಕ್ಕೆ ಕುಳಿತಿತ್ತು।।
ಮತ್ತ ಅಳತಿತ್ತು
ಸಿಟ್ಟಿಗೆದ್ದ ಮಗು ಕೈಯ್ಯಾಗಿನ
ಅನ್ನದ ಬಟ್ಲೆ ಜಾಡಿಸಿ ಒಗದಿತ್ತು
ಮತ್ ಅಳತಿತ್ತು ಕಾಲ್ ತಿಕ್ಕತಿತ್ತು
ಇದು ಇಪ್ಪತ್ತೊಂದನೇ ಶತಮಾನ
ಉಪದೇಶ ಮಾಡಬೇಡಿ।।
ಈ ಶತಮಾನಕ್ಕೆ ಅವಮಾನ
ಮೊದಲು ಇಲ್ಲಿ ಪೇಠೋಬಾ ನಂತರ ವಿಠೋಬಾ
ಬಸವಣ್ಣ ಹೇಳಿರಬಹುದು ಸ್ವಾಮಿ ಅಂದು

ಇದ್ರೆ ತೋರಿಸಿ ಇಂದು ಅಂಥವರು ಯಾರಿದ್ದೀವಿ ಇಂದು? ಭ್ರಷ್ಟ ರಾಜಕೀಯ ಸ್ವಾರ್ಥತೆ ಇಂದು ಸಾರ್ವತ್ರಿಕವಾಗಿದೆ. ಜನ ಸಾಮಾನ್ಯರಲ್ಲಿ ಆಶೆ ಆಮಿಶೆಗಳನ್ನು ಹುಟ್ಟು ಹಾಕಿ, ಆಳುವ ವರ್ಗದ ನೀತಿಯ ಬಗ್ಗೆ ವ್ಯಂಗ್ಯವಾಗಿ ಕವಿಗಳು ಈ ಕವನದಲ್ಲಿಯ ಸಾಲುಗಳಲ್ಲಿ ಚಿತ್ರಿಸಿದ್ದಾರೆ. ಅಂದು ಬಸವಣ್ಣನವರು ಕಾಗೆಯೊಂದಗಳ ಕಂಡರೆ ಕರೆಯದೆ ತನ್ನ ಬಳಗವನು? ಎಂಬ ನೀತಿ ಇಂದು ವಿರುದ್ಧವಾಗಿದೆ ಎಂಬ ವಿಷಯವನ್ನು ಕವಿಗಳು ಇಲ್ಲಿ ಹೇಳ ಬಯಸುತ್ತಾರೆ.

ಈ ಕವನ ಸಂಕಲನ ಹಾಗೂ ಕವಿಯನ್ನು ಕುರಿತು ಬೆನ್ನುಡಿಯಲ್ಲಿ ಲಿಂಗಣ್ಣ ಸತ್ಯಂಪೇಟೆಯವರು, ಶಿವಣ್ಣ ಇಜೇರಿ ನನ್ನ ಬೆನ್ನ ಬಳಿ ವಿಡಿದು ಬಂದ ಸೋದರ ಸಂಬಂಧಿಯ ಹಾಗೆ ಆದ್ದರಿಂದ ನನ್ನ ಸುಖಗಳಲ್ಲಿ ಆತನಿಗೆ ಹೇಗೆ ಸಮಪಾಲುಂಟೋ, ಹಾಗೆ ನನ್ನ ಏನೆಲ್ಲ ಚಟುವಟಿಕೆಗಳಲ್ಲಿ ಸಹಭಾಗಿತ್ವದ ಹಕ್ಕುಂಟು.

ಇಂಥ ಶಿವಣ್ಣ ನನ್ನ ಅನುದಿನದ ಬರವಣಿಗೆಯ ಗೀಳನ್ನು ತಾನೂ ಅಂಟಿಸಿಕೊಳ್ಳದೆ ಬಿಟ್ಟಾನೆಯೆ? ಈಗಾಗಲೇ ಉಡಿಯಲ್ಲಿಯ ಉರಿ ಎಂಬ ಕೃತಿಯನ್ನು ಹೊರ ತರುವ ಮೂಲಕ ಸಾಹಿತ್ಯ ಲೋಕದ

ಗಮನವನ್ನು ತನ್ನಡೆಗೆ ಸೆಳೆದು ಕೊಂಡಿದ್ದಾನೆ. ಶಿವಣ್ಣನ ಎರಡೂ ಕೃತಿಗಳಲ್ಲಿ ವೈಚಾರಿಕ ಸಂಘರ್ಷವಿದೆ. ಸಾತ್ವಿಕ ಆಕ್ರೋಶವಿದೆ. ಅರಿವಿನ ಬೆಳಕಿದೆ. ಮುಖ್ಯವಾಗಿ ಸಮಚಿತ್ತವಿದೆ. ಸಾಲದಕ್ಕೆ ಮಮತೆಯ ದನಿಯದೆ ಎಂದಿದ್ದಾರೆ.

ಸೂಗಯ್ಯ ಹಿರೇಮಠ ಅವರು ಮುನ್ನುಡಿಯಲ್ಲಿ ಕರಗದ ಬೆಣ್ಣೆ ಕವನ ಸಂಕಲನದಲ್ಲಿಯ ಬಹಳಷ್ಟು ಕವಿತೆಗಳು ಶರಣರ ಚರಿತ್ರೆ ಹಾಗೂ ಕಾಯಕ ಕುರಿತಿವೆ. ಹನ್ನೆರಡನೆಯ ಶತಮಾನದ ಬಸವಾದಿ ಶರಣರು, ಇಹ ಪರದ ಚಿಂತನೆ ಮಾಡಿದವರು. ವಾಸ್ತವಿಕ ಬದುಕಿಗೆ ಬೇಕಾಗುವ ಸತ್ಯ, ಶುದ್ಧ ಕಾಯಕ ನಂಬಿದ ತತ್ವಕ್ಕೆ ಪ್ರಾಮಾಣಿಕ ನಿಷ್ಟೆ ದಾಸೋಹದ ಮೂಲಕ ಮಾಡಿದೆ. ಸಮಾಜೋಧಾರ್ಮಿಕ ಕಾರ್ಯಗಳು ಆಧುನಿಕ ಜಗತ್ತಿಗೆ ನೀಡಿದ ಮಹತ್ವದ ಮೌಲ್ಯಗಳಾಗಿವೆ. ಶರಣರ ಸರಳ ಜೀವನ, ಅವರು ರಚಿಸಿದ ವಚನಗಳು, ಕವಿಯ ಮೇಲೆ ಗಾಢ ಪ್ರಭಾವ ಬೀರಿವೆ. ಶಿವಣ್ಣನವರ ಕಾವ್ಯ ಪ್ರತಿಭೆಯ ಹಿಂದೆ ಪ್ರಬಲವಾದ ಚಿಂತನೆಯೇ ಇಲ್ಲಿಯ ಕವನಗಳಲ್ಲಿ ಅಭಿವ್ಯಕ್ತಗೊಂಡಿದೆ ಎಂದು ಸರಿಯಾಗಿ ಹೇಳಿದ್ದಾರೆ.

### ಶ್ರೀ ಕುಪೇಂದ್ರ ಎಸ್. ವಠಾರ್

ಶ್ರೀ ಕುಪೇಂದ್ರ ಎಸ್. ವಠಾರ್‌ರ ತಂದೆ ಶಿವಪ್ಪ ತಾಯಿ ಶರಣಮ್ಮ ಎಂ.ಎ.ಪದವಿ ಪಡೆದ ಇವರು ನಾಯ್ಕಲ್ ಅಂಚೆ ಕಚೇರಿಯ ಉಪ ಅಂಚೆ ಪಾಲಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀಯುತರ ಕಾವ್ಯ ನಾಮ ಕುಮಾರ ಕೇಶವ.

ಹರಿತ ಶೈಲಿಯ ಯುವ ಬರಹಗಾರರಲ್ಲಿ ಶ್ರೀಯುತರು ಒಬ್ಬರು ಸಮಾನತೆ ಸ್ವಾತಂತ್ರ್ಯ ಸಂಘರ್ಷಗಳಿಗೆ ತುಡಿಯುತ್ತಾ, ಬಡತನ, ಅನಕ್ಷರತೆ, ನಿರುದ್ಯೋಗ, ಭಯೋತ್ಪಾದನೆ, ಜಾತಿ ವರದಕ್ಷಿಣೆ ಹಸಿವಿನಂತಹ ಪ್ರಮುಖ ಸಮಸ್ಯೆಗಳಿಗೆ ಸಾಹಿತ್ಯದ ಮೂಲಕ ಪರಿಹಾರ ಕಂಡು ಕೊಳ್ಳುವ ಸರಳ ಸಜ್ಜನಿಕೆಯ ಜೀವ. ಅಪರೂಪದ ವ್ಯಕ್ತಿತ್ವ.

ಆಳಂದ ತಾಲೂಕಿನ ಹಳ್ಳಿ ಸಲಗರ ಗ್ರಾಮದಲ್ಲಿ ಜನಿಸಿದ ಇವರು, ಬಡತನದ ಮಧ್ಯೆ ಸಂಘರ್ಷ ಜೀವಿಯಾಗಿ ಶಿಕ್ಷಣ ಪಡೆದವರು. 1991 ರಿಂದ ಅಂಚೆ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅತ್ಯುತ್ತಮ ಕೆಲಸಗಾರನೆಂದು ಜಿಲ್ಲಾ ಪ್ರಶಸ್ತಿ, ರಾಜ್ಯ ಪ್ರಶಸ್ತಿ ವಿಜೇತರಾಗಿದ್ದಾರೆ. ಕುಮಾರ ಕೇಶವ ಎಂಬ ಕಾವ್ಯ ನಾಮದ ಮೂಲಕ ಬರೆಯುತ್ತಿದ್ದು, ಅವರ ಚುಟುಕುಗಳು ತುಂಬಾ ಜನಪ್ರಿಯವಾಗಿವೆ. ಚುರುಕು ಶೈಲಿಯ

ಮೂಲಕ ಜನ ಮಾನಸ ತಲುಪುವ ಯುವ ಕವಿಗಳ ಸಾಲಿನಲ್ಲಿ ಇವರು ಒಬ್ಬರು.

ಕುಪೇಂದ್ರ ವಠಾರವರು ಪ್ರಜಾವಾಣಿ ದಿನಪತ್ರಿಕೆಯ ವಾಚಕರ ವಾಣಿಯಲ್ಲಿ ಚುರ್ ಚುರ್ ಎಂಬ ಚುಟುಕುಗಳು ಪ್ರಕಟಗೊಂಡಿದ್ದು, ಕಾನೂನು ಸಾಂದರ್ಭಿಕ ಸತ್ಯಗಳು ಎಂಬ ಕವನ ಸಂಕಲನ ಕೂಡ ಪ್ರಕಟಗೊಳಿಸಿದ್ದಾರೆ. ಈ ಕವನ ಸಂಕಲನದಲ್ಲಿ ಒಟ್ಟು 40 ಕವನಗಳಿವೆ. ಈ ಕವನಗಳಲ್ಲಿ ಬರುವ ವಿಷಯಗಳೆಂದರೆ ಸಮಾಜದಲ್ಲಿಯ ಕೂಲಿ ಕಾರ್ಮಿಕರು, ದೀನ ದಲಿತರ ಸಮಸ್ಯೆಗಳು, ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ತುಳಿತಕ್ಕೆ ಒಳಗಾದ ಕೆಳವರ್ಗದ ನಿರುದ್ಯೋಗ ಲಂಚ ವರದಕ್ಷಿಣೆ, ಜಾತಿ-ಧರ್ಮ, ಅಜ್ಞಾನದಲ್ಲಿ ಮುಳುಗಿರುವ ಬಡಜನತೆ ಮುಂತಾದ ವಿಷಯಗಳ ಆಕ್ರೋಶ ಅಭಿವ್ಯಕ್ತಗೊಂಡಿದೆ.

ನಿಸ್ವಾರ್ಥಿಗಳು

ಬಿಸಿಲಿಗೆ ಮೈಯೊಡ್ಡಿ
ದಾರಿಯನು ನಿರ್ಮಿಸಿದೇವು
ಕಾರ್ಖಾನೆಯನ್ನು ಹುಟ್ಟಿಸಿದೇವು
ಎತ್ತರದ ಏಳಂತಸ್ಥಿನ ಬಂಗಲೆಯನು ಕಟ್ಟಿದೇವು
ರಾಷ್ಟ್ರದ ಉತ್ಪಾದನೆಯನ್ನು ಹೆಚ್ಚಿಸಿದೇವು
ಬರೀ ರಾಷ್ಟ್ರಕ್ಕಾಗಿ ಜನರಿಗಾಗಿ
ನಿಸ್ವಾರ್ಥ ಸೇವೆ ಮಾಡಿ ಸಾಯುತ್ತಿದ್ದೇವೆ
ಹೊಟ್ಟೆಗೆ ಹಿಟ್ಟಿಲ್ಲದೆ ಉಡಲು ಬಟ್ಟೆಯಿಲ್ಲದೆ
ಇರಲು ಮನೆಯಿಲ್ಲದೆ
ಅಂತೆಯೇ ನಮ್ಮ ಹೆಸರು
ಕಸಬುದಾರರ ಪಟ್ಟಿಯಲ್ಲಿಯೇ ಮೀಸಲು॥

ದೇಶದ ಉತ್ಪಾದನ ಶಕ್ತಿಯಾದ ಬಡವರು ಮಳೆ ಬಿಸಿಲು ಚಳಿ ಎನ್ನದೇ ನಿಸ್ವಾರ್ಥತನದಿಂದ ದುಡಿಯುತ್ತಿದ್ದಾರೆ. ಆದರೆ ಅವರು ಮಾತ್ರ ದಟ್ಟ ದರಿದ್ರತನದಿಂದ ಹೊಟ್ಟೆಗೆ ಇಲ್ಲದೆ, ಇರಲು ಮನೆಯಿಲ್ಲದೆ ಪರದಾಡುವ ಸ್ಥಿತಿಯಲ್ಲಿದ್ದಾರೆ. ಇಂದು ಪ್ರಮಾಣಿಕ ಸೇವೆಗೆ ಯಾವುದೇ ಬೆಲೆ ಇಲ್ಲ ಎಂದು ಕವಿಗಳು ದುಃಖ ವ್ಯಕ್ತ ಪಡಿಸುತ್ತಾರೆ.

ಕಾನೂನು

ಕಾನೂನು ಮಾಡಿರುವುದು
ರಾಷ್ಟ್ರದ ದುಷ್ಟ ಶಕ್ತಿಯನ್ನು ಕೀಳಲು
ಅಟ್ಟಹಾಸ್ಯವನ್ನು ಹೊಡೆದು ಹಾಕಲು
ದುಷ್ಟರನ್ನು ಶಿಕ್ಷಿಸಲು
ಶಿಷ್ಟರನ್ನು ರಕ್ಷಿಸಲು
ಕಾನೂನು ಎಂದರೆ
ಬಡತನದ ನಿರ್ಮೂಲನೆ
ಸಮಾಜದ ಕಲ್ಯಾಣ
ಅಸ್ಪೃಶ್ಯತೆ ಅಸಮಾನತೆ ಮುಂತಾದವುಗಳು
ಅಂತ್ಯಗೊಳಿಸುವುದಾಗಿದೆ
ಆದರೆ
ಇಂದಿನ ಕಾನೂನು ಎಂಬ ಕಾರ್ಖಾನೆಯಲ್ಲಿ
ಮಂತ್ರಿಗಳು ಅಧಿಕಾರಿಗಳು
ಮೇಲಾಗಿ ಬಂಡವಾಳ ಶಾಹಿಗಳೇ ತುಂಬಿದ್ದಾರೆ.

ಈ ಕವನದಲ್ಲಿ ಕವಿಗಳು ಕಾನೂನು ಕಾಯ್ದೆಗಳನ್ನು ಸರಕಾರ ಮಾಡಿರುವುದು, ಸಮಾಜದ ಕಲ್ಯಾಣಕ್ಕಾಗಿ, ಸಮಾಜದಲ್ಲಿಯ ಅತ್ಯಾಚಾರ, ಅಂಧಕಾರ, ಬಡತನ, ಅನ್ಯಾಯ, ಶೋಷಣೆಗಳನ್ನು ತೊಲಗಿಸುವುದಕ್ಕಾಗಿ ಆದರೆ ಇಂದಿನ ಕಾನೂನು ಮಂತ್ರಿಗಳ, ಮೇಲಾಧಿಕಾರಿಗಳ, ಬಂಡವಾಳ ಶಾಹಿಗಳ ತುಳಿತಕ್ಕೆ ಒಳಗಾಗಿದೆ ಎಂದು ಆಕ್ರೋಶದಿಂದ ಹೇಳುತ್ತಾರೆ.

ಒಟ್ಟಿನಲ್ಲಿ ಹೇಳಬೇಕಾದರೆ ಕಾನೂನು ಎಂಬ ಈ ಕವನ ಸಂಕಲನದಲ್ಲಿ ಸಮಾಜದಲ್ಲಿಯ ಜಾತಿಯತೆ, ವಂಚನೆ, ಭ್ರಷ್ಟಾಚಾರ ಹಾಗೂ ನಿರುದ್ಯೋಗಿಗಳು ತೊಲಗಿ ಸಮಾನತೆ ಬರಲಿ ಎನ್ನುವುದೇ ಕವಿಗಳ ಆಸೆ. ಎಲ್ಲಾ ಕವನಗಳು ಹಳ್ಳಿಯ ಭಾಷಾ ಶೈಲಿಯಲ್ಲಿ ಸುಂದರವಾಗಿ ಮೂಡಿ ಬಂದಿವೆ.

ಈ ಕವನ ಸಂಕಲನ ಹಾಗೂ ಕವಿಯನ್ನು ಕುರಿತು ಹಿನ್ನುಡಿಯಲ್ಲಿ ಶ್ರೀಮತಿ ಚಂದ್ರಕಲಾ ಶಂಕರ ಅವರು ಕಲೆ ಕೇವಲ ಕಲೆಗಾಗಿ ಇರದೆ ಜೀವನಕ್ಕೆ ಉಪಯೋಗಿಯಾಗುವಂತಾಗಬೇಕು. ಕಾವ್ಯ ಬದುಕಿನ

ಬಗೆಗೆ ಸುಳ್ಳು ಕಲ್ಪನೆಗಳನ್ನು ಕೊಡದೆ ವಾಸ್ತವತೆಯನ್ನು ಬಿಂಬಿಸುವಂತಿರಬೇಕು ಎಂಬುದು ಅನುಭವಿಗಳ ಆಶಯ. ಆಳಂದ ತಾಲೂಕಿನ ಹಳ್ಳಿ ಸಲಗರದ ಕುಪೇಂದ್ರ ಅವರ ಕಾವ್ಯನಾಮ ಕುಮಾರ ಕೇಶವ ಇದೀಗ ತಮ್ಮ ಕಾನೂನು ಕವನ ಸಂಕಲನದಿಂದ ಕಾವ್ಯ ಪ್ರಪಂಚಕ್ಕೆ ಅಡಿ ಇಡುತ್ತಿರುವ ಅವರ ಕವನಗಳಿಗೆ ಇನ್ನೂ ಹೆಚ್ಚಿನ ಅನುಭವ, ಬಿಗುವು ಬರಬೇಕಿದೆ.

ಸಮಾಜದಲ್ಲಿಯ ಜಾತಿಯತೆ, ವಂಚನೆ, ಭ್ರಷ್ಟಾಚಾರ ಹಾಗೂ ನಿರುದ್ಯೋಗಗಳು ತೊಲಗಿ ಸಮಾನತೆ ನೆಲಸಲಿ ಎಂಬುದು ಕವಿಯ ಆಶಯವಾಗಿದೆ. ಕವಿ ಕನ್ನಡ ಸಾಹಿತ್ಯಕ್ಕೆ ಹೆಚ್ಚಿನ ಕಾಣಿಕೆ ಸಲ್ಲಿಸಲಿ ಎಂದು ಆಶಿಸುವೆವು ಎಂದು ಹಾರೈಸಿದ್ದಾರೆ. ಹೈದ್ರಾಬಾದ ಕರ್ನಾಟಕವು ಹಿಂದುಳಿದ ಪ್ರದೇಶವಾಗಿದ್ದು ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕುಪೇಂದ್ರ ಎಸ್. ವಠಾರ್ ಓದಿನೊಂದಿಗೆ ಕಾವ್ಯ ರಚನೆ ಅಭಿರುಚಿಯ ಹವ್ಯಾಸ ಬೆಳೆಸಿಕೊಂಡಿದ್ದು ಸ್ವಾಗತಾರ್ಹವಾಗಿದೆ. ಹಳ್ಳಿಯ ವಾತಾವರಣದಲ್ಲಿ ಹುಟ್ಟಿ ಬೆಳೆದ ಅನುಭವಗಳೊಂದಿಗೆ ಕವನಗಳು ತೀರ ಹಳ್ಳಿಯ ಭಾಷೆಯಲ್ಲಿವೆ. ಈ ಸಮಾಜವು ವರ್ಣಾಶ್ರಮ ಪದ್ದತಿಯ ಮೇಲೆ ಆಧಾರಿತವಾಗಿದ್ದು ಜಾತಿ, ಮತ, ಪಂಥಗಳು, ಸಂಪ್ರದಾಯ ಶಕ್ತಿಗಳು ಕುತಂತ್ರತನದಿಂದ ಉಚ್ಚ, ನೀಚ, ಭೇದ ಹುಟ್ಟಿಸಿ ಬೆಳೆಸಿ ಸಂಪೂರ್ಣ ವ್ಯವಸ್ಥೆಯನ್ನು ಶೋಷಣೆ ಮಾಡುವ ವರ್ಗ ಇದೆ ಎಂದು ಧೈರ್ಯದಿಂದ ಕಾವ್ಯ ರಚನೆ ಮಿದ್ದು ಸಮಾಧಾನ ಸಂಗತಿಯಾಗಿದೆ.

ಶ್ರೀ ಶಿವಶರಣಪ್ಪ ಜವಳಿ ಆಳಂದ ಇವರು ಕವನ ಸಂಕಲನ ಹಾಗೂ ಕವಿಗಳನ್ನು ಕುರಿತು ಅಭಿಪ್ರಾಯ ಎಂಬ ಶೀರ್ಷಿಕೆಯಲ್ಲಿ ಈ ವ್ಯವಸ್ಥೆಯ ಕಾವಲುಗಾರರು ಎಷ್ಟೇ ಯೋಜನಾ ಬದ್ಧವಾಗಿ ಬರುವ ಸಂತತಿಯನ್ನು ಕೊಳೆಸುವ ಪ್ರಯತ್ನ ಮಾಡಿದರೂ ಕೂಡ ವಿದ್ಯೆಯ ಪರಂಪರೆಯಿಲ್ಲದ ಜಾತಿಯಲ್ಲಿ ಹುಟ್ಟಿದ ಕುಪೇಂದ್ರನಂತಹ ನವತರುಣರು ಪ್ರಸ್ತುತ ವ್ಯವಸ್ಥೆಯನ್ನು ಉದ್ವಸ್ತಗೊಳಿಸುವುದಕ್ಕಾಗಿ ಹುಟ್ಟಿ ಬರುತ್ತಲೆ ಇರುತ್ತಾರೆ. ಆದರೆ ಇದರಲ್ಲಿ ಎಷ್ಟು ತರುಣರು ಹೀಗೆ ವಿದ್ರೋಹಿಯಾಗಿ ಉಳಿಯುತ್ತಾರೋ ಅಥವಾ ಬೇರೆಯವರಂತೆ ಈ ಕರಾಳ ವ್ಯವಸ್ಥೆಯ ತುತ್ತಾಗಿ ತಮ್ಮ ಕ್ರಾಂತಿಕಾರತ್ವ ಕಳೆದು ಕೊಂಡು ವ್ಯವಸ್ಥೆಯಲ್ಲಿ ಬೆರೆತು ಹೋಗುತ್ತಾರೊ! ಇದು ಹೇಳುವದೆಂದರೆ ಭವಿಷ್ಯವಾಣಿ ನುಡಿದಂತಾಗುವದು ಎಂದು ಹೇಳಿರುವರು.

**ಚಂದ್ರಕಾಂತ ಕರದಳ್ಳಿ**

ಚಂದ್ರಕಾಂತ ಕರದಳ್ಳಿಯವರ ಪರಿಚಯವನ್ನು ಗದ್ಯ ಸಾಹಿತ್ಯ ವಿಭಾಗದಲ್ಲಿ ಕೊಡಲಾಗಿದೆ. ಶ್ರೀಯುತರು ಕತೆ, ಕಾದಂಬರಿ, ಶಿಶುಪ್ರಾಸ, ಚಿಂತನ, ಲೇಖನಗಳನ್ನು ಪ್ರಕಟಿಸಿದ್ದು, ಜೊತೆಗೆ ಒಗಟುಗಳನ್ನು ಕೂಡ ರಚಿಸಿ ಪ್ರಕಟಿಸಿದ್ದಾರೆ.

1. ನೂರೊಂದು ಹೊಸ ಒಗಟುಗಳು
2. ಪುಟ್ಟನ ಕನಸು
3. ಗಾಡಿ ಬಂತು ಗಾಡಿ

ಈ ಕೃತಿಯಲ್ಲಿ ಒಟ್ಟು 101 ಒಗಟುಗಳಿವೆ. ಇಲ್ಲಿಯ ಒಗಟುಗಳು ಹಲವಾರು ಹೊಸ ವಿಷಯಗಳನ್ನು ಒಳಗೊಂಡ ಒಗಟುಗಳಾಗಿವೆ. ಜಿಲ್ಲೆಯ ಹೆಸರುಗಳು, ಕವಿಗಳ ಹೆಸರುಗಳು, ವಚನಕಾರರ ಹೆಸರುಗಳು, ಜ್ಞಾನಪೀಠ ಪ್ರಶಸ್ತಿ ವಿಜೇತರ ಹೆಸರುಗಳು, ವರ್ತಮಾನ ವಿಷಯಗಳು, ಪ್ರಚಲಿತ ವಿಷಯಗಳು ಮುಂತಾದ ಸಂಗತಿಗಳನ್ನು ಒಳಗೊಂಡಿದ್ದು ಈ ಒಗಟುಗಳ ಮೂಲಕ ಮಕ್ಕಳ ಆಲೋಚನ ಶಕ್ತಿ ಹೆಚ್ಚುವುದರ ಜೊತೆಗೆ ಸಾಮಾನ್ಯ ಜ್ಞಾನದ ಪರಿಚಯವೂ ಆಗುವುದು.

ಇಲ್ಲಿಯ ಭಾಷಾ ಶೈಲಿಯೂ ಸರಳವಾಗಿ ಸುಂದರವಾಗಿ ಆಡು ಭಾಷೆಯಲ್ಲಿ ಮೂಡಿಬಂದಿದೆ. ಒಗಟುಗಳ ಕೊನೆಯಲ್ಲಿ ಅವುಗಳ ಉತ್ತರ ಸಹ ಕೃತಿಯಲ್ಲಿ ದೊರೆಯುತ್ತದೆ. ಇಲ್ಲಿರುವ ಕೆಲವೊಂದು ಒಗಟುಗಳು ಈ ಕೆಳಗಿನಂತಿವೆ.

1. ಪಾತರಗಿತ್ತಿ ಪಕ್ಕಾ

ನೋಡಿದೇನೇ ಅಕ್ಕಾ
ಧಾರವಾಡದಲ್ಲಿ ಕೂತು
ನಾಕುತಂತಿ ನಾಕ
ಬದುಕೊಂದು ಪಾಕ
ಪದಗಳೊಡನೆ ಆಟ
ಪಡೆದ ಜ್ಞಾನ ಪೀಠ
ಯಾರು ಹೇಳಿ ರೀತಿ?

ಉತ್ತರ : ದ.ರಾ.ಬೇಂದ್ರೆ

2. ಜನಿಸಿದನು ಬಾಗೇವಾಡಿಯಲ್ಲಿ

ಕಾಯಕವ ಕೈಗೊಂಡನು ಬಿಜ್ಜಳನಲ್ಲಿ

ಸಾರಿದನು ಸಮಾನತೆಯ ಕ್ರಾಂತಿ

ಇರಲಿಲ್ಲ ಆತನಲ್ಲಿ ಯಾವುದೇ ಭೀತಿ

ಆದನು ನೋಡು ನಾಡಿಗೆ ಅಣ್ಣ

ನವಕರ್ನಾಟಕಕ್ಕೆ ಆತ ಕಣ್ಣ

ಹೆಸರು ಹೇಳಿದರೆ ನೀವು ಜಾಣ

ಉತ್ತರ : ಬಸವಣ್ಣ

3. ಸಮುದ್ರ ತೀರದ ಊರು

ಹಿರಿದಾದ ಹಡಗಿನ ಬಂದರು

ರಸಗೊಬ್ಬರ ತಯಾರಿಕೆ ತಾಣ

ರೈತರ ಬಳಗಕೆ ಪ್ರಾಣ

ಮಂಗನ ಹೆಸರಲಿ ಊರುಂಟು

ತನ್ನದೆ ಭಾಷೆಯ ಬೆಡಗುಂಟು

ಜಿಲ್ಲೆಯ ಹೆಸರು ಹೇಳಿದರೆ

ಸಿಗಬಹುದು ನಿಮಗೆ ಗಂಟು [22]

ಉತ್ತರ : ಮಂಗಳೂರು

ಈ ಕೃತಿ ಹಾಗೂ ಲೇಖಕರನ್ನು ಕುರಿತು ಬೆನ್ನುಡಿಯಲ್ಲಿ ಪ್ರಕಾಶಕರು ಶ್ರೀ ಚಂದ್ರಕಾಂತ ಕರದಳ್ಳಿಯವರು ಬರೆದ ನೂರೊಂದು ಹೊಸ ಒಗಟುಗಳ ಸೂಡು ಇಲ್ಲಿದೆ ಪ್ರತಿಯೊಂದು ಒಗಟುಗಳಲ್ಲಿ ಹೊಸತನವಿದೆ. ವೈವಿಧ್ಯತೆಯಿದೆ, ವ್ಯಕ್ತಿ ಪರಿಚಯ, ಸಾಹಿತ್ಯದ ಪರಿಚಯ, ಊರಿನ ಇತಿಹಾಸ, ಚರಿತ್ರೆ, ಐತಿಹ್ಯಗಳ ಮೂಲಕ ಒಗಟುಗಳಲ್ಲಿ ಹುಡುಕಾಟವಿದೆ.

ಚಂದ್ರಕಾಂತ ಕರದಳ್ಳಿಯವರು ತಮ್ಮ ಅಧ್ಯಾಪಕ ವೃತ್ತಿಯಲ್ಲಿ ಮೂರು ದಶಕಗಳನ್ನು ಸವೆಸಿದ್ದಾರೆ. ತಮ್ಮ ವೃತ್ತಿಯ ಪಯಣದಲ್ಲಿ ರಾಷ್ಟ್ರಪ್ರಶಸ್ತಿ ಪುರಸ್ಕೃತರೂ ಆಗಿದ್ದಾರೆ. ಅವರ ಬೋಧನೆಯಲ್ಲಿ ಮಾಗಿದ ಅನುಭವದ ಕೆನೆಪದರು ಇಲ್ಲಿಯ ಒಗಟುಗಳಲ್ಲಿ ದಕ್ಕಿದೆ ಎಂದು ಸರಿಯಾಗಿ ಹೇಳಿದ್ದಾರೆ.

2. ಪುಟ್ಟನ ಕನಸು

ಪುಟ್ಟನ ಕನಸು ಎಂಬ ಈ ಪದ್ಯಗಳ ಸಂಗ್ರಹದಲ್ಲಿ ಒಟ್ಟು 30 ಪದ್ಯಗಳಿವೆ. ಅವುಗಳಲ್ಲಿ ನಿಸರ್ಗ, ಶಿಕ್ಷಣ, ಆಟ, ಪಾಠ, ಪ್ರಾಣಿ, ಪಕ್ಷಿ ಮುಂತಾದ ವಿಷಯಗಳ ಪದ್ಯಗಳು ಈ ಸಂಗ್ರಹದಲ್ಲಿವೆ. ಪದ್ಯಗಳು ಚಿತ್ರ ಸಹಿತವಾಗಿ ಆಡು ಭಾಷಾ ಸೊಗಡಿನಲ್ಲಿ ರಚನೆಗೊಂಡಿವೆ. ಅವುಗಳಲ್ಲಿ ಕೆಲವು ಈ ಕೆಳಗಿನಂತಿವೆ.

ಆನೆ ಮತ್ತು ನಾಯಿ

ಆನೆಯೊಂದು ಕಾಡಿನಿಂದ
ಊರಿನಲ್ಲಿ ಬಂದಿತು
ಅದನು ಕಂಡು ನಾಯಿಯೊಂದು
ಭಯವುಗೊಂಡು ಬೊಗಳಿತು
ನಾಯಿ ನೋಡಿ ಸಣ್ಣದೆಂದು
ಆನೆ ಮುಂದೆ ನಡೆಯಿತು
ಅದರ ಹಿಂದೆ ನಡೆದ ನಾಯಿ
ಮತ್ತು ದೊಡ್ಡದಾಗಿ ಬೊಗಳಿತು।
ಸಿಟ್ಟಿನಿಂದ ಆನೆಯು
ಸೊಂಡಿಲನು ಎತ್ತಲು
ಕುಂಯ್ ಕುಂಯ್ ಎನುತ
ಸಂದಿಯೊಳಗೆ ಓಡಿತು

ಈ ಪದ್ಯದಲ್ಲಿ ಆನೆ ಹೋಗುತ್ತಿತ್ತು ನಾಯಿ ಬೊಗಳುತ್ತಿತ್ತು ಎಂಬ ಗಾದೆ ಮಾತಿನ ತಾತ್ಪರ್ಯವಿದೆ.

2. ಹಸಿರು – ಉಸಿರು

ಬಿಸಿಲು ಹೆಚ್ಚಿತು
ಚಳಿಯು ಬಿಟ್ಟಿತು
ಮಳೆಯು ಬಾರದೆ ಹೋಯಿತು।
ಸಸಿಯು ನೆಡದೆ
ಮರವು ಕಡಿದು

ಕಾಡು ನಾಶವು ಹೊಂದಿತು।

ಕಾಡು ಬೆಳೆಸಿ

ನಾಡು ಉಳಿಸಿ

ವೇದಿಕೆ ಘೋಷಣೆಯಾಯಿತು।

ಈ ಕೃತಿ ಕುರಿತು ಡಾ.ಸಿದ್ದಲಿಂಗಯ್ಯ ಅವರು, ಪ್ರಿಯ ಮಿತ್ರರಾದ ಶ್ರೀ ಚಂದ್ರಕಾಂತ ಕರದಳ್ಳಿಯವರು ನಮ್ಮ ನಾಡಿನ ಪ್ರಮುಖ ಶಿಶು ಸಾಹಿತಿಗಳಲ್ಲಿ ಒಬ್ಬರು. ನಲಿದಾಡು ಬಾ ನವಿಲೆ ಮತ್ತು ಆನೆ ಬಂತು ಆನೆ ಮುಂತಾದ ಕೃತಿಗಳನ್ನು ನೀಡಿ ಚಂದ್ರಕಾಂತರು ಮಕ್ಕಳ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಮಕ್ಕಳ ಸಾಹಿತ್ಯ ಉಪೇಕ್ಷೆಗೆ ಒಳಗಾಗಿದೆ ಎಂಬ ಮಾತು ಕೇಳಿ ಬರುತ್ತಿರುವ ಈ ಸಂದರ್ಭದಲ್ಲಿ ಚಂದ್ರಕಾಂತ ಕರದಳ್ಳಿಯವರು ಉತ್ಸಾಹದಿಂದ ಕೃತಿ ರಚನೆಯಲ್ಲಿ ತೊಡಗಿರುವುದು ಸಂತೋಷದ ಸಂಗತಿ.

ಪ್ರಸ್ತುತ ಪುಟ್ಟನ ಕನಸು ಹಲವು ಕಾರಣಗಳಿಂದ ವಿಶಿಷ್ಟವಾಗಿದೆ. ಇಲ್ಲಿಯ ರಚನೆಗಳು ಲವಲವಿಕೆಯಿಂದ ಕೂಡಿದ್ದು ಮಕ್ಕಳಲ್ಲಿ ಕುತೂಹಲವನ್ನು ಉಂಟು ಮಾಡುವಂತಿವೆ. ನಿಸರ್ಗದ ವಿವಿಧ ಸಂಗತಿಗಳ ಬಗ್ಗೆ ಮಕ್ಕಳಲ್ಲಿ ಆಸಕ್ತಿಯನ್ನು ಇಲ್ಲಿಯ ಕವಿತೆಗಳು ಕೆರಳಿಸುತ್ತವೆ ಎಂದು ಸರಿಯಾಗಿ ಹಾರೈಸಿದ್ದಾರೆ.

3. ಗಾಡಿ ಬಂತು ಗಾಡಿ

ಕರದಳ್ಳಿಯವರ ಈಗಾಗಲೇ ಆನೆ ಬಂತು ಆನೆ ಎಂಬ ಶಿಶುಪ್ರಾಸ ಸಂಕಲನ. ಈ ಸಂಕಲನದಲ್ಲಿ ಬರುವ ಎಲ್ಲಾ ಪ್ರಾಸಗಳು ಮಕ್ಕಳ ಮನಕ್ಕೆ ಸಂತೋಷಕೊಡುವ ನಿಸರ್ಗ ರಮಣೀಯತೆ ಹಕ್ಕಿ ಪಕ್ಷಿಗಳಾದ ಇಲಿ, ಅಳಿಲು, ಗಡಿಯಾರ, ಹುಲಿ, ಗುಬ್ಬಿ, ಬೆಕ್ಕು, ಮಂಗ, ಪಾತರಗಿತ್ತಿ, ಕೊಕ್ಕರೆ, ಕೋಗಿಲೆ, ಹೂವು, ಗಿಡ, ಮರ, ಗಣಪ,ಮೊದಲಾದ ವಿಷಯಗಳು ಇಲ್ಲಿಯ ಪ್ರಾಸಗಳ ವಿಷಯ ವಸ್ತುಗಳಾಗಿವೆ.

1. ಚೀಂ ಚೀಂ ಇಲಿಮರಿ

ಚೀಂ ಚೀಂ ....

ಅನ್ನುವ ಇಲಿಮರಿ

ಮನೆಯ ಹೊಕ್ಕರೆ ಸಾಕು

ನಮಗೆ ಕಿರಿ ಕಿರಿ

ಹುಲಿಯನು ಹಿಡಿಬೋದು

ಇಲಿಯನು ಹಿಡಿಲಾರೆ

ಇಲಿ ಹಿಡಿದರೆ ಕೊಡುತಾರೆ

ಆಕಾಶದ ಮೇಲಿನ ತಾರೆ॥ 1

2. ನವಿಲೆ ನವಿಲೆ

ನವಿಲೆ ನವಿಲೆ

ಕುಣಿಯುವೆ ಏಕೆ?

ಮೋಡದ ಗುಡುಗು

ಗುಡುಗಿತು ಅದಕೆ

ನವಿಲೆ ನವಿಲೆ

ಏನ್ ನಿನ್ನ ವಯ್ಯಾರ?

ದೇವರು ಕೊಟ್ಟ

ರೂಪದ ಸಿಂಗಾರ॥

ಗಾಡಿ ಬಂತು ಗಾಡಿಯಲ್ಲಿ ಸುಮಾರು 52 ಶಿಶು ಪ್ರಾಸಗಳಿದ್ದು ಸರಳವಾದ ಆಡು ಭಾಷೆ ಶೈಲಿಯಲ್ಲಿ ಚಿತ್ರ ಸಹಿತವಾಗಿ ರಚನೆಗೊಂಡಿವೆ. ಇಲ್ಲಿ ಬರುವ ಪ್ರಾಸಗಳು ವೈವಿಧ್ಯಮಯ ವಿಷಯಗಳಿಂದ ಕೂಡಿದ್ದು ಮಕ್ಕಳು ಹಾಡಿ ಕುಣಿಯಲು ಅನೂಕೂಲಕರವಾಗಿವೆ.

ಈ ಕೃತಿ ಹಾಗೂ ಲೇಖಕರನ್ನು ಕುರಿತು ಬೆನ್ನುಡಿಯಲ್ಲಿ ಎಚ್.ಎಸ್.ವೆಂಕಟೇಶ ಮೂರ್ತಿ ಅವರು ಶ್ರೀಯುತ ಚಂದ್ರಕಾಂತ ಕರದಳ್ಳಿ ಅವರು ರಾಷ್ಟ್ರಪ್ರಶಸ್ತಿ ಪುರಸ್ಕೃತರಾದ ಶಿಕ್ಷಕರು ಸಹಜವಾಗಿಯೇ ಮಕ್ಕಳ ಬಗ್ಗೆ ವಿಶೇಷವಾದ ಮಮತೆಯನ್ನು ಹೊಂದಿರುವವರು. ಅದರ ಫಲವೋ ಎಂಬಂತೆ ಈಗಾಗಲೇ ಅನೇಕ ಮಕ್ಕಳ ಕೃತಿಗಳನ್ನು ರಚಿಸಿದ್ದಾರೆ. ಆನೆ ಬಂತು ಆನೆ ಅವರ ಮೊದಲ ಶಿಶು ಪ್ರಾಸಗಳ ಸಂಕಲನ ಈಗ ಗಾಡಿ ಬಂತು ಗಾಡಿ ಎಂಬ ಎರಡನೇ ಶಿಶು ಪ್ರಾಸಗಳ ಕೃತಿಯನ್ನು ಪ್ರಕಟಿಸುತ್ತಿದ್ದಾರೆ. ಶ್ರೀಯುತರು ಮಕ್ಕಳಿಗೆ ಪ್ರಿಯವಾಗುವಂಥ ಕೃತಿಗಳನ್ನು ರಚಿಸಿ ಕೃತಕೃತ್ಯರಾಗಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ ಎಂದು

ಮನತುಂಬಿ ನುಡಿದಿರುವರು.

### ಶ್ರೀ ನಾಗಪ್ಪತ್ರಿವೇದಿ

ಶ್ರೀ ನಾಗಪ್ಪತ್ರಿವೇದಿಯವರು ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ರಂಗಂಪೇಟೆಯವರು ವೃತ್ತಿಯಲ್ಲಿ ಶಿಕ್ಷಕರಾಗಿದ್ದವರು. ಅನೇಕ ವರ್ಷಗಳಿಂದ ಚುಟುಕು ಹನಿಗವನವನ್ನು ಓದುವುದರಲ್ಲಿ ಆಸಕ್ತಿ ಹೊಂದಿ ಮುಂದೆ ಅವುಗಳ ಆಕರ್ಷಣೆ ಹೆಚ್ಚುತ್ತಾ ಹೋಗಿ ಹಲವಾರು ಚುಟುಕುಕಾರರ ಪ್ರತಿಭೆಗೆ ಸೋತು ಕಿರಿಯದರಲ್ಲಿ ಹಿರಿಯದು ಎಂಬಂತೆ ಅರ್ಥಪೂರ್ಣವಾದ ಚಿಕ್ಕ ಚಿಕ್ಕ ವಾಕ್ಯ ವೃಂದಗಳನ್ನು ತಾನು ಬರೆಯಬಹುದಲ್ಲ ಎಂಬ ಉತ್ಸುಕತೆ ಉಂಟಾಗಿ ಚುಟುಕಗಳನ್ನು ಬರೆಯಲು ಪ್ರಾರಂಭಿಸಿದೆ ಎಂದು ಕವಿಗಳೇ ಹೇಳಿದ್ದಾರೆ.

ಶ್ರೀಯುತರ ಚುಟುಕುಗಳು ಚುಟುಕು ಬ್ರಹ್ಮ ಎಂದೇ ಖ್ಯಾತಿ ಹೊಂದಿದ ದಿನಕರ ದೇಸಾಯಿ, ದುಂಡಿರಾಜ, ಸಿ.ಪಿ.ಕೆ., ಬಿ.ಎ.ಸನದಿಯವರ ಚುಟುಕುಗಳನ್ನು ಹೋಲುವ ಸಾಮಾಜಿಕ ಕಳಕಳಿಯ ರಚನೆಗಳಾಗಿವೆ. ಇವರು ತಮ್ಮ ಪ್ರತಿಯೊಂದು ಕ್ಷಣದ ಅನುಭವದ ಅನಿಸಿಕೆಗಳನ್ನು ಚುಟುಕುಗಳ ರೂಪದಲ್ಲಿ ವ್ಯಕ್ತಪಡಿಸಿದ್ದಾರೆ. ಇವರು ಎರಡು ಚುಟುಕು ಸಂಗ್ರಹಗಳನ್ನು ಪ್ರಕಟಿಸಿದ್ದು ಅವು ಈ ಕೆಳಗಿನಂತಿವೆ.

1. ಚುಟುಕು ಚುರುಮುರಿ
2. ಚುಟುಕು ಚುಂಬಕ

ಚುಟುಕು ಚುರುಮುರಿ

ಇದು ಮೊದಲ ಚುಟುಕು ಸಂಗ್ರಹವಾಗಿದ್ದು ಇದರಲ್ಲಿ ಭ್ರಷ್ಟ ರಾಜಕೀಯ ಲಂಚಕೋರತನ, ಸಾವು–ನೋವು, ಜಾತಿ, ಧರ್ಮ, ಪ್ರೀತಿ, ಪ್ರೇಮ ಮುಂತಾದ ವಿಷಯಗಳನ್ನು ಒಳಗೊಂಡ ನೈಜ ಸತ್ಯದ ರಸ ಘಟ್ಟಗಳಾಗಿವೆ.

ಕವಿಯ ಅನುಭವಗಳು ಸಾಗರದ ಅಲೆಗಳಂತೆ ಸಮಾಜದಲ್ಲಿಯ ಓರೆ–ಕೋರೆಗಳನ್ನು ತಿದ್ದುವ ಮಂತ್ರಗಳಂತೆ ಚುಟುಕಗಳಲ್ಲಿ ರೂಪಗೊಂಡಿವೆ.

ದ್ವಂದ್ವನೀತಿ
ಮಂತ್ರಿಗಳದ್ದು

ದ್ವಂದ್ವನೀತಿ

ಬಹಿರಂಗದಲ್ಲಿ

ದೇಶ ಮೇಲೆತ್ತುವ

ಕಸರತ್ತು

ಅಂತರಂಗದಲ್ಲಿ

ಸ್ವಾರ್ಥ ಸಾಧನೆಯ

ಮಸಲತ್ತು।।

ಈ ಚುಟುಕಿನಲ್ಲಿ ಇಂದಿನ ನಮ್ಮ ರಾಜಕೀಯ ನಾಯಕರ ಸ್ವಾರ್ಥ ಸಾಧಕ ನೀತಿಯ ಪ್ರತೀಕವಾದ ವಿಷಯ ವ್ಯಕ್ತವಾಗಿದೆ. ಮೇಲ್ನೋಟಕ್ಕೆ ದೇಶೋದ್ಧಾರ ಮಾತುಗಳನ್ನಾಡುವ ನಮ್ಮ ರಾಜಕಾರಣಿಗಳು ಮಾಡುವುದೆಲ್ಲ ಸ್ವಾರ್ಥ ಸಾಧನೆ ಕೆಲಸಗಳು ಎಂದು ಕವಿಗಳು ಹೇಳುತ್ತಾರೆ.

ಲಂಚ ಕೊಟ್ಟರೆ

ಲಂಚ ಕೊಟ್ಟರೆ

ಮೇಜು ಬಾಯಿ ತೆರೆವುದು

ಕಪಾಟು ಬೆತ್ತಲಾಗುವುದು

ಕಡತಕ್ಕೆ ಕಾಲು ಬರುವುದು

ಲೋಪ ಮರೆಯಾಗುವುದು

ಶಾಪ ವರವಾಗುವುದು

ಲಂಚ, ಮೋಸ, ಕಳ್ಳತನ ಎನ್ನುವುದು ಇಂದು ದೇಶದಲ್ಲಿ ಎಲ್ಲೆಲ್ಲೂ ತಾಂಡವ ಆಡುತ್ತಿದೆ. ಲಂಚ ಕೊಟ್ಟರೆ ಸಾಕು ಎಲ್ಲಾ ತಪ್ಪು ಒಪ್ಪುಗಳು ಮರೆಯಾಗುವವು ಎಂದು ಕವಿಗಳು ಹೇಳಿದ್ದಾರೆ.

ನಾಗಪ್ಪ ತ್ರಿವೇದಿಯವರು ಸರಳವಾದ ಆಡು ಭಾಷಾ ಶೈಲಿಯಲ್ಲಿ ನಿತ್ಯ ಜೀವನದ ಹಲವಾರು ವಿಷಯಗಳನ್ನು ಸಾಮಾಜಿಕ, ರಾಜಕೀಯ, ಧಾರ್ಮಿಕ ಮುಂತಾದ ವಿಷಯಗಳನ್ನು ಈ ಚುಟುಕ ಚುರಿಮುರಿಯ ಮೂಲಕ ತಮ್ಮ ವಿಚಾರಗಳನ್ನು ವ್ಯಕ್ತ ಪಡಿಸಿದ್ದಾರೆ. ಈ ಚುಟುಕ ಸಂಕಲನ ಹಾಗೂ ಕವಿ ನಾಗಪ್ಪತ್ರಿವೇದಿಯವರನ್ನು ಕುರಿತು ಬೆನ್ನುಡಿಯಲ್ಲಿ ಶಾಂತಪ್ಪ ಬೂದಿಹಾಳ ಅವರು ರಂಗಂಪೇಟೆಯವರಾದ

ಶ್ರೀ ನಾಗಪ್ಪ ತ್ರಿವೇದಿ ಮಾಸ್ತರರು ಎಲ್ಲರಿಗೂ ಅಚ್ಚುಮೆಚ್ಚಿನವರು ಚುಟುಕು ಪ್ರಿಯ, ತ್ರಿವೇದಿಯವರು ಕಳೆದ ಅನೇಕ ವರ್ಷಗಳಿಂದ ಚುಟುಕುಗಳನ್ನು ಬರೆಯುತ್ತಿದ್ದರೂ ಯಾರಿಗೂ ತಿಳಿಸಿರಲಿಲ್ಲ, ಈಗ ಉತ್ತಮ ಚುಟುಕುಕಾರರೆಂದು ಪ್ರಶಂಸೆಗೆ ಪಾತ್ರರಾಗಿದ್ದಾರೆ. ಸಭೆ ಸಮಾರಂಭಗಳಲ್ಲಿ ಜನರು ಅವರ ಚುಟುಕುಗಳನ್ನು ಆಸಕ್ತಿಯಿಂದ ಆಲಿಸುತ್ತಾರೆ. ಮುಷ್ಠಿ ಅಕ್ಕಿಯಲ್ಲಿ ಮೃಷ್ಟಾನ್ನ ತಯಾರಿಸುವ ಕಿರಿದರೊಳ್ ಪಿರಿದರ್ಥಮಂ ಪೇಳ್ವ್ ಕಲೆ ತ್ರಿವೇದಿಯವರಿಗೆ ಸಿದ್ದಿಸಿದೆ ಎಂದರೆ ಅತಿಶೋಕ್ತಿಯಾಗದು ಎಂದಿದ್ದಾರೆ.

ಮುನ್ನುಡಿಯಲ್ಲಿ ಎ.ಕೃಷ್ಣ ಸುರಪುರ ಅವರು, ಸಾಸುವೆಯಲ್ಲಿ ಸಾಗರ ತುಂಬುವ ಸಿದ್ಧಿ ಚಿಂತಕರಾದ ಶ್ರೀ ತ್ರಿವೇದಿಯವರಿಗೆ ಕೈವಶವಾಗಿದೆ. ಚಿಂತೆ ಮಾಡುವವರೆಲ್ಲರಿಗೂ ಚಿಂತನ ಮಾಡಲು ಹಚ್ಚುವ ಪ್ರೇರಣಾತ್ಮಕವಾದ ಅವರ ರಚನಾ ತಂತ್ರ ಮಂತ್ರ ಮುಗ್ದರನ್ನಾಗಿಸುವಂತಿದೆ. ಇಲ್ಲಿನ ಅನೇಕ ಚಟುಕುಗಳು ಮುಕ್ತ ಛಂದದ ಮುಕ್ತ ಕಂಗಳಂತಿದ್ದು, ದಿವ್ಯ ಛಂಧೋ ಬಂಧದ ಭವ್ಯ ಕಲ್ಪನೆಯನ್ನು ಮೂಡಿಸುವಂತಿವೆ ಎಂದು ಸರಿಯಾಗಿ ಹೇಳಿದ್ದಾರೆ.

## 2. ಚುಟುಕು ಚುಂಬಕ

ಇದರಲ್ಲಿ ನಮ್ಮ ಇಂದಿನ ಪರಿಸರ, ದೇಶ, ವ್ಯಕ್ತಿ ಜೀವನ, ಪ್ರಗತಿ, ವಿಗತಿಗಳು, ಗ್ರಾಮೀಣ ಬದುಕು, ನಗರೀಕರಣ ಮುಂತಾದ ವಿಷಯಗಳ ಅನುಭವಗಳನ್ನು ಕವಿಗಳು ತಮ್ಮ ಬರವಣಿಗೆಯ ಮೂಲಕ ವ್ಯಕ್ತ ಪಡಿಸಿದ್ದಾರೆ. ವ್ಯಂಗ್ಯ ವಿನೋದ, ಧರ್ಮ, ಜಾತಿ, ಭಯೋತ್ಪಾದನೆ, ರಾಜಕಾರಣ, ನಾಡು ನುಡಿ, ಪ್ರಕೃತಿ, ಹೆಣ್ಣು ಮುಂತಾದ ವಿಷಯಗಳ ಅನುಭವಗಳನ್ನು ರಸಪೂರ್ಣವಾಗಿ ತಮ್ಮ ಶಬ್ದಗಳಲ್ಲಿ ಚುಟುಕುಗಳಾಗಿಸಿ ಹಿಡಿದಿಟ್ಟಿದ್ದಾರೆ.

ಬಂದಿ

ಜಾತಿ ಮತ ಪಂಥಗಳ
ಮುಪ್ಪುರಿ ಹಗ್ಗದಲ್ಲಿ
ಬಂದಿಯಾಗಿದೆ ಇಂದು
ಮಾನವೀಯತೆ
ಅದಿರದೆಡೆ ಹುಡುಕಲು
ಸಿಗುವನೆ ಹೇಳಿ ದೇವತೆ?

ಇಂದು ಮಾನವಿಯತೆ ಎಂಬುದು ಜಾತಿ ಮತಗಳೆಂಬ ತಿಕ್ಕಾಟದಲ್ಲಿ ಬಂದಿಯಾಗಿದೆ ಎಂದು ಕವಿಗಳು ಹೇಳುತ್ತಾರೆ.

ಕನ್ನಡ ನುಡಿ

ಈ ಕನ್ನಡ ನುಡಿ

ನಮ್ಮೆಲ್ಲರಿಗೂ

ನರನಾಡಿಗಳ ಮಿಡಿ

ಅದಕ್ಕಾಗಿ ಕನ್ನಡ ಕಲಿ

ನೀ ಕನ್ನಡ ನುಡಿ

ಓ ಕನ್ನಡದ ಕಲಿ॥

ಕನ್ನಡ ನಾಡು–ನುಡಿಯ ಬಗ್ಗೆ ಅಭಿಮಾನ ವ್ಯಕ್ತ ಪಡಿಸುತ್ತಾ, ಕನ್ನಡಿಗರಿಗೆ ಕನ್ನಡ ಕಲಿಯೆಂಬ ಸಂದೇಶ ನೀಡುತ್ತಾರೆ. ಚುಟುಕು ಚುಂಬಕ ಸಂಗ್ರಹ ಹಾಗೂ ಕವಿಗಳಾದ ನಾಗಪ್ಪತ್ರಿವೇದಿಗಳನ್ನು ಕುರಿತು ಬೆನ್ನುಡಿಯಲ್ಲಿ ಪ್ರಹ್ಲಾದರಾವ ಕುಳಗೇರಿ ಅವರು, ಈ ಮೊದಲು ಪ್ರಕಟಗೊಂಡಿರುವ ಅವರ ಚುಟುಕು ಚುರಮುರಿ ಎಂಬ ಚುಟುಕು ಸಂಗ್ರಹವು ಜನ ಮೆಚ್ಚುಗೆ ಪಡೆದಿದೆ. ಮುಷ್ಟಿ ಅಕ್ಕಿಯಲ್ಲಿ ಮೃಷ್ಟಾನ್ನ ತಯಾರಿಸುವ ಕಲೆ ಅವರಿಗೆ ಸಿದ್ದಿಸಿದೆ.

ತೆರೆದ ಕಣ್ಣು ಮತ್ತು ವಿಶಾಲ ಹೃದಯದಿಂದ ಪ್ರಪಂಚವನ್ನು ಸೂಕ್ಮವಾಗಿ ನಿರುಕಿಸುವ ತ್ರಿವೇದಿಯವರು ತಮ್ಮ ಅನುಭವಗಳಿಗೆ ಚುಟುಕುಗಳ ಉಡುಪು ತೊಡಿಸಿ ಶೃಂಗಾರಗೊಳಿಸಿ ಆಕರ್ಷಣೀಯವಾಗಿ ಮಾಡುವ ಕಲೆಯಲ್ಲಿಸಿದ್ಧಹಸ್ತರಾಗಿದ್ದಾರೆ ಎಂದರೆ ಅತಿಶಯೋಕ್ತಿಯಾಗದು ಎಂದು ಹಾರೈಸಿದ್ದಾರೆ.

ಮುನ್ನುಡಿಯಲ್ಲಿಡಾ.ಶೈಲಜಾ ಉಡಚಣ ಅವರು, ತ್ರಿವೇದಿಯವರ ಚಿಂತನಶೀಲತೆ, ಅನುಭವ ಅತ್ಯಂತ ವ್ಯಾಪಕವಾಗಿದೆ. ಇವರು ತಮ್ಮ ಪ್ರತಿ ಕ್ಷಣದ ಅನುಭವ ಅನಿಸಿಕೆಗಳನ್ನು ಶಬ್ದರೂಪದಲ್ಲಿ ಅಭಿವ್ಯಕ್ತಿಗೊಳಿಸುತ್ತ ಚುಟುಕುಗಳ ಬೆನ್ನು ಹತ್ತಿದ್ದಾರೆ. ಇವರ ಈ ರೀತಿಯ ಸಾಹಿತ್ಯಿಕ ಸಂವೇದನೆಯ ಆಸಕ್ತಿ ಇವರ ವ್ಯಕ್ತಿತ್ವದ ವಿಶಿಷ್ಟತೆಯನ್ನು ರೂಪಿಸಲು ನೆರವಾಗಿದೆ. ಹೈದ್ರಾಬಾದ ಕರ್ನಾಟಕ ಪ್ರದೇಶದ ವಿಶಿಷ್ಟಚುಟುಕುಗಾರನೆಂದೇ ಮುಂದೆ ಓದುಗರು ಇವರನ್ನು ಗುರುತಿಸಿ ಆನಂದ ಪಡುತ್ತಾರೆ ಎಂದಿದ್ದಾರೆ.

ಒಟ್ಟಿನಲ್ಲಿ ಹೇಳಬೇಕಾದರೆ ಜೀವನದ ಆಗು ಹೋಗುಗಳು ಅನೇಕ ಸಾಮಾಜಿಕ ವಿಷಯಗಳ ವಿಡಂಬನೆ ಇಲ್ಲಿಯ ಚುಟುಕುಗಳಲ್ಲಿ ವ್ಯಕ್ತವಾಗಿದೆ. ಸರಳವಾದ ಭಾಷಾ ಶೈಲಿಯಲ್ಲಿ ಓದಿ ತಿಳಿಯಲು ಬರುವಂತೆ ಆಡು ಭಾಷೆಯಲ್ಲಿ ಶ್ರೀಯುತರ ಚುಟುಕುಗಳು ರೂಪಗೊಂಡಿವೆ.

1. ಸಾಂದರ್ಭಿಕ ಸತ್ಯಗಳು : ಕುಮಾರ ಕೇಶವ ಕಾವ್ಯನಾಮದ ಮೂಲಕ ಬರಹವನ್ನು ಪ್ರಾರಂಭಿಸಿದ ಕುಪೇಂದ್ರ ವಠಾರ ಅವರ ಚುಟುಕುಗಳು ತುಂಬಾ ಜನಪ್ರಿಯವಾಗಿ ಜನ ಮನ ತಲುಪಿವೆ.

ಬೇಡವಾದ ಯುದ್ಧ

ಯುದ್ಧ ಯಾರಿಗೆ ಬೇಕು?
ಭಾರತಕ್ಕೂ ಬೇಕಾಗಿಲ್ಲ
ಯುದ್ಧ
ಪಾಕಗೂ ಬೇಕಾಗಿಲ್ಲ
ಯುದ್ಧ
ಎರಡೂ ದೇಶಗಳಿಗೆ
ಒಳಗೊಳಗೆ ಇದೆ ಜಿದ್ದು
ಹಾಗಿದ್ದರೆ ಯಾರಿಗೆ
ಬೇಕಾಗಿದೆ ಈ ಯುದ್ಧ?
ಸೈನಿಕರಿಗೋ
ಜನಸಾಮಾನ್ಯರಿಗೋ?

ಭಾರತ ಹಾಗೂ ಪಾಕಿಸ್ತಾನಗಳು ಪದೇ ಪದೇ ಕಾದಾಡುವುದನ್ನು ಕುರಿತು, ಬೇಡವಾಗಿದೆ. ಈ ಯುದ್ಧ ಎರಡೂ ದೇಶಗಳಿಗೆ ಎಂದು ಹೇಳಿದ್ದಾರೆ.

ಇಂದಿನ ಮಕ್ಕಳು

ಇಂದಿನ ಮಕ್ಕಳು ಆಡುವುದಿಲ್ಲ
ಕುಂಟೆಬಿಲ್ಲೆ, ಕಣ್ಣಮುಚ್ಚಾಲೆ
ಮರಕೋತಿ ಆಟ

ಲಗೋರಿ, ಚಿಣ್ಣಿದಾಂಡು ಹೋಗಿ

ಪ್ಯಾಷನ್ನಾಗಿ ಕ್ರಿಕೆಟ್, ಎಲ್ಲೆಲ್ಲೂ ಗುಲ್ಲು

ತಿನ್ನುವುದಿಲ್ಲ ನಮ್ಮ ಹಾಗೆ

ಬಿಸಿರೊಟ್ಟಿ ಬೆಣ್ಣೆ, ಬೆಲ್ಲ-ತುಪ್ಪ

ಕೈ ತುತ್ತು ಮರೆಯಾಗಿ

ಫಾಸ್ಟ ಫುಡ್‌ಗೆ ಶರಣಾಗಿ

ಬೀಡಿ ಸಿಗರೇಟು

ಗುಟ್ಕಾಕ್ಕೆ ಗುರಿಯಾಗಿ

ನಾಟಕ, ಬಯಲಾಟ ಬಿಟ್ಟು

ಬಣ್ಣದ ಪೆಟ್ಟಿಗೆಯ ಸಿನಿಮಾಕ್ಕೆ

ದಾಸರಾಗಿ ಕಳೆದು ಕೊಳ್ಳುತ್ತಿದ್ದಾರೆ

ಜೀವನ ಸಂತೋಷ

ಇಂದು ನಮ್ಮಲ್ಲಿ ಹಿಂದಿನ ಸಂಪ್ರದಾಯ ಆಚಾರ, ವಿಚಾರ, ಮರೆತು ಹೋಗಿವೆ. ನಮ್ಮ ಮಕ್ಕಳೆಲ್ಲ ಫ್ಯಾಷನ್ ಜಗತ್ತಿನ ಪಾಶ್ಚಿಮಾತ್ಯ ಸಂಪ್ರದಾಯಗಳಿಗೆ ಮಾರು ಹೋಗಿದ್ದಾರೆ. ಇಂದು ವೈಜ್ಞಾನಿಕ ಯುಗ, ಹಿಂದಿನಂತೆ ಮಕ್ಕಳು ಕುಂಟೆ ಬಿಲ್ಲೆ, ಕಣ್ಣ ಮುಚ್ಚಾಲೆ, ಮರಕೋತಿ ಆಟಗಳನ್ನು ಆಡುವುದಿಲ್ಲ, ಇಂದಿನ ಮಕ್ಕಳು ಕ್ರಿಕೆಟ್ ಆಟ ಆಡುತ್ತಾರೆ. ಅಲ್ಲದೆ ಊಟ ತಿಂಡಿ ವಿಚಾರದಲ್ಲಿಯೂ ರೊಟ್ಟಿ, ಬೆಲ್ಲ, ತುಪ್ಪ ಮಾಯವಾಗಿವೆ. ಇಂದಿನ ಯುವ ಪೀಳಿಗೆ ಬೀಡಿ ಸಿಗರೇಟ, ಗುಟ್ಕಾಗಳಿಗೆ ಬಲಿಯಾಗಿದ್ದಾರೆ. ಇದರಿಂದ ತಮ್ಮ ಜೀವನದ ಸಂತೋಷ ಕಳೆದು ಕೊಳ್ಳುತ್ತಿದ್ದಾರೆ ಎಂದು ಕವಿ ಕುಪೇಂದ್ರ ಅವರು ಹೇಳುತ್ತಾರೆ.

ಬೆಲೆಗಂಜಿದ ಬದುಕು

ಜೋಳ, ಅಕ್ಕಿ, ಗೋಧಿ

ಬೇಳೆ, ಬೆಲ್ಲ

ಬೆಲೆಗಳು ಮೇಲೇರಿ

ಬಿಟ್ಟಿವೆ ಎಲ್ಲಾ

ಬಡವರ ಹೊಟ್ಟೆಗೆ

ತಿನ್ನಲು ಕೂಳಿಲ್ಲ

ಬರೀ ನೋವು

ಸಂಕಟ ಬಾಳೆಲ್ಲಾ

ಬಡ ಬಗ್ಗರ ಗೋಳು

ಯಾರು ಕೇಳಲ್ಲ

ಓಟಿಗೆ ಹಾಳು ನಮ್ಮ ಬದುಕೆಲ್ಲಾ

ಕುಡಿಯಲು ಬಾರದ ಪೆಟ್ರೋಲ್

ತಿನ್ನಲು ಬಾರದ ಆ ಚಿನ್ನ

ಕನಸಲು ಕಾಣೆವು ಇವೆಲ್ಲಾ

ಇಂದು ದಿನೇ ದಿನೇ ಏರುತ್ತಿರುವ ಬೆಲೆಯಿಂದಾಗಿ ಬಡವರ ಬದುಕು ಕಂಗಾಲಾಗಿದೆ. ಗಗನಕ್ಕೇರಿದ ಬೆಲೆಗಳು ಇದರ ಗೋಳು ಯಾರು ಕೇಳುವರಿಲ್ಲ, ಕೇವಲ ನಮ್ಮ ಪ್ರತಿನಿಧಿಗಳು ಓಟು ಕೇಳುತ್ತಾರೆ ಎಂದು ಕವಿ ಹೇಳುತ್ತಾರೆ.

ಒಟ್ಟಿನಲ್ಲಿ ಹೇಳಬೇಕಾದರೆ ಬಡತನ, ಹಸಿವು, ಅನಕ್ಷರತೆ, ನಿರುದ್ಯೋಗ, ಭಯೋತ್ಪಾದನೆ, ಸಮಾನತೆ, ಜಾತಿ, ವ್ಯವಸ್ಥೆ, ಸ್ವಾತಂತ್ರ್ಯ, ವರದಕ್ಷಿಣೆ ಮುಂತಾದ ವಿಷಯಗಳು ಚುಟುಕುಗಳ ಮೂಲಕ ಹೊರಬಿದ್ದಿವೆ.

**ವೀರೇಶ ಹಿರೇಮಠ ಅನ್ನದಾನಪ್ಪ ಕರಮುಡಿ**

## 1. ಮಧು ಸಂಗಮ (ಕವನ ಸಂಕಲನ)

ಮಧು ಸಂಗಮ ಎಂಬ ಹೆಸರಿನ ಈ ಕವನ ಸಂಕಲನವು ಇಬ್ಬರು ಕವಿಗಳ ಸ್ನೇಹ ಸಂಗಮದ ಕೊಡುಗೆಯಾಗಿದೆ. ಮೊದಲ ಭಾಗದಲ್ಲಿ ಶ್ರೀ ವಿರೇಶ ಹಳ್ಳೂರ ಅವರ ಕವನಗಳಿವೆ. ಶ್ರೀ ವಿರೇಶ ಹಳ್ಳೂರ ಅವರ ಪರಿಚಯವನ್ನು ನಾವು ಈಗಾಗಲೇ ಈ ಮೇಲೆ ಗದ್ಯ ಸಾಹಿತ್ಯ ವಿಭಾಗದಲ್ಲಿ ಪದ್ಯ ಸಾಹಿತ್ಯ ವಿಭಾಗದಲ್ಲಯೂ ಮಾಡಿ ಕೊಂಡಿದ್ದೇವೆ. ವಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಹಳ್ಳೂರ ಗ್ರಾಮದವರು ಶಿಕ್ಷಕ ವೃತ್ತಿಯಲ್ಲಿದ್ದವರು. ವಿನಯ ಶೀಲರು, ಸಾಹಿತ್ಯಾಭಿಮಾನಿಗಳು, ಅನೇಕ ಕವಿ ಸಮ್ಮೇಳನಗಳಲ್ಲಿ ಭಾಗವಹಿಸಿ ಸೈ ಎನಿಸಿ ಕೊಂಡಿದ್ದಾರೆ. ಇವರು ಜೀವನ ಚರಿತ್ರೆ ಕವನ ಸಂಕಲನ ಮುಂತಾದ

ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಜೊತೆಗೆ ತಮ್ಮ ಸ್ನೇಹಿತರ ಜೊತೆಗೂಡಿ ಕವನ ಸಂಕಲನಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಈ ಮಧು ಸಂಗಮ ಕವನ ಸಂಕಲನ ಒಂದು. ಮೊದಲನೆ ವಿಭಾಗದಲ್ಲಿ ಶ್ರೀ ವೀರೇಶ ಹಿರೇಮಠ ಅವರ ಸುಮಾರು 14 ಕವನಗಳಿವೆ. ಅದರಲ್ಲಿ ಕೆಲವು ಕವನಗಳು

1. ಬ್ರಹ್ಮಾಣಿಗೆ ಬಿನ್ನಹೆ

ಹೃದಯ ದೇಗುಲವಿಹುದು ನಿನಗಾಗಿ ತೆರೆದು
ಬಾರಮ್ಮಾ ಬ್ರಹ್ಮಾಣಿ ದ್ವೇಷಗಳ ಮರೆದು
ಪ್ರೀತಿಯಿಂದೈತಂದು ಸುತನೀಪೊರೆದು
ಎಳೆಯಬಳ್ಳಿಗೆ ಎದೆಯ ಕರುಣರಸ ಸರಿದು

2. ಹೊತ್ತು ಮುಕ್ತಿ

ಅತ್ತ ಇತ್ತ ತಿರುಗುವದ್ಯಾಕ ಸುಮ್ಮ
ನ್ಹೊತ್ತುಗಳಿಯುವದ್ಯಾಕ
ಮುತ್ತಿನಂತ ಹೊತ್ತುಗಳೆದು
ಕತ್ತೆಯಂತೆ ಅಲಿಯುವದ್ಯಾಕ

ಸಮಯ ಎನ್ನುವುದು ಬಹಳ ಅಮೂಲ್ಯ. ಅದನ್ನು ಹಾಳು ಮಾಡದಿರಿ ಎಂದು ಕವಿ ಇಲ್ಲಿ ಹೇಳುತ್ತಾರೆ. ಜೀವನ್ಮುಕ್ತಿ ಎಂಬ ಕವಿತೆಯಲ್ಲಿ ಸತಿ ಪತಿಯರು ದೇವರಲ್ಲಿ ಅನನ್ಯ ಭಕ್ತಿಯನ್ನಿಟ್ಟು ಬಾಳಬೇಕು. ಮಧು ಸಂಗಮ ಎಂಬ ಕವಿತೆಯಲ್ಲಿ ಕಮಲೆ ಶಾಮರ ಸರಸ ಸಲ್ಲಾಪ ಇದೆ.

ಇಲ್ಲಿಯ ಕವನಗಳಲ್ಲಿ ಸರಳವಾದ ಸುಂದರ ಭಾಷೆ ಹಾಗೂ ಕೆಲವೊಂದು ಕವನಗಳಲ್ಲಿ ಜಾನಪದ ಸೊಗಡಿನ ಭಾಷೆಯೂ ಬಳಿಕೆಯಾಗಿದೆ. ಮಧು ಸಂಗಮದ ದ್ವಿತೀಯ ವಿಭಾಗದಲ್ಲಿ ಶ್ರೀ ಎನ್. ಅನ್ನದಾನಪ್ಪನವರಿಂದ ರಚಿತಗೊಂಡ ಕವನಗಳಿವೆ. ನಿಷ್ಠಾವಂತ ಶಿಕ್ಷಕರು, ತುಂಬಾ ದೇಶಾಭಿಮಾನಿಗಳು ಸ್ನೇಹಶೀಲರು. ಈಗಾಗಲೇ ಇವರಿಂದ ಸರಳ ಶೈಲಿಯಲ್ಲಿ ರಚಿತಗೊಂಡ ನವಭೇರಿ ಎಂಬ ಕವನ ಸಂಕಲನವು ಬೆಳಕುಗೊಂಡಿದ್ದು ತುಂಬ ಜನಪ್ರಿಯತೆಯನ್ನು ಪಡೆದಿದೆ.

ಶೈಕ್ಷಣಿಕ ಪ್ರವಾಸ ಕಥನ ಕವನ ಈ ಕವನದಲ್ಲಿ ತಾವು ಕೈಗೊಂಡ ಪ್ರವಾಸದ ಸ್ಥಳಗಳಾದ ಬೆಂಗಳೂರು, ಮೈಸೂರು, ಶ್ರವಣಬೆಳಗೊಣ, ಹಳೇ ಬೀಡು, ಬೇಲೂರು ಮುಂತಾದ ಸ್ಥಳಗಳ ಸುಂದರ ವರ್ಣನೆ ಇದೆ.

ಹಳೇ ಬೀಡು ಎಳೆನೀರು ತನಿಹಣ್ಣುಸವಿದು

ಹೊರಟೆವಂದು ಬಸ್ಸಿನೊಳು ಬೇಲೂರು ಹಿಡಿದು

ಕೈಮಾಡಿ ಕರೆಯುತದೋ ಮೈಲು ದೂರದಲಿ

ದೇವಾಲಯ ಮುಂಭಾಗ ಗೋಪುರ ಕಾಣುತಲಿ

ಒಳಗೆ ಬಂದೆವು ನಾವು ದಿಡ್ಡಿಯದು ದಾಟಿ

ಮುಂಭಾಗ ಕಾಣಿಸಿತದು ಪ್ರೀತಿ

ಶಿಕ್ಷಕರ ದಿನಾಚರಣೆ – ಎಂಬ ಕವನದಲ್ಲಿ ಶಿಕ್ಷಕರ ಸ್ಥಾನ ಎಂಥಹದು ಎನ್ನುವುದರ ಬಗ್ಗೆ ತಿಳಿಸಿ ಕೊಟ್ಟಿದ್ದಾರೆ.

ಗುರು ಗೋವಿಂದ ಇವರಲ್ಲಿ ಯಾರದದು ಹೆಚ್ಚಳ?

ಕಬೀರರೆ ಹೇಳಿಲ್ಲವೆ ಗುರುವರನದೆ ಪೆಚ್ಚಳ?

ಸರ್ವಜ್ಞರ್ಹೇಳಿದುದು ಸುಳ್ಳಲ್ಲ ನಿಜವು

ಗುರುವಿಂದ ಶಿಷ್ಯನದು ಬಂದನವು ಬಯಲು

ಈ ಕವನ ಸಂಕಲನವನ್ನು ಕುರಿತು ಮುನ್ನುಡಿಯಲ್ಲಿ ರಾ.ಹ.ವಾಲ್ಮೀಕಿಯವರು, ಈ ಚಿಕ್ಕ ಕವನ ಸಂಕಲನಕ್ಕೆ ಮುನ್ನುಡಿ ಬರೆಯುವ ಕೆಲಸ ನನಗೆ ಒಪ್ಪಿಸಿದ್ದಾರೆ. ಮಧು ಸಂಗಮದಲ್ಲಿ ಇಬ್ಬರು ಉದಯೋನ್ಮುಖ ಕವಿಗಳ ಸಂಗಮವಾಗಿದೆ ಎಂದು ಹೇಳಿದ್ದಾರೆ.

**ಡಿ.ಎಸ್.ಕುಮಾರ**

ರಂಗ ಕಲಾವಿದರಾದ ಶ್ರೀ ಡಿ.ಎಸ್.ಕುಮಾರ ಅವರು ಯಾದಗಿರಿಯ ಉತ್ತಮ ನಾಟಕಕಾರರಾಗಿದ್ದಾರೆ. ಇವರು ನಾಟಕಗಳನ್ನು ಜೀವನ ಚರಿತ್ರೆಗಳನ್ನು ಕನ್ನಡ ಸಾಹಿತ್ಯಕ್ಕೆ ಅರ್ಪಿಸಿದ್ದಾರೆ. ಸಾಹಿತ್ಯದ ವಿವಿಧ ಪ್ರಕಾರಗಳಾದ ಕವನ, ಹಾಡು, ವಚನಗಳನ್ನು ಬರೆದು ಪ್ರಕಟಿಸಿದ್ದಾರೆ. ಅವು ಈ ಕೆಳಗಿನಂತಿದೆ.

1. ಹಂದ್ರಿಕಿಯ ಜಗಲಿಂಗೇಶ್ವರರ ವಚನ ಸಾಗರ

ಹಂದ್ರಿಕಿಯ ಜಗಲಿಂಗೇಶ್ವರ ವಚನ ಸಾಗರ ಎಂಬ ಪುಸ್ತಕದಲ್ಲಿ ಆಧ್ಯಾತ್ಮದ ಸಿದ್ದಿಯ ಶಿಖರವನ್ನೇರಿದ ಮಹಾನ್ ಶರಣ ಶ್ರೀ ಜಗಲಿಂಗೇಶ್ವರರ ಅಂಕಿತನಾಮದಲ್ಲಿ 108 ವಚನಗಳಿವೆ.

ಸಗರ ನಾಡಿನ ಸತ್ಯ ಶಿವಶರಣರಲ್ಲಿ ಒಬ್ಬರಾದ ಯೋಗಿ, ಸಿದ್ಧಿ ಪುರುಷ ಶ್ರೀ ಜಗಲಿಂಗೇಶ್ವರರ ಕಾವ್ಯ ನಾಮದ ಮೇಲೆ ವಚನ ಸಾಗರವೆಂಬ ಈ ಪುಸ್ತಕದಲ್ಲಿ ನಡೆ–ನುಡಿ, ಆಚಾರ ವಿಚಾರಗಳನ್ನು ಶುದ್ಧಗೊಳಿಸುವ ತತ್ವಗಳನ್ನು ವಚನಗಳ ರೂಪದಲ್ಲಿ ಬರೆದಿರುವದು.

ತಾನಿಲ್ಲದೆ ಮಾಡುವದು ನಿಜ ಕಾಯಕ ನೋಡಯ್ಯ
ತಾನಿಲ್ಲದೆ ನೀಡುವದು ನಿಜ ದಾಸೋಹ ನೋಡಯ್ಯ
ತಾನಿಲ್ಲದೆ ಪಡೆಯುವದು ನಿಜ ಪ್ರಸಾದ ನೋಡಯ್ಯ
ತಾನಿಲ್ಲದೆ ದುಡಿಯುವದು ನಿಜ ಭಕ್ತಿ ನೋಡಯ್ಯ
ಜಗಲಿಂಗೇಶ್ವರಾ

ತಾನು ಎನ್ನುವ ಅಹಂ ತೊರೆದು ಕಾಯಕವೇ ಕೈಲಾಸ ಎಂಬ ಬಸವಣ್ಣನ ನುಡಿಯಂತೆ ನಿಸ್ವಾರ್ಥ ಸೇವೆಯಿಂದ ಮಾಡುವ ಕೆಲಸದಲ್ಲೆ ನಿಜವಾದ ದೇವರನ್ನು ಕಾಣಲು ಸಾಧ್ಯ. ಅದೇ ನಿಜವಾದ ಭಕ್ತಿ ಎಂದು ಕವಿ ತಿಳಿಸುತ್ತಾರೆ.

ದೇವರಿಲ್ಲದ ಗುಡಿಯು ಇದ್ದು ಯಾತಕಯ್ಯ
ಭಾವವಿಲ್ಲದ ಭಕ್ತಿ ಇದ್ದು ಯಾತಕಯ್ಯ
ಧರ್ಮವಿಲ್ಲದ ಅರಸು ಇದ್ದು ಯಾತಕಯ್ಯ
ಶುದ್ಧವಿಲ್ಲದ ಭಾವ ಇದ್ದು ಯಾತಕಯ್ಯ
ಗುರುನಾಮ ನುಡಿಯದ ಬಾಯಿ ಇದ್ದು ಯಾತಕಯ್ಯ
ಜಗಲಿಂಗೇಶ್ವರಾ

ಚಿತ್ತವಿಲ್ಲದೆ ಗುಡಿಯ ಸುತ್ತಿದೊಡೆನು ಫಲ ಎಂಬ ಸರ್ವಜ್ಞನ ವಚನದಂತೆ ದೇವರು, ಧರ್ಮ, ಭಯ, ಭಾವ, ಶುದ್ಧ ಮನಸ್ಸು, ಒಳ್ಳೆಯ ನುಡಿ ಇವೆಲ್ಲ ಇಲ್ಲದಿದ್ದರೆ ಅದು ನಿರರ್ಥಕ ಇದಕ್ಕೆ ದೇವರು ಮೆಚ್ಚುವುದಿಲ್ಲ ಎಂದು ಕವಿಯು ಈ ವಚನದ ಮೂಲಕ ತಿಳಿಸುತ್ತಾರೆ.

ಈ ಕೃತಿಯಲ್ಲಿ ಎಲ್ಲಾ ವಚನಗಳು ಸರಳವಾದ ಆಡು ಭಾಷೆಯಲ್ಲಿ ಎಲ್ಲರೂ ಓದಿ ಅರ್ಥ ಮಾಡಿಕೊಳ್ಳುವಂತಹ ಶೈಲಿಯಲ್ಲಿವೆ.

## ಶ್ರೀ ಬಸವೇಶ್ವರನಾಥ ಸೂಗೂರಮಠ

ಶ್ರೀಯುತರ ಪರಿಚಯವನ್ನು ನಾವು ಈಗಾಗಲೇ ಮಾಡಿಕೊಂಡಿದ್ದೇವೆ. ಇವರು ಬಸವೇಶ್ವರ ಸುಪ್ರಭಾತ ಬರೆದು ಪ್ರಕಟಿಸಿರುವುದರ ಬಗ್ಗೆ ನಾವು ನೋಡಿದ್ದೇವೆ. ಶ್ರೀ ಬಸವೇಶ್ವರ ಸುಪ್ರಭಾತದ ಮೂಲಕ ಸಾಹಿತ್ಯ ಲೋಕಕ್ಕೆ ಕಾಲಿಟ್ಟ ಇವರ ನವ್ಯ ಕವನಗಳು ವಿಶಿಷ್ಟವಾದವು. ಇವರ ರಚನೆಗಳು ನಾಡಿನ ಖ್ಯಾತ ಪತ್ರಿಕೆಗಳಲ್ಲಿ ಸ್ಮರಣ ಸಂಚಿಕೆಗಳಲ್ಲಿ ಪ್ರಕಟವಾಗಿವೆಯಲ್ಲದೆ ಆಕಾಶವಾಣಿಯ ಮೂಲಕವು ಬಿತ್ತರಗೊಂಡಿವೆ.

ವಚನ ಸಾಹಿತ್ಯದ ಖಜಾನೆಯಾದ ಸುರಪುರದ ಮಣ್ಣಿನಲ್ಲಿ ಜನಿಸಿದ ಸೂಗೂರ ಮಠರವರು ಅನೇಕ ವಚನಗಳನ್ನು ಬರೆದು ಪ್ರಕಟಿಸಿದ್ದಾರೆ.

1. ವಚನಬಾಗಿನ
2. ಶ್ರೀ ಬಸವೇಶ್ವರ ಸುಪ್ರಭಾತ

ಈ ವಚನ ಸಂಕಲನದಲ್ಲಿ ಮಹಾಮಾನವತಾವಾದಿ ಬಸವಣ್ಣನ ಆಚಾರ ವಿಚಾರ ಆಗಿನ ಕಾಲದ ಶರಣರ ಧಾರ್ಮಿಕ, ಸಾಮಾಜಿಕ, ನಿಲುವುಗಳಿಗನುಗುಣವಾದ ರೀತಿಯಲ್ಲಿ ಸರಳವಾದ ಭಾಷಾ ಶೈಲಿಯಲ್ಲಿ ಇಲ್ಲಿಯ ವಚನಗಳು ಮೂಡಿ ಬಂದಿವೆ.

ಸಕಲ ಜೀವರ ಪ್ರೇಮಿ ನಮ್ಮ ಸಂಗನ ಬಸವಣ್ಣ
ಮಹಾ ಮಾನವತಾವಾದಿ ನಮ್ಮ ಸಂಗನ ಬಸವಣ್ಣ
ಅಸ್ಪೃಶ್ಯರನ್ನು ಶರಣರನ್ನಾಗಿ ಮಾಡಿದಾತ ನಮ್ಮ ಸಂಗನ ಬಸವಣ್ಣ
ಮದಾರ ಚೆನ್ನನ ಮಗನೆಂದು ಅಂದಾತ ನಮ್ಮ ಸಂಗನ ಬಸವಣ್ಣ
ಹೊಸ ಆಲೋಚನೆಗೆ ದಿಕ್ಕು ಕೊಟ್ಟಾತ ನಮ್ಮ ಸಂಗನ ಬಸವಣ್ಣ
ಕನ್ನಡದ ಕಾರಣ ಪುರುಷ ನಮ್ಮ ಸಂಗನ ಬಸವಣ್ಣ
ಶರಣ ಸಂವಿಧಾನದ ಮಹಾಶಿಲ್ಪಿ ನಮ್ಮ ಬಸವಣ್ಣನಯ್ಯ
ಬಸವಲಿಂಗ

ಅಹಂಕಾರ ಪಕ್ಕಾಗಿ
ಸೊಕ್ಕು ಉಕ್ಕೇರಿ ಹರಿಯುತಿದೆ ಇಲ್ಲಿ
ಅಜ್ಞಾನ ಅದಕೆ ಕೊಡೆ ಹಿಡಿದಿದೆಯಯ್ಯ

ಭ್ರಷ್ಟಾಚಾರ ತಾ ಬಂದು ಗಾಳಿ ಹಾಕುತಿದೆಯಯ್ಯ
ಈ ಸೊಕ್ಕು ನನ್ನೆದೆಗೆ ಹರಿದು ಬರದಂತೆ ಮಾಡಯ್ಯ
ಬಾಗಿದ ತಲೆ ಮುಗಿದ ಕೈಯಾಗಿರಿಸು ಬಸವಲಿಂಗ

ಈ ರೀತಿಯಾಗಿ ಸಕಲ ಜೀವಾತ್ಮರಿಗೆ ಲೇಸನು ಬಯಸಿದ ಬಸವಣ್ಣನವರ ನಡೆ-ನುಡಿಗಳನ್ನು ಬಸವೇಶ್ವರನಾಥರು ತಮ್ಮ ವಚನಗಳಲ್ಲಿ ಕೊಂಡಾಡಿದ್ದಾರೆ.

ಈ ಕೃತಿ ಹಾಗೂ ಕೃತಿಕಾರರ ಬಗ್ಗೆ ಬೆನ್ನುಡಿಯಲ್ಲಿ ಎ. ಕೃಷ್ಣಸುರಪುರ ರವರು ಹಿಂದೆ ಮುದನೂರಿನ ದಾಸಿಮಯ್ಯರೆಂಬ ಮುಂಗೋಳಿಯು ಕರೆದಾಗ ಅವರ ಹಾರ್ದಿಕ ಅನುಭಾವಪೂರ್ಣ ತವನಿಧಿಯಾದ ವಚನ ಸಾಹಿತ್ಯಕ್ಕೆ ಅಂತಹುದೇ ನವನಿಧಿಯ ಬಾಗಿನ ನೀಡುವಂತೆ ಅನೇಕ ಶರಣ ಸಂಕುಲವು ಮಾರ್ಧನಿಗೊಟ್ಟಿತು. ಈ ಕ್ರಮ ಮುಂದುವರೆದು ಕಾವ್ಯಾನಂದರು ತಮ್ಮ ವಚನೋಧ್ಯಾನದಲ್ಲಿ ಅರಳಿಸಿದ ವಿವಿಧ ಭಾವಸುಮಗಳಿಂದ ಆಧುನಿಕ ಕವಿಮನದ ಶರಣರ ಮನೋ ಮಸ್ತಿಷ್ಕಗಳಿಗೆ ನವ್ಯ ಚೇತನ ನೀಡಿದಾಗ ಸಮ ಸಾಮಯಿಕ ಬದುಕಿನ ಆಳ ನೀಳಗಳನ್ನು ಅರಗಿಸಿಕೊಂಡ ಶರಣ ಜೀವಿಗಳನೇಕರು, ವಚನಗಳ ರಚನೆಗೆ ಪ್ರೇರಣೆ ಪಡೆದರು. ಹೀಗೆ ಪ್ರೇರಣೆಗೊಂಡ ಭಾವನಾಮಯ ಶರಣ ಜೀವಿಗಳಾದ ತಿಮ್ಮಾಪೂರದ ಪೂಜ್ಯಶ್ರೀ ಬಸವೇಶ್ವರನಾಥ ಸೂಗೂರಮಠರವರು ಇದಕ್ಕೆ ಹೊರತಾಗಿಲ್ಲ, ಅವರ ಅನುಭವದ ರಸಪಾಕವೇ ಅನುಭಾವದ ನುಡಿ ಮುತ್ತುಗಳಾಗಿ ಈ ದಿವ್ಯ ವಚನ ಬಾಗಿನ ಮನುಜ ಲೋಕದ ಮಾರ್ಗದರ್ಶನಕ್ಕಾಗಿ ಮೈದಾಳಿ ಬಂದುದು ನಮ್ಮ ಸೌಭಾಗ್ಯ ಎಂದು ಕೊಂಡಾಡಿದ್ದಾರೆ.

ವಚನ ವಾಙ್ಮಯದ ತವರೂರಾದ ಈ ನೆಲದ ಮಣ್ಣಿನ ಸತ್ವ ಮತ್ತು ಸ್ವಗಳನ್ನು ಸರಿಯಾರಿ ಅರ್ಥವಿಸಿ ಅಂಗವಿಸಿ ಆತ್ಮಸ್ಥಗೊಳಿಸಿಕೊಂಡಿರುವ ಆಧುನಿಕ ವಚನಕಾರ ಬಸವೇಶ್ವರನಾಥರು ತಮ್ಮ ಈ ವಚನ ಬಾಗಿನ ಕೃತಿಯ ಮಮಿಕ ಈ ನೆಲದ ಸಾಂಸ್ಕೃತಿಕ ಋಣವನ್ನು ಚುಕ್ತಾ ಮುಟ್ಟಿಸಿದ್ದಾರೆ. ವಚನ ರಚನೆಯ ಮೂಲದವ್ಯವಾದ ದೈನಂದಿನ ಸತ್ಯ ಶುದ್ಧ ಕ್ರಿಯಾತ್ಮಕ ಬದುಕಿನ ಅನುಭಾವವನ್ನು ಶ್ರೀ ಸೂಗೂರು ಮಠರು ಸ್ವತಃ ತಮ್ಮ ಬಸವಾರ್ಪಿತ ಬದುಕಿನಿಂದಲೇ ಭರಿಸಿದ್ದರಿಂದ ಇಲ್ಲಿಯ ವಚನಗಳು ತದ್ರೂಪ ಹನ್ನೆರಡನೆಯ ಶತಮಾನದ ಅರಿವು ಮತ್ತು ಆಚಾರಗಳಿಂದ ಕೂಡಿದ ವಚನಗಳಂತೆ ಭಾಸವಾಗುವುವಲ್ಲದೆ. ಈ ವಚನಗಳ ವಿಶಿಷ್ಟಾನುಭವ ಅತ್ಯಂತ ಪರಿಣಾಮಕಾರಿಯಾಗಿ ನೇರವಾಗಿ ಥಟ್ಟನೆ ಓದುಗರ ಪರಕಾಯ ಪ್ರವೇಶ ಮಾಡುವ ಸಾಮರ್ಥ್ಯ ಹೊಂದಿದೆ.

## 2. ಶ್ರೀ ಬಸವೇಶ್ವರ ಸುಪ್ರಭಾತ

ಶ್ರೀ ಬಸವೇಶ್ವರ ಸುಪ್ರಭಾತದಲ್ಲಿ ನೂರೊಂದು ಪದ್ಯಗಳಿವೆ. ಇದರಲ್ಲಿ ಬಸವಣ್ಣನವರ ಜೀವನ, ಅವರ ವ್ಯಕ್ತಿತ್ವದ ಬೆಳಗನ್ನು ಅತ್ಯಂತ ಸೊಗಸಾಗಿ ಸುಪ್ರಭಾತ ಗೀತೆಯಾಗಿ ರಚನೆ ಮಾಡಿದ್ದಾರೆ. ಬಸವಣ್ಣನವರ ಕುರಿತು ಅನೇಕ ಪುಸ್ತಕಗಳು, ನಾಟಕಗಳು, ಕವನಗಳು, ವಿಮರ್ಶಾ ಗ್ರಂಥಗಳು ಪ್ರಕಟವಾಗಿವೆ. ಬಸವೇಶ್ವರನ ಕುರಿತು ಸುಪ್ರಭಾವವನ್ನು ರಚಿಸಿದ ಕೀರ್ತಿ ಶ್ರೀ ಬಸವೇಶ್ವರನಾಥ ಸೂಗೂರ ಮಠ ಅವರಿಗೆ ಸಲ್ಲುತ್ತದೆ.

ಈ ಸುಪ್ರಭಾತದಲ್ಲಿ ಬಸವಣ್ಣನವರ ಜನನ ವೃತ್ತಾಂತದಿಂದ ಹಿಡಿದು ಬಸವಣ್ಣನವರು ಕಲ್ಯಾಣದಲ್ಲಿ ಬಾಳಿ ಶರಣ ಸಂಕುಲದ ಸಕಲ ವಿಷಯಗಳ ವಿಚಾರಗಳು ಭಕ್ತಿ-ಭಾವದ ಭರದಿಂದ ತುಂಬಿ ತುಳುಕುತ್ತಿವೆ. ಶ್ರೀ ಬಸವೇಶ್ವರನಾಥ ಸೂಗೂರ ಮಠರವರಿಗೆ ಬಸವಣ್ಣನವರ ಮೇಲಿರುವ ಅನನ್ಯ ಭಕ್ತಿಯೇ ಈ ಸುಪ್ರಭಾತ ರಚನೆಗೆ ಕಾರಣವೆಂದು ಹೇಳಬಹುದು. ಬಸವಣ್ಣನನ್ನು ಕುರಿತು ಭಜಿಸಲು ಭಕ್ತಿಭಾವದಿಂದ ಹಾಡಲು ಅತ್ಯಂತ ಯೋಗ್ಯವಾದ ಸುಪ್ರಭಾತ ಇದಾಗಿದೆ.

ಏಳು ಪೂರ್ವಾಚಾರಿ ಏಳು ಸಮಯಾಚಾರಿ
ಏಳೇಳು ಸದ್ಧರ್ಮ ದಾಸೋಹ ಶೌರಿ
ಏಳು ಭೃತ್ಯಾಚಾರಿ, ಓ ಭಕ್ತಿ ಭಂಡಾರಿ
ಏಳೇಳು ಸದ್ವಚನ ಸಾಹಿತ್ಯ ಸೂರಿ
ಏಳು ನೀತಿಯ ಶರಣ, ಏಳು ಜಾತಿಯ ಶರಣ
ಏಳೇಳು ಪರಶಿವನ ಕಂಠದಾಭರಣ
ಏಳಯ್ಯ ಭವಹರಣ ಏಳೇಳು ಶಿವಶರಣ
ಉಪ್ಪವಡಿಸುತಲೆಮಗೆ ತೋರು ಶ್ರೀ ಚರಣ
ಕೊಡುವಾತ, ಕೊಂಬಾತ, ಉಳಾತ, ನಮ್ಮಾತ
ಕೂಡಲಽ ಸಂಗಮನು ನನ್ನಾತನೋ
ಇರುವನಕ, ಉಳನಕ ಕೊನೆತನಕ, ಕಡೆತನಕ
ಕಾಯಕದ ಕಡುಗಲಿಯು ಶ್ರೀ ಬಸವನೊ
ನಿವಾಶೆ ಭಾಷೆಗಳು, ಹವ್ಯಾಸ, ಅಭ್ಯಾಸ

ಬರಲಿಲ್ಲವಾರಿಗೂ ಜಗದೊಳಿವರೆಗೆ
ಕೊಳ್ಳ ಹೊಡೆಯಲು ಮನೆಗೆ ಕಳ್ಳನೈತಂದಿರಲು
ಪ್ರತ್ಯಕ್ಷ ಸಂಗಯ್ಯನೆಂದು ನೀಬಗೆದೆ।।[1]

ಈ ಕೃತಿ ಹಾಗೂ ಕೃತಿಕಾರರನ್ನು ಕುರಿತು ಮುನ್ನುಡಿಯಲ್ಲಿ ಚೆನ್ನವೀರ ಕಣವಿಯವರು, ಇಲ್ಲಿಯ ನೂರೊಂದು ಪದ್ಯಗಳಲ್ಲಿ ಕವಿಗೆ ಬಸವಣ್ಣನವರ ಬಗೆಗಿರುವ ಭಕ್ತಿ ಭಾವ ಹೊನಲಾಗಿ ಹರಿದಿದೆ. ಅವರ ಜೀವನ ಚರಿತ್ರೆಯಲ್ಲಿ ಹೇಳಿಯೂ ಹೇಳದಂತೆ ಕೆಲವೊಂದು ವಿಶಿಷ್ಟ ಘಟನೆಗಳನ್ನು ತಕ್ಕ ಮಟ್ಟಿಗೆ ಮೇಳವಿಸಿಕೊಂಡು ಅದರಿಂದ ತಮಗಾದ ಭಾವ ದೀಪ್ತಿಯನ್ನು ಇಲ್ಲಿಯ ಹಲವಾರು ಪದ್ಯ ಪ್ರಣತಿಗಳಲ್ಲಿ ಕವಿ ಬೆಳಗಿದ್ದಾರೆ. ಬಸವಣ್ಣನವರ ವ್ಯಕ್ತಿತ್ವ, ಅವರ ಅನುಭಾವದ ಬೆಳಗು, ಅಂದಿನಿಂದ ಇಂದಿನವರೆಗೂ ಅನೇಕ ಕವಿಗಳ ಕಾವ್ಯಕ್ಕೆ ವಸ್ತುವಾಗುತ್ತ ಬಂದಿದೆ. ಅದು ಅರಿತಷ್ಟೂ ಅಚ್ಚರಿಯನ್ನುಂಟು ಮಾಡುವ, ನುರಿತಷ್ಟೂ ರಚಿಯನ್ನು ಹೆಚ್ಚಿಸುವ ಕುರಿತಷ್ಟೂ ಕುತೂಹಲವನ್ನು ಕೆರಳಿಸುವ ಬೆರೆತಷ್ಟೂ ಶಾಂತಿ, ಸಮಾಧಾನವನ್ನು ನೀಡುವ ಕೂಡಲ ಸಂಗಮವಾಗಿದೆ. ಶ್ರೀ ಬಸವನಾಥರು ಈ ಸುಪ್ರಭಾತದ ಕೆಲವು ಚರಣಗಳಲ್ಲಿ ಆ ಕಿರಣವನ್ನು ಕಂಡಿದ್ದಾರೆ. ಅವರ ವಚನಗಳ ನುಡಿಯಲ್ಲಿಯೇ ಇವರ ಮಾತಿಗೂ ಕುಡಿಯೊಡದಿದೆ ಎಂದು ಸರಿಯಾಗಿ, ಅರ್ಥಪೂರ್ಣವಾಗಿ ನುಡಿದಿದ್ದಾರೆ.

ಶಾಂತರಸ ರಾಯಚೂರು ಅವರು ಬಸವ ಸುಪ್ರಭಾತವನ್ನು ಕುರಿತು, ಶ್ರೀ ಬಸವನಾಥರು ಮೃದು ಹೃದಯರು, ಸದುವಿನಯ, ಸಂಪನ್ನರು, ಬಸವಭಕ್ತರು, ಅವರ ಹೃದಯ ಆತ್ಮಗಳು ಪಕ್ವಗೊಂಡು ಶುದ್ಧ ಭಕ್ತಿಯಲ್ಲಿ ಮಿಂದು, ಬುದ್ಧಿ ಭಾವಗಳಲ್ಲಿ ಬಲಿದು ಮೃದುಪದಗಳ ಶರೀರ ಧರಿಸಿ ಸುಪ್ರಭಾತವಾಗಿ ಹೊರಬಂದಿದೆ. ಭಾವ, ಭಾಷೆ, ವಿಚಾರ, ತತ್ವ ಎಲ್ಲಂದದಿಂದ ಈ ಬಸವ ಸುಪ್ರಭಾತ, ಸುಪ್ರಭಾತ ಸಾಹಿತ್ಯದಲ್ಲಿ ಒಂದು ಹೊಸ ದಾರಿಯನ್ನು ನಿರ್ಮಿಸಿದೆ ಎಂದು ಚನ್ನಾಗಿ ಹೇಳಿದ್ದಾರೆ.

ಬಸವ ಸುಪ್ರಭಾತ ಕುರಿತು ಸಹೃದಯಗಳ ಅಭಿಪ್ರಾಯಗಳು

1. ಬಿ.ಡಿ.ಜತ್ತಿ : ಮಾನವನನ್ನು ದೇವನನ್ನಾಗಿ ಮಾಡುವ ಜಗಜ್ಯೋತಿ ಬಸವೇಶ್ವರರ ಉದಾತ್ತ ತತ್ವಗಳ ಪ್ರಚಾರ ಪ್ರಪಂಚದ ನಾನಾ ಮೂಲೆಗಳಲ್ಲಿ ಹರಡಬೇಕಾಗಿದೆ. ಈ ದಿಶೆಯಲ್ಲಿ ಶರಣ ಸೂಗೂರ ಮಠ ಇವರು ಬಸವ ಸುಪ್ರಭಾತ ಬರೆದು ತಮ್ಮ ಪಾಲಿನ ಸೇವೆಯನ್ನು ಸಲ್ಲಿಸಿರುತ್ತಾರೆಂದು ನಾನು ಭಾವಿಸುತ್ತೇನೆ ಎಂದಿದ್ದಾರೆ.

ಒಟ್ಟಿನಲ್ಲಿ ಈ ಒಂದು ಕೃತಿಯಲ್ಲಿ ಅಣ್ಣ ಬಸವಣ್ಣನವರ ಚರಿತ್ರೆಯನ್ನು ಹಾಡಲು ಯೋಗ್ಯವಾದ ರೀತಿಯಲ್ಲಿ ಸುಪ್ರಭಾತ ರೂಪದಲ್ಲಿ ಬರೆದು ಪ್ರಕಟಿಸಿರುವುದು ಪ್ರಶಂಸನೀಯ.

**ಜಿ.ಎಂ.ಗುರುಸಿದ್ದ ಶಾಸ್ತ್ರಿಗಳು**

ಗುರುಸಿದ್ಧ ಶಾಸ್ತ್ರಿಗಳು ಶಹಾಪೂರ ತಾಲೂಕಿನ ನೇಡಿಹಾಳ ಗ್ರಾಮದವರು ಕ್ರಿ.ಶ.1914ರಲ್ಲಿ ಜನಿಸಿದರು. ತಂದೆ ಶ್ರೀ ಮಲ್ಲಿಕಾರ್ಜುನಯ್ಯ ತಾಯಿ ಶ್ರೀಮತಿ ನೀಲಮ್ಮ. ಪ್ರಾಥಮಿಕ ವಿದ್ಯಾಭ್ಯಾಸ ನಾಯ್ಕಲದಲ್ಲಿ ನಂತರ ಶಹಾಪೂರದಲ್ಲಿ ಕಲಿತರು. ಕಾಶಿಯಲ್ಲಿ ಸಂಸ್ಕೃತ ಪದವಿಯನ್ನು ಮುಗಿಸಿ ಕ್ರಿ.ಶ. 1938 ರಲ್ಲಿ ಕಾವ್ಯತೀರ್ಥ ಪದವಿ ಪಡೆದರು. ಯಾದಗಿರಿಗೆ ಬಂದು ಅವರ ಕಾಕನವರಾದ ಬಸವರಾಜ ಶಾಸ್ತ್ರಿಗಳ ಧರ್ಮ ಸಂಜೀವಿನಿ ಎಂಬ ಪತ್ರಿಕೆ ನಡೆಸುತ್ತಿದ್ದರು. ಅವರು ಗುರುಸಿದ್ಧ ಶಾಸ್ತ್ರಿಗಳಿಗೆ ಆದರ ಜವಾಬ್ದಾರಿಯನ್ನು ವಹಿಸಿ ಕೊಡುತ್ತಾರೆ. ಈ ಮುದ್ರಣ ಕಾರ್ಯದಲ್ಲಿ ತೊಡಗಿದ ಶಾಸ್ತ್ರಿಗಳು ಪ್ರವೃತ್ತಿಯಾಗಿ ಅನೇಕ ಲೇಖನ, ಬರಹ, ಗ್ರಂಥ ರಚನೆಯ ಕಾರ್ಯ ಮಾಡಿದರು. ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿಯ ಪ್ರಸಾರ ಮಾಡಿ ಯಾದಗಿರಿಯಲ್ಲಿ ಒಬ್ಬ ಶ್ರೇಷ್ಠ ವಿದ್ವಾಂಸರೆನಿಸಿಕೊಂಡರು.

ಗುರುಸಿದ್ಧ ಶಾಸ್ತ್ರಿಗಳು ಒಬ್ಬ ಉತ್ತಮ ಬರಹಗಾರರು, ವಾಕ್ಪಟುಗಳಾಗಿದ್ದು, ಅನೇಕ ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ, ಸೇವೆಸಲ್ಲಿಸಿ ಅಮರರಾಗಿದ್ದಾರೆ.

1. ಸುಕ್ಷೇತ್ರ ಕಾಳಬೆಳಗುಂದಿ ಶ್ರೀ ಬನದವೀರೇಶ್ವರ–ಸುಪ್ರಭಾತ

2. ಅಷ್ಟೋತ್ತರ ಶತ (108) ನಾಮಾವಳಿ

ಸುಪ್ರಭಾತವು ಕುಸುಮ ಷಟ್ಪದಿಯಲ್ಲಿದ್ದು 108 ನಾಮಾವಳಿಗಳು ರಗಳೆಯಲ್ಲಿ ರಚಿತವಾಗಿವೆ. ಶ್ರೀ ಕಾಳ ಬೆಳಗುಂದಿಯ ಬನದ ವಿರೇಶ್ವರನನ್ನು ಭಕ್ತಿಯಿಂದ ಭಜಿಸಲು ನಾಮ ಪಠಣ ಮಾಡಲು ಈ ಗ್ರಂಥ ಉಪಯೋಗವಾಗಿದೆ.

ಸುಪ್ರಭಾತ (ರಾಗ ಭೈರವಿ)

ಏಳು ಬನದೇಶ್ವರ

ಏಳು ಭವಜೀಜ ಕುಠಾರ

ಏಳು ಕರುಣಾನಿಧಿ ವರ ವೀರಭದ್ರ

ಏಳು ಗಿರಿಜಾತನಯ

ಏಳು ಯಮನುತ

ಏಳು ಕಾಳೆಬೆಳಗುಂದಿಯಾಣ್ಮನೇ॥1

2. ಅಷ್ಟೋತ್ತರ ಶತ (108) ನಾಮಾವಳಿ

ಶ್ರೀ ಮದ್ವಾನುಕೋಟಿ ಸುಪ್ರಕಾರ ಬನದವೀರ

ಆ. ಮಹೇಶನುರಿಯಗಣ್ಣಿನಿಂದ ಪುಟ್ಟಿ ಬನದವೀರ

ವೀರಭದ್ರನೆಂಬ ಶುಭನಾಮ ನಿನಗೆ ಬನದವೀರ

ಮೂರು ಲೋಕದಲ್ಲಿ ನಿನಗೆ ಪೊಲ್ವರಿಲ್ಲ ಬನದವೀರ

ದುರುಳ ದಕ್ಷಬ್ರಹ್ಮತಾನು ಶಿವನ ಬಿಟ್ಟು ಬನದವೀರ॥

ಈ ರೀತಿಯಾಗಿ ಬನದವೀರೇಶ್ವರನ ಚರಿತ್ರೆಯ ನಾಮಾವಳಿಗಳನ್ನು ಜಿ.ಎಂ.ಗುರುಸಿದ್ದ ಶಾಸ್ತ್ರಿಗಳು ಸುಂದರವಾದ ಭಾಷಾ ಶೈಲಿಯಲ್ಲಿ ರಚಿಸಿದ್ದಾರೆ.

ಶ್ರೀ ಷ.ಬ್ರ.ಸದಾಶಿವ ಶಿವಾಚಾರ್ಯ ಮಹಾಸ್ವಾಮಿಗಳವರ ಆಶೀರ್ವಚನದಲ್ಲಿ ಯಾದಗಿರಿ ರಾಮಗಿರಿಯ ಹಿರೇಮಠದ ಲೇಖನ ಪ್ರವೀಣ ವೇ॥ ಪಂ॥ ಗುರುಸಿದ್ದ ಶಾಸ್ತ್ರಿಗಳಿಂದ ರಚಿಸಲ್ಪಟ್ಟ ಶ್ರೀ ಕಾಳೆಬೆಳಗುಂದಿ ಬನದವಿರೇಶ್ವರನ ಸುಪ್ರಭಾತ ಹಾಗೂ 108 ನಾಮಾವಳಿಯ ಗ್ರಂಥವನ್ನು ಸಂಪೂರ್ಣ ನೀರಿಕ್ಷಿಸಿ ಈ ಚಿಕ್ಕ ಗ್ರಂಥಕ್ಕೆ ಆಶೀರ್ವಚನವೆಂದು ನಾಲ್ಕು ಮಾತುಗಳನ್ನು ಬರೆಯಲು ಸಂತೋಷವಾಗುತ್ತದೆ.

ಇದುವರೆಗೂ ಸುಪ್ರಭಾತ ಹಾಗೂ 108 ನಾಮಾವಳಿಗಳನ್ನು ಯಾವ ಕವಿಗಳಂತೂ ಬರೆದಂತೆ ಕಾಣಿಸುವುದಿಲ್ಲ. ಶ್ರೀ ಬನದೇಶ್ವರನ ಭಕ್ತರ ಪ್ರಾರ್ಥನೆಗೆ ಅನುಕೂಲವಾಗುವಂತೆ ಈ ಕಾರ್ಯವನ್ನು ಶ್ರೀ ಶಾಸ್ತಿಗಳು ಮಾಡಿದ್ದು ಶ್ಲಾಘನೀಯವಾಗಿದೆ ಎಂದಿದ್ದಾರೆ.

**ಶ್ರೀ ನರಸಿಂಹಗುಪ್ತ ಬಳಿಚಕ್ರ (1903)**

ಶ್ರೀಯುತರ ಪರಿಚಯವನ್ನು ನಾವು ಈಗಾಗಲೇ ಗದ್ಯ ಸಾಹಿತ್ಯ ವಿಭಾಗ, ಕಾವ್ಯ ಸಾಹಿತ್ಯ ವಿಭಾಗದಲ್ಲಿ ಮಾಡಲಾಗಿದೆ. ಇವರು ಜೀವನ ಚರಿತ್ರೆ, ಪುರಾಣಕಾವ್ಯ ರಚಿಸಿ ಪ್ರಕಟಿಸಿದ್ದಾರೆ. ಜೊತೆಗೆ ಸುಪ್ರಭಾತ ಕೂಡ ರಚಿಸಿ ಪ್ರಕಟಿಸಿದ್ದಾರೆ.

1. ಶ್ರೀ ಕನ್ನಿಕಾ ಪರಮೇಶ್ವರಿಯ ಸುಪ್ರಭಾತ

ಎದ್ದೇಳು ವಾಸವಿಯೆ ವೈಶ್ಯ ಕುಲದೇವತೆಯೆ
ಭಕ್ತ ವೃಂದಕೆ ತಾಯೆ ಆದಿ ಶಕ್ತಿ।।
ಸಿದ್ಧ ಹಸ್ತಳೆ ವರದೆ, ದರುಶನವ ನೀಡೆಮಗೆ
ಸುಪ್ರಭಾತವು ಶ್ರೀ ಕನ್ನಿಕಾ ಪರಮೇಶ್ವರಿ
ರುಷಿ ಪ್ರಭಾತಸಗೋತ್ರ ಸಂಜಾತೆ, ಸದ್ವಿನತೆ
ವಾಣಿಜ್ಯ ವ್ಯವಹಾರ ಗೋರಕ್ಷಣೆ
ಕೃಷಿ ಕರ್ಮ ಗೈವ, ವೈಶ್ಯರ ದೇವಿ ಎದ್ದೇಳು
ಸುಪ್ರಭಾತವು ಶ್ರೀ ಕನ್ನಿಕಾಪರಮೇಶ್ವರಿ।।

ಈ ರೀತಿಯಾಗಿ ಒಟ್ಟು 13 ನುಡಿಗಳ ಈ ಸುಪ್ರಭಾತ ಮೂರು ಪುಟಗಳುಳ್ಳ ಒಂದು ಚಿಕ್ಕ ಕೃತಿ.

**ಜಿ.ಎಸ್.ಬಸವರಾಜಶಾಸ್ತ್ರಿ**

ಶ್ರೀ ಬಸವರಾಜಶಾಸ್ತ್ರಿಯವರ ಪರಿಚಯವನ್ನು ನಾವು ಈಗಾಗಲೇ ಜೀವನ ಚರಿತ್ರೆ ಕವನ ಸಂಕಲನದ ವಿಭಾಗದಲ್ಲಿ ಮಾಡಿಕೊಂಡಿದ್ದೇವೆ. ಶ್ರೀಯುತರು ಕನ್ನಡ, ಹಿಂದಿ, ಸಂಸ್ಕೃತ ಈ ಮೂರು ಭಾಷೆಯಲ್ಲಿ ಪ್ರಾವಿಣ್ಯತೆ ಪಡೆದಿದ್ದು, ತ್ರಿಭಾಷಾ ಪಂಡಿತರಾಗಿದ್ದಾರೆ. ಈಗಾಗಲೇ ಜೀವನ ಚರಿತ್ರೆ, ಕವನ ಸಂಕಲನ ಪ್ರಕಟನೆ ಮಾಡಿದ್ದಾರೆ. ಜೊತೆಗೆ ಶರಣರ ಅಷ್ಟೋತ್ತರ ಶತ ನಾಮಾವಳಿಯನ್ನು ರಚಿಸಿ ಪ್ರಕಟಿಸಿದ್ದಾರೆ.

1. ಗುಡಗಂಟಿಯ ಮಹಾತ್ಮ ಶ್ರೀ ಕಪ್ಪರದ ಅಯ್ಯಪ್ಪ ತಾತನವರ ಅಷ್ಟೋತ್ತರ ಶತನಾಮಾವಳಿ

ಈ ಪುಟ್ಟ ಕೃತಿಯಲ್ಲಿ ಒಟ್ಟು 108 ನಾಮಾವಳಿಗಳಿವೆ. ಅಯ್ಯಪ್ಪ ತಾತನವರ ಜನನದಿಂದ ಅವರ ಜೀವನದ ಎಲ್ಲಾ ವೃತ್ತಾಂತಗಳನ್ನು ಈ ನಾಮಾವಳಿಯಲ್ಲಿ ತಿಳಿಸಿಕೊಟ್ಟಿದ್ದಾರೆ. ಜೀವನದಲ್ಲಿ ಅನೇಕ ಕಷ್ಟ ನಷ್ಟಗಳನ್ನು ಅನುಭವಿಸಿ ಮಾನವ ಸಮಾಜದ ಉದ್ಧಾರಕನಾದ ಮಹಾಯೋಗಿ ಸಿದ್ದಪುರುಷನ ಅಷ್ಟೋತ್ತರ ನಾಮಾವಳಿ ಈ ಕೃತಿಯ ವಸ್ತುವಾಗಿದೆ.

ಓಂ ಶ್ರೀ ಪರಾತ್ಪರ ಪರಂಜ್ಯೋತಿ ನೀನೆ ಅಯ್ಯಪ್ಪಯ್ಯ

ಪಾಪನಾಶಗೈದು ಬೇಗ ಪೊರೆಯೊ ಎನ್ನ

ಸಿದ್ದಯ್ಯಖ್ಯ ಗುರುಲಿಂಗಮಾಂಬೆಯರೊಳು

ಶುದ್ಧ ಮನದಿ ಸಿದ್ದನಾಗಿ ಜನಿಸಿದಯ್ಯ

ಶಿವಾಜ್ಞೆಯಿಂದ ಬಂದ ಸಿದ್ದ ಪುರುಷ

ಅಯ್ಯಪ್ಪಾಖ್ಯನೆಂಬ ನಾಮ ಅಮರ ಗೈದಿ

ಆದಿಯಲ್ಲಿ ಕೊಡೆಕಲ್ಲೊಳು ವಾಸಗೈದಿ

ಬಡತನದ ಬೇಗೆಯಿಂದ ಬಳಲಿದೆಯ್ಯ

ಬಳಲಿ, ಬಳಲಿ, ಬಾಳಿಗಾಗಿ ಪುರವ ತೊರೆದಿ

ಅಲ್ಲಿ ಇಲ್ಲಿ ಸುತ್ತಿ ಸುತ್ತಿ ಸುಖವ ಕಾಣದಾದಿ

ಓಂ ಶ್ರೀ ಪರಾತ್ಪರ ಪಂರಂಜ್ಯೋತಿಯಾದ ಅಯ್ಯಪ್ಪಯ್ಯ ಪಾಪನಾಶ ಮಾಡಿ ಬೇಗ ನನ್ನನು ಕೆರೆಯೋ ಎನ್ನುತ ಸಿದ್ದಯ್ಯ ಮತ್ತು ಗುರುಲಿಂಗಮಾಂಬೆಯ ಉದರದಲ್ಲಿ ಜನಿಸಿದ, ಶಿವಾಜ್ಞೆಯಿಂದ ಬಂದ ಸಿದ್ದ ಪುರುಷ ಅಯ್ಯಪ್ಪನೇ ಮೊದಲು ಕೊಡೆಕಲ್ ಪ್ರದೇಶದಲ್ಲಿ ವಾಸವಿದ್ದು ಬಡತನದಿಂದ ಬಳಲಿ ಊರನ್ನು ತೊರೆದು ಎಲ್ಲಾ ಕಡೆ ಸುತ್ತಾಡಿ ಸುಖವ ಕಾಣದಾದಿ ಅಯ್ಯಪ್ಪ ಎಂದು ಕವಿಗಳು ಹಾಡಿ ಹೇಳುತ್ತಾರೆ.

ವೇ|| ಪಂ|| ವಿರೂಪಾಕ್ಷ ಶಾಸ್ತ್ರಿಗಳು ಶಹಾಪುರ ಇವರು ಮುನ್ನುಡಿಯಲ್ಲಿ ಈ ಭೂಮಂಡಲದಲ್ಲಿ ಭಾರತ ದೇಶವು ಪುಣ್ಯಭೂಮಿ ಹಾಗೂ ಸುವರ್ಣ ಭೂಮಿಯೆಂದು ಪ್ರಸಿದ್ದವಿದೆ. ಇಲ್ಲಿ ಅನಂತ ಮಹಾತ್ಮರೂ, ಸಂತರೂ, ಶರಣರೂ, ಕಾಲ ಕಾಲಕ್ಕೆ ಜನ್ಮವೆತ್ತಿ, ಜೀವಿಗಳನ್ನು ಉದ್ದರಿಸುತ್ತ ಬಂದಿದ್ದಾರೆ. ಈ ಭಾರತ ದೇಶವು ಪರಮಾತ್ಮನ ಲೀಲಾ ಭೂಮಿಯಾಗಿದ್ದು ಸಾಕ್ಷಾತ್ ಪರಮೇಶ್ವರನೇ ಸದ್ಭಕ್ತರನ್ನು ರಕ್ಷಿಸುವದಕ್ಕಾಗಿ ಮಹಾತ್ಮರ ಅವತಾರದಲ್ಲಿ ಭೂಮಿಗಿಳಿದು ಬಂದು ಅಪಾರ ಕರುಣಾನಿಧಿಯೆನಿಸಿ ಕೊಂಡಿದ್ದಾನೆ. ಅಂಥಾ ಶಿವಾಂಶ ಸಂಭೂತರಲ್ಲೊಬ್ಬರಾದ ಸಂತ ಶ್ರೀ ಅಯ್ಯಪ್ಪ ತಾತನವರ ನಾಮಾವಳಿಯ ಸ್ತೋತ್ರವನ್ನು ಭಕ್ತ ಸಮೂಹವು ಪ್ರತಿನಿತ್ಯ ಸಂತರ ನಾಮಾವಳಿಯ ಪಾರಾಯಣ ಮಾಡಿ ಪುನೀತರಾಗಲೆಂಬ ಸದುದ್ದೇಶದಿಂದ ವೀರಶೈವ ತತ್ವ ಜ್ಞಾನದಲ್ಲಿಯೇ ಸದಾನಿರತರೂ, ಶೃತಿಶಾಸ್ತ್ರ, ವಚನ ವಾಙ್ಮಯ, ಅಧ್ಯಾತ್ಮ ತತ್ವವೇತ್ತರೂ ಆಚಾರ ಶೀಲರೂ, ಗುರುಭಕ್ತಿ ಪರಾಯಣರೂ, ಶ್ರೀ ಜಿ.ಎಸ್.ಬಸವರಾಜ ಶಾಸ್ತ್ರಿಗಳು,

ಇವರು ಮಹಾತ್ಮರ ನಾಮಾವಳಿಯನ್ನು ಪ್ರತಿಯೊಬ್ಬ ಭಕ್ತರೂ ಗ್ರಹಿಸಿ, ಭಕ್ತಿ ಭಾವಗಳಿಂದ ಪಾರಾಯಣಗೈದು ಪುನೀತರಾಗಬೇಕು ಎಂದಿದ್ದಾರೆ.

ಅನಿಸಿಕೆ ಎಂಬ ಶೀರ್ಷಿಕೆ ಅಡಿಯಲ್ಲಿ ಹೆಚ್.ಎಂ.ವಿರೇಶ್ವರ ಇವರು ಎರಡು ನೂರು ವರ್ಷಗಳ ಹಿಂದೆ ಬಡ ಕುಟುಂಬದಲ್ಲಿ ಜನಿಸಿ ಜೀವನದ ಸಿಹಿ–ಕಹಿಗಳನ್ನು ಅನುಭವಿಸಿ ಸಿದ್ದ ಪುರುಷನಾಗಿ ಮಹಾಯೋಗಿಯಾಗಿ, ಪವಾಡ ಪುರುಷನಾಗಿ ಮಾನವ ಸಮಾಜಕ್ಕೆ ನಂದಾದೀಪವಾಗಿ ಬೆಳಗಿದ ಗುಡಗುಂಟಿ ಹೊರ ಪೇಟೆ ಮಠದ ಕಪ್ಪರದ ಶ್ರೀ ಅಯ್ಯಪ್ಪ ತಾತನವರ ಅಷ್ಟೋತ್ತರ ನಾಮಾವಳಿ ಇಂದಿನ ಸಮಾಜಕ್ಕೆ ಅನಿವಾರ್ಯವಾಗಿದೆ. ಇಂದು ವಿಜ್ಞಾನದೆಡೆಯುತ್ತ ನಡೆಯುತ್ತಿರುವ ಯುವ ಪೀಳಿಗೆ ದೇವರಲ್ಲಿ ಭಕ್ತಿ, ಶ್ರದ್ಧೆ, ನಿಷ್ಠೆ ಉಂಟಾಗಬೇಕಾದರೆ ಇಂತಹ ಕೃತಿಗಳು ಹೊರಬರಬೇಕು. ಅವುಗಳಿಂದ ಮಾನವನ ಸುಪ್ತಾವಸ್ಥೆಯಲ್ಲಿರುವ ಭಕ್ತಿಯು ಜಾಗೃತಗೊಳ್ಳ ಬಹುದೆಂದು ನನ್ನ ಅನಿಸಿಕೆ ಎಂದು ಚೆನ್ನಾಗಿ ಹೇಳಿದ್ದಾರೆ.

**ವಿರೇಶ ಹಿರೇಮಠ ಹಳ್ಳೂರ (1997)**

ಸರಳ ಸ್ವಭಾವದ ಸ್ನೇಹ ಜೀವಿ ಕನಸುಗಾರರಾದ ಶ್ರೀ ವಿರೇಶ ಹಿರೇಮಠ ಹಳ್ಳೂರವರು ಆದರ್ಶ ಶಿಕ್ಷಕರಾಗಿದ್ದರಲ್ಲದೆ ಒಬ್ಬ ಉತ್ತಮ ಸಾಹಿತಿಗಳಲ್ಲಿರ ಬೇಕಾದ ಎಲ್ಲಾ ಲಕ್ಷಣಗಳನ್ನು ಮೈಗೂಡಿಸಿಕೊಂಡಿದ್ದಾರೆ. ವಿರೇಶ ಹಿರೇಮಠ ಅವರು ಸುಮಾರು20 ಗ್ರಂಥಗಳನ್ನು ರಚಿಸಿದ್ದಾರೆ. ಆದರೆ ಅದರಲ್ಲಿ ಕೆಲವೊಂದು ಮಾತ್ರ ನಮಗೆ ಲಭ್ಯವಾಗಿವೆ. ಹಳ್ಳೂರ ಅವರು ಕನ್ನಡ ಸಾಹಿತ್ಯ ಪರಿಷತ್ತು ವಲಯ ಹುಣಸಗಿಯ ಅಧ್ಯಕ್ಷರಾಗಿದ್ದು ಅತ್ಯುತ್ತಮ ಶಿಕ್ಷಕರು.

ಶ್ರೀಯುತರು ಜೀವನ ಚರಿತ್ರೆ ಕವಲ ಸಂಕಲನ ಸುಪ್ರಭಾತಗಳನ್ನು ರಚಿಸಿ ಪ್ರಕಟಿಸಿದ್ದಾರೆ. ಜೊತೆಗೆ ಭಕ್ತಿಗೀತೆಗಳನ್ನು ರಚಿಸಿ ಪ್ರಕಟಿಸಿದ್ದಾರೆ. ಅದು ಈ ಕೆಳಗಿನಂತಿದೆ.

1. ಶರಣ ಗೀತಾಮೃತ

2. ಶಿವಶರಣೆ ಶ್ರೀ ಶಿವಲಿಂಗಮ್ಮನವರು

ಶರಣ ಗೀತಾಮೃತ ಭಕ್ತಿ ಗೀತೆಗಳ ಸಂಕಲನವು ಹನ್ನೆರಡನೆಯ ಶತಮಾನದ ಕಲ್ಯಾಣದ ಶರಣ ಶ್ರೇಷ್ಠ ಭಕ್ತಿ ಭಂಡಾರಿ ಬಸವಣ್ಣ, ದಾಸಿಮಯ್ಯನವರಿಂದ ಹಿಡಿದು ಇಂದಿನ ಇಪ್ಪತ್ತನೆಯ ಶತಮಾನದ

ಬಂಥನಾಳ ಸಂಗನ ಬಸವ ಮಹಾಸ್ವಾಮಿಗಳ ವರೆಗಿನ ಭಕ್ತಿಗೀತೆಗಳು ಈ ಶರಣ ಗೀತಾಮೃತ ಕೃತಿಯಲ್ಲಿವೆ. ಕೆಲವು ಗೀತೆಗಳು ಈ ಕೆಳಗಿನಂತಿವೆ.

ಬಸವ ಬಾರಯ್ಯ
ಹರನ ಕರುಣೆಯ ಬೆಳಗಿ
ಶರಣವಾಣಿಯ ಮೊಳಗಿ
ಹರಮತವನುದ್ದರಿಸಲಿನೊಮ್ಮೆ
ಮರಳಿ ಧರೆಗೆ ಬಾರಯ್ಯ ಬಸವ॥
ಭಕ್ತಿ ಭಾವದಿ ನೆನೆವೆ
ಮುಕ್ತ ಮನದಲಿ ಕರೆವೆ
ಶಕ್ತಿ ಮಾರುತಿ ಇಳೆಗಿಳಿದು ಬಾರಯ್ಯ
ಮುಕ್ತಾತ್ಮ ಕರುಣಾಳು ಬಸವ ಬಾರಯ್ಯ
ಉತ್ತಮದ ಧರ್ಮಕ್ಕೆಂದು
ತತ್ತರಿಸುತಿದೆ ಜಗವಿಂದು
ಮೆತ್ತನೆ ಬಸವನೀ ಬಂದು
ಕುತ್ತಳಿಸು ಈ ಜಗಕೆ

ಕವಿಯು ಇಲ್ಲಿ ಬಸವಣ್ಣನನ್ನು ಮತ್ತೊಮ್ಮೆ ಈ ಜಗಕೆ ಇಳಿದು ಬಾ ಜನರನ್ನು ಉದ್ಧರಿಸು ಬಾ ಎಂದು ಹಾಡಿ ಹೊಗಳಿದ್ದಾರೆ. ಈ ಕೃತಿಯನ್ನು ಕುರಿತು ಬೆನ್ನುಡಿಯಲ್ಲಿ ಕಂಚ್ಯಾಣಿ ಶರಣಪ್ಪ ವಿಜಾಪೂರ ಅವರು, ಕಲ್ಯಾಣ ಕ್ರಾಂತಿಯ ಪ್ರಭಾವಳಿಯಲ್ಲಿ ಬರುವ ಮಹಾ ಚೇತನಗಳೊಡನೆ ಕವಿ ಹೃದಯ ಇಲ್ಲಿ ಆತ್ಮೀಯವಾಗಿ ಸ್ಪಂದಿಸಿದೆ. ಅದೇ ಅಮೃತವಾಗಿ ಸಹೃದಯರನ್ನು ತಣಿಸುವದರಲ್ಲಿ ಸಂದೇಹವಿಲ್ಲ. ಇದು ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಚಿಕ್ಕದಾದರೂ ವಿಶಿಷ್ಟವಾಗಿದೆ ಎಂದಿದ್ದಾರೆ.

ಅದೇ ರೀತಿ ಮುನ್ನುಡಿಯಲ್ಲಿ ಗುರು ಬಸವಯ್ಯ ಅಮ್ಮಾಪೂರ ಅವರು, ಮೂಲತಃ ಸಹೃದಯಿಗಳೆಂದು ಗುರುತಿಸಿಕೊಳ್ಳುವ ಹೃದಯವಂತ ಕವಿ ಸಹೋದರ ವಿರೇಶ ಹಿರೇಮಠ ಹಳ್ಳೂರ ಅವರ ಕಾವ್ಯದ ಉಗಮಸ್ಥಳ ಅವರ ಹೃದಯಾಂತರಾಳವೇ ಆಗಿರುವದರಿಂದ ಪ್ರಸ್ತುತ ಶರಣ ಗೀತಾಮೃತ

ಕೃತಿಯೊಳಗಿನ ಶ್ರೀಯುತರ ಭಕ್ತಿಗೀತೆಗಳು ಮತ್ತೊಂದು ಹೃದಯವನ್ನು ನೇರವಾಗಿ ಹೊಕ್ಕು ಅಲ್ಲಿ ಭಕ್ತಿ ಭಾವಗಳ ಸೆಲೆಯನ್ನು ಉದ್ದಿಪತನಗೊಳಿಸುವ ಶಕ್ತಿಯನ್ನು ಹೊಂದಿವೆ ಎಂದು ಸರಿಯಾಗಿ ಹೇಳಿರುವರು.

ಒಟ್ಟಿನಲ್ಲಿ ಈ ಕವನ ಸಂಕಲನದಲ್ಲಿ ಭಕ್ತಿ ಭಾವದ ಭರದಿಂದ ಕೂಡಿದ ಸುಮಾರು 15 ಶಿವಶರಣರು ಹಾಗೂ ಶಿವಶರಣೆಯರ ಕುರಿತಾದ ಗೀತೆಗಳಿವೆ. ಎಲ್ಲಾ ಗೀತೆಗಳು ಸರಳವಾದ ಭಾಷಾ ಶೈಲಿಯಲ್ಲಿ ಮೂಡಿಬಂದಿವೆ.

## 2. ಶಿವಶರಣೆ ಶ್ರೀ ಶಿವಲಿಂಗಮ್ಮನವರು

ಪ್ರಸ್ತುತ ಶಿವಶರಣೆ ಶ್ರೀ ಶಿವಲಿಂಗಮ್ಮನವರು ಎಂಬ ಸುಪ್ರಭಾತವನ್ನು ಮಹಾಮಹಿಮೆ ಪುರುಷಳಾದ ಶಿವಶರಣೆ ಶಿವಲಿಂಗಮ್ಮನವರು ಸಗರ ನಾಡಿನ ಸತ್ಯ ಶರಣರು ಬಸವಾದಿ ಶರಣರ ಜೀವನ ಮಾರ್ಗದಲ್ಲಿ ಧಾರ್ಮಿಕ, ಸಾಮಾಜಿಕ, ಆಧ್ಯಾತ್ಮಿಕ ಕಾರ್ಯಗಳ ಮೂಲಕ ಮೇಲು-ಕೀಳು, ಬಡವ ಬಲ್ಲಿದ ಎನ್ನದೆ ಜನ ಸೇವೆ ಮಾಡಿದ, ಭಕ್ತರನ್ನು ಉದ್ದರಿಸಿದ ಮಹಾಶಿವಶರಣೆಯವರ ಸುಪ್ರಭಾತ ಹಾಗೂ ಭಕ್ತಿ ಗೀತೆಗಳನ್ನು ಈ ಕೃತಿಯಲ್ಲಿ ಪ್ರಕಟಿಸಿದ್ದಾರೆ.

ಸುಪ್ರಭಾತ

ಏಳು ಸೂಗೂರ ಯೋಗಿಣಿ ಏಳು ಭಕ್ತಿಯಗಣಿ
ಏಳಮ್ಮ ಸಗರ ನಾಡಿನ ಶರಣ ದಿನಮಣಿಯೆ
ಏಳು ನೂರೆಪ್ಪತ್ತು ಅಮರ ಗಣಗಳು ತಾವು
ಪಾಳಿಯಲಿ ತವ ದರುಶನಕ್ಕೆ ಕಾದಿಹರು ತಾಯೆ।।
ರವಿಯು ಬಂದಿಹನು ತವಪಾದ ದರುಶನಕೆ
ಭೂಮಿಯ ಬೆಳಗುವ ಬೆಳಕ ನಿನ್ನಿಂದ ಪಡಯಲ್ಕೆ
ಪವನ ಸೂಸುತಲಿಹುದು ತಾ ಚವರಿ ಬೀಸಿ
ಕವಿದ ಕತ್ತಲೆ ಕಳೆದು ಭವಕೆ ದಿವವ ಬೀರೇಳು

ಸೂಗೂರು ಶಿವಲಿಂಗಮ್ಮನವರನ್ನು ಏಳು ಎದ್ದೇಳು ನೂರೆಪ್ಪತ್ತು ಉತ್ತಮ ಗುಣಗಳು ಹೊಂದಿದ ತಾಯೇ ಏಳು ಭಕ್ತರೆಲ್ಲ ದರುಶನಕೆ ಕಾಯುತಿಹರು ಎಂದು ಸುಪ್ರಭಾತ ಹಾಡಿದ್ದಾರೆ.

ಭಕ್ತಿ ಗೀತೆಗಳು

ಅಮ್ಮ ಅಮ್ಮ ನಮ್ಮಮ್ಮ

ಅಮ್ಮ ಅಮ್ಮ ನಮ್ಮಮ್ಮ ಬಡವರ ಬಂಧು ನಮ್ಮಮ್ಮ
ಬೆತ್ತವ ನೂರುತ ಮೆತ್ತಗೆ ನಡೆಯುವ ನಮ್ಮಮ್ಮ
ಬಾಗಿದ ಬೆನ್ನಿನ ಮಾಗದ ಕಣ್ಣಿನ ಶಿವಲಿಂಗಮ್ಮ
ಅಮ್ಮ ಅಮ್ಮ ನಮ್ಮಮ್ಮ ಬಡವರ ಬಂಧು ನಮ್ಮಮ್ಮ
ಬಿಕ್ಕಟ್ಟಿದ್ದರೂ ಒಕ್ಕಟ್ಟಿರಲಿ ಎಂದು ಹೇಳಿದ ನಮ್ಮಮ್ಮ
ಶರಣ ಶ್ರೇಷ್ಟಳು ಮಹಿಮಾಪುರುಷಳು ನಮ್ಮಮ್ಮ
ಪುಂಡೆಪಲ್ಯ ರೊಟ್ಟಿಯಂದರೆ ನಿನಗದು ಬಲು ಇಷ್ಟಮ್ಮ
ಅಮ್ಮ ಅಮ್ಮ ನಮ್ಮಮ್ಮ ಬಡವರ ಬಂಧು ನಮ್ಮಮ್ಮ

ಶ್ರೀ ಶಿವಲಿಂಗಮ್ಮನವರನ್ನು ಕವಿಗಳು ಭಕ್ತಿ ಪೂರ್ವಕವಾಗಿ ಅವರ ಗುಣಗಳನ್ನು ವರ್ಣಿಸುತ್ತಾ ಹಾಡಿ ಹೊಗಳಿದ್ದಾರೆ. ಈ ಕೃತಿಯನ್ನು ಕುರಿತು ಡಾ.ಬಿ.ಆಯ್ ಬೇನಾಳ ಅವರು ಬೆನ್ನುಡಿಯಲ್ಲಿ ವಿರೇಶ ಹಿರೇಮಠರು ಆಶು ಕವಿಯಾಗಿ ಚರಿತ್ರೆಕಾರರಾಗಿ ವಚನಕಾರರಾಗಿ ಸಾಹಿತ್ಯ ಲೋಕದಲ್ಲಿ ಕೀರ್ತಿ ಗಳಿಸಿದ್ದಾರೆ.

ಮಹಾಮಹಿಮ ಪುರುಷಳಾದ ಶಿವಶರಣೆ ಶ್ರೀ ಶಿವಲಿಂಗಮ್ಮ ಅಮ್ಮನವರ ಭಕ್ತಿ ಮುಕ್ತಿ ಪ್ರದಾಯಕವಾದ ಸುಪ್ರಭಾತವನ್ನು ರಚಿಸಿದ ಕವಿ ವಿರೇಶ ಹಿರೇಮಠರವರು ಇಂಥ ಇನ್ನೂ ಅನೇಕ ಕೃತಿಗಳನ್ನು ಹೊರತರಲೆಂದೂ ಕಲ್ಯಾಣ ನಾಡಿನ ಪ್ರತಿಷ್ಠಿತ ಪ್ರಶಸ್ತಿಯನ್ನು ಪಡೆಯಲಿ ಎಂದು ಹೃತ್ಪೂರ್ವಕವಾಗಿ ಆಶಿಸುತ್ತೇನೆ ಎಂದು ಹಾರೈಸಿದ್ದಾರೆ.

**ಎ.ಕೃಷ್ಣಸುರಪುರ, ಜಿ.ವಿ.ಅಯ್ಯರ**

ಎ.ಕೃಷ್ಣ ಸುರಪುರ ಅವರು ಸುರಪುರದ ನಿವಾಸಿಗಳು ವೃತ್ತಿಯಿಂದ ಶಿಕ್ಷಕರಾಗಿದ್ದು, ನಿವೃತ್ತಿ ಹೊಂದಿದ್ದಾರೆ. ಸಗರನಾಡಿನ ಕವಿಗಳು ಸರಳ ಸಜ್ಜನರಾದ ಎ.ಕೃಷ್ಣ ಅವರು ಹಿರಿ-ಕಿರಿಯರಿಗೆ ಮಾರ್ಗದರ್ಶಕರು ಶ್ರೀಯುತರ ಪರಿಚಯವನ್ನು ಕವನಸಂಕಲನ ವಿಭಾಗದಲ್ಲಿ ಮಾಡಿಕೊಂಡಿದ್ದೇವೆ. ಅನುವಾದ ಪದ್ಯಗಳನ್ನು ಸುಪ್ರಭಾತಗಳನ್ನು ರಚಿಸಿ ಪ್ರಕಟಿಸಿದ್ದಾರೆ.

1. ಏಳು ಸುಪ್ರಭಾತಗಳು–ಮತ್ತಿತರ ವಿರಕ್ತಿ ವಿರಚನೆಗಳು :

ಈ ಕೃತಿಯಲ್ಲಿ ಎ.ಕೃಷ್ಣಸುರಪುರ ಅವರ ಏಳು ಸುಪ್ರಭಾತಗಳು ಹಾಗೂ ಜಿ.ವಿ.ಅಯ್ಯರ ರಚಿತ ಹತ್ತು ಭಕ್ತಿ ಗೀತೆಗಳು ಇವೆ. ಶ್ರೀ ಎ.ಕೃಷ್ಣ ಅವರು ಈ ಕೃತಿಯಲ್ಲಿ ಸುಪ್ರಭಾತಗಳ ಸರಮಾಲೆಯನ್ನೆ ರಚಿಸಿ ಪ್ರಕಟಿಸಿದ್ದಾರೆ. ಅವರ ಸುಪ್ರಭಾತಗಳಲ್ಲಿ ಕೆಲವೊಂದು ಸುಪ್ರಭಾತಗಳು ಆಕಾಶವಾಣಿಯಲ್ಲಿ ಪ್ರಸಾರಗೊಂಡಿವೆ.

1. ಸುರಪುರದ ಶ್ರೀ ವೇಣುಗೋಪಾಲಸ್ವಾಮಿ ಸುಪ್ರಭಾತ 2) ಶ್ರೀ ಚಂದ್ರಲಾ ಸುಪ್ರಭಾತ 3) ಸಿದ್ದ ಪರ್ವತ ಶ್ರೀ ಬಗುಳಾಮುಖಿ ಸುಪ್ರಭಾತ 4) ಶ್ರೀ ರಾಘವೇಂದ್ರ ಸುಪ್ರಭಾತ 5) ಶ್ರೀ ಕಡಕೋಳ ಮಡಿವಾಳೇಶ್ವರ ಸುಪ್ರಭಾತ 6) ಕೊಡಲಗಿಯ ಶ್ರೀ ಶಾಂತಾನಂದ ಸುಪ್ರಭಾತ 7) ಸದ್ಗುರು ಶ್ರೀ ಮಾಧವನಂದ ಸುಪ್ರಭಾತ ಈ ಏಳು ಸುಪ್ರಭಾತಗಳಲ್ಲಿ ಸಿದ್ದಪರ್ವತ ಶ್ರೀ ಬಗುಳಾಮುಖಿ ಸುಪ್ರಭಾತವು ಸಂಪೂರ್ಣ ಸಂಸ್ಕೃತದಲ್ಲಿಯೇ ರಚನೆಯಾಗಿದೆ ಜೊತೆಗೆ ವಿರಕ್ತಿ ಗೀತೆಗಳು ಇವೆ. ಅದರಲ್ಲಿ ಒಂದು ಈ ಕೆಳಗಿನಂತಿದೆ.

ಶ್ರೀ ಚಂದ್ರಲಾ ಪರಮೇಶ್ವರಿ ಸುಪ್ರಭಾತ

ಏಳು ಜಗದೀಶ್ವರಿಯೆ ರಾಜ ರಾಜೇಶ್ವರಿಯೆ
ಏಳಮ್ಮ ಏಳೇಳು ಶ್ರೀ ಚಂದ್ರಲಾಂಬೆ
ಏಳು ಸುಂದರಸದನೆ ಏಳು ಚಂದಿರವದನೆ
ಏಳಮ್ಮ ಬೆಳಗಾಯ್ತು ಏಳು ಜಗದಂಬೆ।।1
ಏಳು ಶ್ರೀಹರಿಮಣಿ ಏಳೇಳು ಮಹಕರುಣಿ
ಬೆಳಗಾಯಿತೇಳಮ್ಮ ಭಾಗ್ಯಪ್ರದಾತೆ
ಮುತ್ತಿನಾರತಿ ತಂದು ಮುತ್ತೈದೆಯರು ಬಂದು
ಎತ್ತಿ ಬೆಳಗುತಿಲಿಹರು ಶರದಿ ಸಂಭೂತೆ।।2

ವಿರಕ್ತಿ ಗೀತೆಗಳು :

ಚಲನ ಚಿತ್ರರಂಗದ ಹೆಸರಾಂತ ನಟ, ನಿರ್ಮಾಪಕ, ನಿರ್ದೇಶಕರಾದ ಜಿ.ವಿ.ಅಯ್ಯರ ಅವರ

ಹತ್ತು ಭಕ್ತಿಗೀತೆಗಳು ಇದೇ ಕೃತಿಯಲ್ಲಿವೆ. ಈ ಹತ್ತೂ ಭಕ್ತಿಗೀತೆಗಳು ಶ್ರೀ ರಾಘವೇಂದ್ರ ಸ್ವಾಮಿಗಳ ಕುರಿತಾದ ಭಕ್ತಿಗೀತೆಗಳಾಗಿವೆ.

ಮೂಗು ದಾರವಯ್ಯಾ

ಮೂಗು ದಾರವಯ್ಯ ಎನಗಿದು ಮೂಗುದಾರವಯ್ಯ
ಮಂದಹಾಸದಾ ನಿನ್ನಯ ನಗುಮೊಗ ಮೂಗುದಾರವಯ್ಯ
ನಿನ್ನ ನೊಲಿವದಾ ಕಾಂತಶಕ್ತಿ ಕೈ ಹಿಡಿದು ನಡೆಸಿತಯ್ಯ
ನಿನ್ನೆಡೆಯ ಗಾಳಿ ಹೂಗಂಧವಾಗಿ ಕೈಬೀಸಿ ಕರೆಯಿತಯ್ಯ
ಓಡಿ ನಾಬಂದು ನಮಿಸಿ ನಿಂದೆ ನಗು ಹಾಲು ಚೆಲ್ಲಿತಯ್ಯ
ರಾಘವೇಂದ್ರ ಗುರು ನಗುವಿನಲ್ಲಿ ವೈಕುಂಠ ಕಂಡಿತಯ್ಯ
ಬಾಲಗೋಪಾಲ ಗೋಕುಲವನೆ ವೈಕುಂಠ ಮಾಡಿದಂತೆ
ವ್ರಜ ಸುಂದರಿಯರ ತುಟಿಯೆಂಜಲಲೇ ಶಬರಿಯ ಸವಿದಂತೆ
ಕುಚೇಲ ನಿತ್ತವಲಕ್ಕಿಯಲ್ಲಿ ತಾಯಶೋದೆ ಹಾಲನು ಕುಡಿದಂತೆ
ಮಂತ್ರಾಲಯದಾ ಗುರುವನು ಕಂಡರೆ ಸಗ್ಗವೆ ಭೂಮಿಗೆ ಇಳಿದಂತೆ

ಈ ಕೃತಿ ಹಾಗೂ ಕವಿಗಳನ್ನು ಕುರಿತು ಮುನ್ನುಡಿಯಲ್ಲಿ ಪಾವಗಡ ಪ್ರಕಾಶರಾವ ಅವರು, ಸುರಪುರದ ಮಣ್ಣಿಗೇ ಒಂದು ದಿವ್ಯ ಸಂವೇದನೆ ಇದೆ. ಅಲ್ಲಿ ಕಲಿಗಳ ಕೈಂಕರ್ಯ ಸಂದಿದೆ. ಕವಿಗಳ ಕಾವ್ಯ ಹರಿದಿದೆ. ಸಾಮಾಜಿಕ ಶಿಸ್ತು ಏರ್ಪಟ್ಟಿದೆ. ಸಾಹಿತ್ಯಿಕ ಹೆಚ್ಚು ಹತ್ತಿದೆ. ರಾಜಕೀಯ ಜಾಗೃತಿ ಇದೆ. ಅದರ ಚಿಂತನೆ ಇದೆ. ಆಲಾಪನೆಯ ಕೇಳ್ಕೆ ಇದೆ. ಅದನ್ನಾನಂದಿಸುವ ರಸಿಕತೆ ಇದೆ. ಜೈಮಿನಿ ಭಾರತದ ಎರಡುಪನ್ಯಾಸಗಳನ್ನು ನೀಡಿದ ನನಗೆ ಸಂತಸ ಸಿಕ್ಕಿದೆ – ಹರ್ಷ ಹೆಚ್ಚಿದೆ.

ಕೃಷ್ಣ ಸುರಪುರರು ಕವಿಗಳು ಮನಮುಟ್ಟಿ ಹಾಡ ಬಲ್ಲವರು! ಕಣ್ಮುಚ್ಚಿ ಕಾಣಬಲ್ಲವರು! ಕಿವಿ ತೆರೆದಿದ್ದರೂ ಬಾಹ್ಯಕ್ಕೆ ಕಿವುಡಾಗಿ ಒಳ ದನಿಯನ್ನು ಸವಿಯ ಬಲ್ಲವರು! ವೃತ್ತಿಯಲ್ಲಿ ಉಪಾಧ್ಯಾಯರಾದ್ದರಿಂದ ಅಧ್ಯಯನ ಸಹಜ! ಅಧ್ಯಾಪನ ಅನುಜ! ಅದು ಕಾರಣವೇ ಸಾಮಾನ್ಯರಿಗೆ ಸಿಗದ್ದು, ಅವರ ವಿಚಿಕಿತ್ಸಕ ವಿಲೋಚನಕ್ಕೆ ದೃಶ್ಯ ಕಂಡದ್ದು ಹೇಳುವಲ್ಲಿ ಅನ್ಯರಿಗೆ ಕಷ್ಟವಾದರೆ, ಇವರಿಗದು ಮಲ್ಲಿಗೆಯ ಮಾರ್ಗ! ಹೀಗಾಗಿ ಇಲ್ಲಿನ ಅವರ ಬರಹಕ್ಕೆ ಸರಳತೆಯ ಸೂತ್ರವಿದೆ.

ಸುಪ್ರಭಾತ ಸಪ್ತಮವನ್ನು ಅವರು ಧ್ವನಿಸುವುದೇ ಅಪೂರ್ವ ಏಳನ್ನು ಅವರು ಪ್ರಕಾಶಿಸುವ ಪರಿಯೇ ಪ್ರಬೋಧ!! ಏಳು ಎಂದು ಯಾರಿಗೆ ಹೇಳುತ್ತಿದ್ದಾರೆಂಬುದೇ ಒಂದು ಪ್ರಶ್ನೆ! ಅದಕ್ಕುತ್ತರ ಹುಡುಕುತ್ತ ಹೊರಟು ಪುಸ್ತಕದ ಕೊನೆಗೆ ಬರಬೇಕು ಕೊನೆಯ ಕವನಕ್ಕೂ ಕರವಿಡಬೇಕು. ಮತ್ತೆ ಸುಪ್ರಭಾತ ಶೀರ್ಷಿಕೆಯನ್ನೋದಿ ಇಳಿಯಬೇಕು. ಅಂತದ ಸಾಲೆಕಡಕಲ್ಲಿ ನಿಲ್ಲಬೇಕು! ಆಗ ಅರಿವಾಗುತ್ತದೆ. ಈ ಏಳು ಎಬ್ಬಿಸುವುದು ದೇವನನ್ನು ಅಲ್ಲ ಗುರುವನ್ನೂ ಅಲ್ಲ ಎಂಬುದು ಎಂದು ತಾತ್ವಿಕವಾಗಿ ನುಡಿದಿರುವರು.

ಅಯ್ಯರ್ ಅವರ ಹತ್ತು ಕೀರ್ತನೆಗಳು ಈ ಹೊತ್ತಿಗೆಯ ಅಂದವನ್ನು ಹೆಚ್ಚಿಸಿವೆ. ನಿರ್ದೇಶಕರೆಂದು ಜಿ.ವಿ.ಅಯ್ಯರ ಅವರನ್ನು ಕಂಡಿದ್ದ ನಮಗೆ ಅವರ ಈ ಕವಿದರ್ಶನ ಅನಿರೀಕ್ಷಿತ!! ಎರವಲು ಹೆಣ್ಣಿನ ಸುತ್ತ ಹರಿದ ಹತ್ತಿ ಸೀರೆ ಸುತ್ತುವ ದುರ್ಬಲರಲ್ಲ ಅವರು! ತಮ್ಮದೇ ಕಾವ್ಯ ಕನ್ಯೆ! ತಾವೇ ತಿದ್ದಿ ರೂಪಿಸಿದ ಕವನ ಕಾಮಿನಿ! ಧ್ಯಾನದಿಂದ ಸೃಷ್ಟಿಸಿದ ದಿವ್ಯ ಆಭರಣಗಳನ್ನು ರಜತ ಕಾಣಿಗೆ ಒಪ್ಪಿಸಿದ ತಪಸ್ವಿ ದ್ವೈತದಲ್ಲಿ ಅದ್ವೈತವನ್ನು ಮನದಲ್ಲಿ ಮುಕುಂದನನ್ನು ಹಿಡಿಯಲ್ಲಿ ಇಡಿಯನ್ನು ರಾಘವೇಂದ್ರರಲ್ಲಿ ಸರ್ವ ಶಕ್ತನನ್ನು ದರ್ಶಿಸಿರುವ ದಾರ್ಶನಿಕ ಎಂದು ಸರಿಯಾಗಿ ಹೇಳಿದ್ದಾರೆ.

ಈ ಕೃತಿಯಲ್ಲಿ ಎ.ಕೃಷ್ಣ ಸುರಪುರ ಸುಪ್ರಭಾತಗಳಲ್ಲಿ ಭಕ್ತಿ, ಭಾವ ತುಂಬಿ ಹರಿದೆ. ಸುಂದರವಾದ ಭಾಷಾ ಶೈಲಿಯಲ್ಲಿ ರಚನೆಗೊಂಡ ಸುಪ್ರಭಾತಗಳ ರಚನಾ ಸೌಂದಯ್ಯ ಮೆಚ್ಚುವಂತಹದ್ದು. ಅದರಂತೆ ಅಯ್ಯರ ಅವರ ಕಾವ್ಯ ಮನ ಮೆಚ್ಚುವಂತಹದು.

ಡೈನಮಿಕ್ ಕವಿ (ಸಿದ್ದರಾಮ ಹೊನ್ಕಲ್)

ಚೀನಾದ ಗಾರ್ಕಿ ಎಂದೇ ಪ್ರಖ್ಯಾತನಾಗಿರುವ ಮಹಾ ಲೇಖಕ ಲುಷನ್ ತಾನು ಲೇಖಕನಾದ ಬಗೆಯನ್ನು ಹೀಗೆ ವಿವರಿಸಿದ್ದಾನೆ. ನಾನು ವೈದ್ಯಕೀಯ ವಿಜ್ಞಾನ ಓದಲು ಜಪಾನಿಗೆ ಹೋದಾಗ ರಷ್ಯ ಮತ್ತು ಜಪಾನ ನಡುವೆ ಯುದ್ಧ ನಡೆಯುತ್ತಿತ್ತು. ಒಂದು ದಿನ ಆ ಕುರಿತು ಒಂದು ನ್ಯೂಸ್ ರೀಲ್ ಸ್ಲೈಡನ್ನು ನಾನು ನೋಡಿದೆ. ಅದರಲ್ಲಿ ಸದೃಢನಾದ ಒಬ್ಬ ಚೀನಾದ ಯುವಕನಿಗೆ ಕೈಕೊಳ ತೊಡಿಸಲಾಗಿತ್ತು. ರಷ್ಯಕ್ಕೆ ಗುಪ್ತವಾಗಿ ಮಾಹಿತಿ ಒದಗಿಸುತ್ತಿದ್ದಾನೆಂಬ ಆಪಾದನೆ ಅವನ ಮೇಲಿತ್ತು. ಅದಕ್ಕಾಗಿ ಜಪಾನಿ ಸೈನಿಕರು ಅವನ ಶಿರಚ್ಛೇದನ ಮಾಡುವವರಿದ್ದರು. ಈ ಬೀಭತ್ಸ ದೃಶ್ಯ ನೋಡಿ ಆನಂದಿಸಲು ಇನ್ನೂ ಕೆಲವು ಯುವಕರು ಆ ಬಂಧಿತ ವ್ಯಕ್ತಿಯ ಸುತ್ತ ನೆರೆದಿದ್ದರು. ಈ ಸ್ಲೈಡ್ ನೋಡಿದೊಡನೆಯೆ ನನಗೆ ನನ್ನ ಜನತೆಯ ಮನಸ್ಥಿತಿಯ ಬಗ್ಗೆ ಕಳವಳ ಉಂಟಾಯಿತು. ಕೂಡಲೇ ನಾನು ಶಂಬಾಯಿ ಮೆಡಿಕಲ್ ಕಾಲೇಜಿನಿಂದ ಟೋಕಿಯೋಗೆ

ಹೋದೆ. ಈ ಘಟನೆಯಿಂದ ನನಗೆ ಖಚಿತವಾದದ್ದೇನೆಂದರೆ, ಯಾವುದೇ ಒಂದು ದುರ್ಬಲ ಮತ್ತು ಹಿಂದುಳಿದ ದೇಶದ ಜನತೆ ಎಷ್ಟೇ ದೃಢಕಾಯರಾಗಿದ್ದರೂ, ಆರೋಗ್ಯವಂತರಾಗಿದ್ದರೂ, ಮಾನಸಿಕ ಗುಲಾಮಗಿರಿಯ ರೋಗದಿಂದ ಬಳಲುತ್ತಿದ್ದಾರೆ. ಅವರಿಂದ ಆ ದೇಶಕ್ಕೆ ಏನೂ ಪ್ರಯೋಜನವಿಲ್ಲ ಎಂಬುದು ಜನರ ರೋಗ ರುಜಿನಗಳಿಗೆ ಪರಿಹಾರ ಒದಗಿಸಬಹುದಾಗಿದ್ದ ವೈದ್ಯಕೀಯ ಶಿಕ್ಷಣವನ್ನು ತಕ್ಷಣವೇ ತೊರೆದು, ಸಾಮಾಜಿಕ ಮತ್ತು ಮಾನಸಿಕ ರೋಗಕ್ಕೆ ಸಮರ್ಥ ಪರಿಹಾರ ಕಂಡು ಕೊಳ್ಳಬೇಕೆಂಬ ಅದಮ್ಯ ಬಯಕೆಯಿಂದ ನಾನು ಸಾಹಿತ್ಯದ ಕ್ಷೇತ್ರಕ್ಕಿಳಿದೆ. ಕಾರಣವಿಷ್ಟೆ-ಸಾಹಿತ್ಯ ಇಂಥ ಕೆಲಸಕ್ಕೆ ಒಂದು ಅನುಪಮ ಸಾಧನ.

ಶ್ರೀ ಸಿದ್ಧರಾಮ ಹೊನ್ಕಲ್ ಬಹುಶಃ ಇಂಥದೇ ಒಂದು ಮನೋಭೂಮಿಕೆಯ ಹಿನ್ನಲೆಯಲ್ಲಿಯೇ ಸಾಹಿತ್ಯ ನಿರ್ಮಿತಿಯ ಕಾರ್ಯಕ್ಕೆ ಕೈ ಹಾಕಿದ್ದಾರೆ ಎನಿಸುತ್ತದೆ. ಈಗಾಗಲೇ ಈ ನಾಡಿನ ಒಬ್ಬ ಭರವಸೆ ಮೂಡಿಸುವ ಕತೆಗಾರನಾಗಿ ಬೆಳೆಯುತ್ತಿರುವ ಶ್ರೀ ಸಿದ್ದರಾಮ ಹೊನ್ಕಲ್ ತಮ್ಮ ಬರವಣಿಗೆಗೆ ಉದಾತ್ತ ಧ್ಯೇಯ ಇಟ್ಟು ಕೊಂಡಂತಹ ಒಬ್ಬ ಡೈನಮಿಕ್ ಕವಿ ಎಂಬುದು ನಿರ್ವಿವಾದ. ಸಾಮಾಜಿಕ ಸಂಘರ್ಷದ ಸಂದರ್ಭದಲ್ಲಿ ಕವಿ ಕೈಗೆತ್ತಿಕೊಳ್ಳುವ ಆಯುಧದ ಅಂದಕ್ಕಿಂತಲೂ ಅದರ ಕಾಠಿಣ್ಯ ಮತ್ತು ಮೊನಚೇ ಮಹತ್ವದ್ದಾಗುತ್ತದೆ. ಈ ಕಾರಣಕ್ಕಾಗಿಯೇ ಇಲ್ಲಿಯ ಅನೇಕ ಕವನಗಳ ಕಲಾ ಸೌಂದರ್ಯದ ಚ್ಯುತಿಯನ್ನು ಮಾಫ್‌ಮಾಡಬಹುದೆಂದು ನನ್ನ ಅನಿಸಿಕೆ.23

ಹೊನ್ಕಲ್‌ವರ ಕವನಸಂಕಲನದಿಂದ ಕೆಲವು ಕವಿತೆಗಳ ಸಾಲುಗಳನ್ನು ಇಲ್ಲಿ ನೋಡೋಣ.

ಹಳ್ಳಿಗಳೆಲ್ಲಾ ಗುಳೇ ಎದ್ದು ಹೋಗಿ

ಬಡ ರೈತನ ಮಗ
ಭ್ರಮೆ ಹೊತ್ತ ಮೈಮನಗಳಿಂದ
ಸುಡು-ಸುಡು ಬಿಸಿಲಲ್ಲಿ
ಮಂತ್ರಿಗಳ ಮನೆ ಬಾಗಿಲು ಕಾಯುತ್ತಾನೆ
ಅಥವಾ ದಿನಗೂಲಿಯವನಾಗಿ
ಅಧಿಕಾರಿಯಾಗಿ ನಾಯಿ ಕಾಯುತ್ತಾನೆ

(ಭಾರತಿ ತೆರೆದುಕೊಳ್ಳುವುದೇ ಹೀಗೆ....)

ಎನ್ನುವ ವಾಸ್ತವ ಸ್ಥಿತಿ ಇಲ್ಲಿಯದು. ಭಾರತದ ನಗರ-ಗ್ರಾಮೀಣ ಪ್ರದೇಶಗಳ ನಿರುದ್ಯೋಗಿ ಯುವಜನಾಂಗದ ಅಸಹಾಯಕತೆಯನ್ನು ಪ್ರಸ್ತುತ ಕವಿತೆಯಲ್ಲಿ ದಾಖಲಿಸಲಾಗಿದೆ. ಮಂತ್ರಿಗಳ ಮನೆ ಬಾಗಿಲು ಕಾಯುತ್ತಾನೆ ಅಥವಾ ದಿನಗೂಲಿಯವನಾಗಿ ಅಧಿಕಾರಿಗಳ ನಾಯಿ ಕಾಯುತ್ತಾನೆ, ಎಂಬ ಕವಿತೆಯ ಸಾಲುಗಳು ಕೂಡ ಶೋಷಣೆಯ ಸ್ಥಿತಿಯನ್ನು ವ್ಯಂಗ್ಯವಾಗಿ ತಿಳಿಸುತ್ತವೆ.

ವರ್ಷ ಐವತ್ತು ಕಳೆದರೂ
ಹೊಸ ಮನೆಯು ಬರಲಿಲ್ಲ
ಭೂತಾಯಿ ಅರಳಲಿಲ್ಲ
ನೊಂದವನ ಮುಖದಲ್ಲಿ
ನಗೆಯು ಅರಳಲಿಲ್ಲ...

(ಸುವರ್ಣ ಸ್ವಾತಂತ್ರೋತ್ಸವ)

ಈ ದೇಶದ ಇಡೀ ಚಿತ್ರಣ ಅರಿಯಲು ಮೇಲಿನ ಈ ಐದು ಸಾಲುಗಳೇ ಸಾಕು. ಭಾರತ ದೇಶ ಸುವರ್ಣ ಸ್ವಾತಂತ್ರೋತ್ಸವವನ್ನು ಆಚರಿಸಿಕೊಂಡರೂ ಇನ್ನು ಅಭಿವೃದ್ಧಿನೆಪದಲ್ಲಿ ಎಣ್ಣೆರಾಜಕಾರಣದೊಂದಿಗೆ ಮುಗ್ಗರಿಸುತ್ತಿರುವದನ್ನು ಕವಿತೆ ಪ್ರತಿಬಿಂಬಿಸುತ್ತದೆ. ಪ್ರಧಾನವಾಗಿ ಮೂಡಿ ಬಂದಿರುವ ಈ ಕವಿತೆಯಲ್ಲಿ ಹೊಸ ಚಿಂತನೆಗೆ, ಹೊಸ ಅಭಿವ್ಯಕ್ತಿಗೆ ಎಡೆ ಮಾಡಿಕೊಟ್ಟಿದೆ. ಭಾರತದ ಸಮಗ್ರ ಚಿತ್ರಣವನ್ನು ತೋರಿಸುವ ತಾಕತ್ತು ಈ ಕವಿತೆಯಲ್ಲಿದೆ.

## ಕಾವ್ಯ-2

ಹೊನ್ನಸಿರಿ

ಶರಣರು

ಶರಣರು ಭಕ್ತಿಗೆ

ಮೂಲಂ

ಶರಣರು

ಭಾಷಣಕೆ

ಆಹಾರಂ

ಅಂತರ

ಪಾಂಡವರ ಕೌರವರ ಟಿ.ವಿ.

ಕುರುಕ್ಷೇತ್ರ ನೋಡಿ

ಖುಷಿಪಟ್ಟರು

ಸದ್ದಾಂ ಬುಷ್‌ರ ಕೊಲ್ಲಿ

ಕುರುಕ್ಷೇತ್ರ ಕಂಡು

ಬಿಳುಚಿಕೊಂಡರು

ಪವಾಡ

ಮಕ್ಕಳಿಲ್ಲದ ಚಿಂತೆಯಲ್ಲಿ

ಮಠಕ್ಕೆ ನಡೆದುಕೊಂಡ

ಮಲ್ಲಿಗೆ ಈಗ

ಮಠದಪ್ಪಾರಂಥಾವೇ

ಮನೆತುಂಬ ಮಕ್ಕಳು

ಸತ್ಯ

ಹರಿಶ್ಚಂದ್ರನ

ಜೊತೆಯಲೇ

ಸುಡುಗಾಡು ಸೇರಿ

ಸಮಾಧಿಯಾದದ್ದು!

ಕಾವ್ಯ :3

ಸಂಕಲನದ ಅರ್ಧ ಭಾಗ, ಚುಟುಕುಗಳು ಆವರಿಸಿವೆ. ವ್ಯಂಗ್ಯ, ವಿಡಂಬನೆಗೆ ಹೇಳಿ ಮಾಡಿಸಿದ ವಿಧಾನ.

ವಿಪರ್ಯಾಸ–ಗಾಂಧಿ–ಬಸವ–ಅಕ್ಕನ ನ

ಮಾತಾಡಿದವರು ಅವರ

ಒಂದಂಶವಾದರೂ ಪಾಲಿಸಿದ್ದರೆ

ಈ ನೆಲ ಧನ್ಯವಾಗುತ್ತಿತ್ತು

ಬರೀ

ಗಾಂಧೀ ಚೌಕಿನ ಬಸವಿ ಅಕ್ಕ

ಆದವರೇ ಬಹಳ ಇಲ್ಲಿ

ಇನ್ನು ಯಯಾತಿ ಇತ್ಯಾದಿ ಇಂತಹ ಅನೇಕ ಅರ್ಥಗರ್ಭಿತ ಚುಟುಕುಗಳು ಓದುಗನನ್ನು ಗಕ್ಕನೆ ನಿಲ್ಲಿಸಿ ವಿಚಾರಕ್ಕೆ ತೊಡಗಿಸುತ್ತವೆ.[1]

ಹೊನ್ಕಲ್ ಅವರು ಸಗರ ನಾಡಿನ ಜನಪ್ರಿಯ ಲೇಖಕರು ಪ್ರವಾಸ – ಕಥೆ – ಪ್ರಬಂಧ – ಚರಿತ್ರೆ ಹೀಗೆ ಅವರ ಲೇಖನಿ ಶ್ರೀಮಂತವಾದುದು. ಅವರು ಬರೆದ ಕಾವ್ಯವೂ ಅನುಪಮವಾದುದು :

ಅವರ ಕಾವ್ಯ ಕೃತಿಗಳು :

1. ಅಂತರಂಗದ ಹನಿಗಳು
2. ಹೊಸ ಹಾಡು
3. ಅಕ್ಕನಿಗೊಂದು ಪ್ರಶ್ನೆ ಮತ್ತು ಇತರ ಹಾಡುಗಳು

1. ಅಂತರಂಗದ ಹನಿಗಳು ಹೊನ್ಕಲ್ ಅವರ ಮೊದಲ ಕವನ ಸಂಕಲನ. ಚಿಕ್ಕ ಚಿಕ್ಕ ಪದ್ಯಗಳಲ್ಲಿ ಗಮನ ಸೆಳೆಯುವಂಥ ಸಂಗತಿಗಳನ್ನು ನಿರೂಪಿಸಿದ್ದಾರೆ. ಸಾಮಾಜಿಕ ಅರಿವು, ಅನುಭವದ ಆಳ, ಬದುಕಿನ ಪ್ರೀತಿ, ಇವೆಲ್ಲ ವಿಚಾರಗಳನ್ನು ಕವಿ ಚೆನ್ನಾಗಿ ಅಭಿವ್ಯಕ್ತ ಪಡಿಸಿದ್ದಾರೆ.

ಭಯಂಕರ ಕಾಡಿನಲ್ಲಿ
ಬಂದು ಬಿಟ್ಟಿದ್ದೆವು
ಅಲ್ಲಿರುವ ಹುಲಿ ಕರಡಿ ಕಾಡು ಪ್ರಾಣಿಗಳಿಗೆ

ಒಟ್ಟಿನ ಮೇಲೆ ಬಹಳ ದಿನಗಳ ಬಳಿಕ ಒಂದು ಉತ್ತಮ ಕಾವ್ಯ ಕೃತಿಯನ್ನು ಓದಿದ ಸಂತೋಷ ನನಗಾಯಿತು. ಕಥಾ ಸಂಕಲನ– ಪ್ರವಾಸ ಕಥನ ಮುಂತಾದ ಗದ್ಯಕೃತಿಗಳ ಮೂಲಕ ಈಗಾಗಲೇ ನಾಡವರ

ಗಮನ ಸೆಳೆದಿರುವ ಸಿದ್ಧರಾಮ ಹೊನ್ಕಲ್ ತಮ್ಮ ಈ ಪದ್ಯಸಂಕಲನದ ಮೂಲಕವೂ ಸಗರ ನಾಡಿನ ಹೆಮ್ಮೆಯನ್ನು ಹೆಚ್ಚಿಸಲಿದ್ದಾರೆ. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್ ಎಂಬ ಖ್ಯಾತಿಗೆ ಪಕ್ಕಾದ ಈ ನಾಡು ಉಳಿದವರೊಂದಿಗೆ ನಾವು ಸಮ ನಿಮಗೆಂದು ತೋರ್ಪಡಿಸುವ ದಿನಗಳೂ ದೂರವಿಲ್ಲವೆನಿಸುತ್ತದೆ. ಹೊನ್ಕಲ್ ಆ ಹಾದಿಯ ಮೇಲೆ ತಮ್ಮ ಒಂದೊಂದೇ ಆದರೂ ದೃಢವಾದ ಹೆಜ್ಜೆಗಳನ್ನು ಇರಿಸುತ್ತಾ ಹೊರಟಿದ್ದಾರೆ.

★★★

ಅಡಿ ಟಿಪ್ಪಣಿಗಳು :

1. ಮಾನು ಸಗರ : ಸಗರ ಸಂಪುಟ ಪುಟ–16
2. ಬಸವರಾಜ ಸಾಗರ: ಬಸವಲಿಂಗ ಶರಣರು ಪು–22
3. ಬಸವರಾಜ ಸಾಗರ: ಬಸವಲಿಂಗ ಶರಣರು ಪು–1
4. ಶಾಂತಪ್ಪ ಬೂದಿಹಾಳ : ದರ್ಶನ ಮಾಲಿಕೆ
5. ಮಾನು ಸಗರ : ಸಗರ ಸಂಪದ : ಪುಟ–125
6. ಚಂದ್ರಕಾಂತ ಕರದಳ್ಳಿ : ದರ್ಶನ ಮಾಲಿಕೆ ಪುಟ–40
7. ನರಸಿಂಹಗುಪ್ತ ಬಳಿಚಕ್ರ : ಶಂಕರಲಿಂಗ ಶರಣರ ಪುರಾಣ ಪುಟ–1
8. ನರಸಿಂಹಗುಪ್ತ ಬಳಿಚಕ್ರ : ಕನ್ನಿಕಾ ಪರಮೇಶ್ವರಿ ಪುಟ–1
9. ಕೆ.ವೀರಪ್ಪ ವಡವಡಗಿ : ಜಗದ್ಗುರು ಮೌನೇಶ್ವರ ಪುರಾಣ ಪುಟ–6
10. ಅಬ್ದುಲ್ ಕರಿಂ ಕನ್ಯಾಕೊಳ್ಳುರ : ಕಾವ್ಯ ಕನ್ನೆಯರು ಪುಟ–19
11. ಅಬ್ದುಲ್ ಕರಿಂ ಕನ್ಯಾಕೊಳ್ಳುರ : ಕಾವ್ಯ ಕನ್ನೆಯರು ಪುಟ–54
12. ಅಬ್ದುಲ್ ಕರಿಂ ಕನ್ಯಾಕೊಳ್ಳುರ : ಕಾವ್ಯ ಕನ್ನೆಯರು ಪುಟ–VII
13. ಚಂದ್ರಶೇಖರ ಆನೆಗುಂದಿ : ಕರುಳಿನ ಕುಡಿ : ಪುಟ–2
14. ಚಂದ್ರಶೇಖರ ಆನೆಗುಂದಿ : ಮೌನರಾಗ : ಪುಟ–III
15. ಚಂದ್ರಶೇಖರ ಆನೆಗುಂದಿ : ಚಂದ್ರಕಿರಣ : ಪುಟ–46
16. ಸಾವಿತ್ರಿ ಜತ್ತಿ : ಅರಳು ಮಲ್ಲಿಗೆ : ಪುಟ–3
17. ಅಬ್ದುಲ್ ಕರಿಂ ಕನ್ನೆ ಕೊಳ್ಳೂರ : ಚಿತ್ಕಳೆ : ಚಿನ್ಮಯ ಪುಟ–1
18. ಅಬ್ದುಲ್ ಕರಿಂ ಕನ್ನೆ ಕೊಳ್ಳೂರ : ಚಿಂತನ ಶೀಲ ಪುಟ–17
19. ಜ್ಞಾನೇಶ್ವರ ಸಂದೇನಕರ : ಮಕ್ಕಳು ನಕ್ಕರೆ ಹಾಲು ಸಕ್ಕರೆ ಪುಟ–13
20. ಗಾಳೆಪ್ಪ ಪೂಜಾರಿ : ಇದೊಂದು ಬದುಕು ಪುಟ–4
21. ವೆಂಕಟರಾವ ಕುಲಕರ್ಣಿ : ಗಿರಿ ಕೋಗಿಲೆ ಪುಟ–25
22. ಚಂದ್ರಕಾಂತ ಕರದಳ್ಳಿ : ನೂರೊಂದು ಒಗಟುಗಳು ಪುಟ–27
23. ಹೊನ್ನಸಿರಿ : ಆರ್.ಕೆ.ಹುಡಗಿ ಪುಟ–51

# ಅಧ್ಯಾಯ – ನಾಲ್ಕು

## ಯಾದಗಿರಿ ಜಿಲ್ಲೆಯ ಆಧುನಿಕ ಕನ್ನಡ ಸಾಹಿತ್ಯ –

### ೪.೧ ಶೈಲಿ ಮತ್ತು ಭಾಷೆ

### ೪.೨ ಸಾಹಿತ್ಯದ ಮಹತ್ವ

**ಪೀಠಿಕೆ ;**

**ಸಾ**ಹಿತ್ಯದಲ್ಲಿ ಭಾಷೆ, ಶೈಲಿಗೆ ಒಂದು ವಿಶಿಷ್ಟವಾದ ಮಹತ್ವವಿದೆ. ಇವುಗಳಿಲ್ಲದೆ ಸಾಹಿತ್ಯದ ಕಾರ್ಯವು ನಡೆಯುವದಿಲ್ಲ. ಸಾಹಿತ್ಯಕ್ಕೆ ಭಾಷೆ, ಶೈಲಿ, ಮುಖ್ಯವಾಗಿ ಬೇಕೆ ಬೇಕು.

**೪.೧ ಶೈಲಿ ;**

ಸಾಹಿತ್ಯದಲ್ಲಿ ಶೈಲಿ ಎಂಬುದು ಅನಾದಿಕಾಲದಿಂದ ಬಂದಿರುವಂಥದ್ದು. ಕಾವ್ಯ ಮಿಮಾಂಸೆಯಲ್ಲಿ ಇದರ ಪಾತ್ರ, ಸ್ವರೂಪವು ವಿಶಿಷ್ಟವಾಗಿದೆ. ಶೈಲಿ ಎಂದರೆ 'ವಿಶಿಷ್ಟ ಪದರಚನಾರೀತಿ' ಎನ್ನುವುದಾದರೂ ಇದನ್ನು ಕಾವ್ಯ ಮಿಮಾಂಸಕರು ಹೀಗೆ ಹೇಳಿದ್ದಾರೆ "ವಿಶಿಷ್ಟ ಪದರಚನಾ ರೀತಿರಾತ್ಮ ಕಾವ್ಯಸ್ಯ".[೧] (ರೀತಿಯೇ ಕಾವ್ಯದ ಆತ್ಮ) ಎಂದು ಹೇಳಿದ 'ವಾಮನ' ಓದುಗರನ್ನು ಸುಲಬವಾಗಿ ಆಕರ್ಷಿಸಲು ಅಂತಿಮವಾಗದಿದ್ದರೂ ಅದು ಧ್ವನಿ, ಗುಣ, ಅಲಂಕಾರಕ್ಕೂ, ರಸಕ್ಕೂ ವಿಶಿಷ್ಟವಾಗಿ ಸಹಾಯ ನೀಡುತ್ತದೆಂದು ಮೀಮಾಂಸಕರು ಹೇಳಿದ್ದಾರೆ. ಶೈಲಿ ಕವಿಯನ್ನು ಹಿಂಬಾಲಿಸುವ ಛಾಯೆಯಂತೆ ಶೈಲಿಗೂ ಬರಹಗಾರನಿಗೂ ತುಂಬಾ ನಿಕಟ ಸಂಬಂಧವಿರುತ್ತದೆ. ಒಬ್ಬೊಬ್ಬ ಕವಿ ಲೇಖಕನಿಗೂ ಅವನದೆಯಾದ ಶೈಲಿ ಇರುತ್ತದೆ. ಸಾಹಿತ್ಯ ಮಾರ್ಗದಲ್ಲಿ ಮಹತ್ವದ ಲೇಖಕನಾಗಿ ರೂಪುಗೊಳ್ಳುವುದು ಅವನ ಶೈಲಿಯಿಂದ ಮಾತ್ರ.

ಸಾಹಿತ್ಯದ ಸಂದರ್ಭದಲ್ಲಿ ಶೈಲಿ ಎಂಬುದನ್ನು ಅಭಿವ್ಯಕ್ತಿ ಮಾಧ್ಯಮದ ವಿವಿಧ ಪರಿಕರಗಳನ್ನೊಳಗೊಂಡ ರೀತಿಯಲ್ಲೇ ಪರಿಗಣಿಸಲಾಗುತ್ತದೆ. "ಶೈಲಿ ಪ್ರಧಾನವಾಗಿ ವಸ್ತುನಿಷ್ಠ. ಆದರೆ ಅದು ಸಮಷ್ಟಿಯ ಮೇಲೆ ಪ್ರಭಾವ ಬೀರುವದಲ್ಲದೆ, ಅದರಿಂದ ಪ್ರಭಾವಿತವಾಗುವುದುಂಟು. ಅದರಿಂದ ಅದು ಸಾಹಿತಿಯ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವ ಸಾಧನವೂ ಹೌದು, ಒಂದು ಸಮಾಜದ ಸಂಸ್ಕೃತಿಯನ್ನು ಬಿಂಬಿಸುವ ದರ್ಶನವೂ ಹೌದು" ಎಂಬ ಮಾತು ತುಂಬಾ ಔಚಿತ್ಯಪೂರ್ಣವಾಗಿದೆ. ಅಂದರೆ ಒಬ್ಬ ಸಾಹಿತಿಯ ಶೈಲಿಯು ಆತನ ವ್ಯಕ್ತಿತ್ವವನ್ನು ಅಷ್ಟೆ ಅಲ್ಲ; ಆತ ಬದುಕಿದ ಸಮಾಜದ ಸಂಸ್ಕೃತಿಯ ದರ್ಶನವನ್ನು ಮಾಡಿಸುತ್ತದೆ.

ಅಭಿವ್ಯಕ್ತಿ ರೀತಿ ಶೈಲಿ ಎಂದು ಹೇಳುವಾಗ ಸಾಹಿತ್ಯದ ಅಭಿವ್ಯಕ್ತಿಯಲ್ಲಿ ಎದ್ದು ಕಾಣುವ ವಿವಿಧ ಪರಿಕರಗಳ ಸೋದಾಹರಣಾತ್ಮಕ ವಿಶ್ಲೇಷಣೆಯೇ ಆ ಶೈಲಿಯ ಅಧ್ಯಯನವಾಗುತ್ತದೆ. ಈ ಪರಿಕರಗಳು ಲೇಖಕ-ಲೇಖಕಿಯರಲ್ಲಿಯು ಭಿನ್ನ ಭಿನ್ನ ಸ್ವರೂಪ

ಪಡೆಯುತ್ತವೆ; ಪಡೆಯಬೇಕು ಕೂಡ. ಪ್ರತಿಯೊಬ್ಬ ಬರಹಗಾರನೂ ತನಗರಿವಿಲ್ಲದ ಹಾಗೆ ತನ್ನ ಬರವಣಿಗೆಯಲ್ಲಿ ತನ್ನ ಶೈಲಿಯ ವಿಶಿಷ್ಟ ಛಾಪು ಮೂಡಿಸುತ್ತಾನೆ. ಈ ಕಾರಣದಿಂದಲೆ ಹೆಸರನ್ನು ಮರೆಮಾಡಿ ಓದಿದರೂ, ಆ ಬರವಣಿಗೆಯ ರೀತಿಯ ಮೇಲೆ ಇದು ಇಂಥ ಲೇಖಕನ ಬರವಣಿಗೆ ಎಂದು ಸ್ಪಷ್ಟವಾಗಿ ಗುರುತಿಸಬಹುದು ಇದು ಶೈಲಿಯ ಮುಖ್ಯ ವೈಶಿಷ್ಟ್ಯ.

ಇಂಥ ಶೈಲಿ ಅಭಿವ್ಯಕ್ತಿ ಪಡೆಯುವಲ್ಲಿ ಪೂರಕವಾಗುವ ಪರಿಕರಗಳು ಅನೇಕ. ಇದನ್ನೇ "style means writers' system of expressive means including a specific choice of words, phraseology, syntax and all other literary components" ಎಂದು ವಾಖ್ಯಾನಿಸಿದ್ದಾರೆ. ಯಾವುದೇ ಬರಹಗಾರನ ಶೈಲಿಯ ಅಧ್ಯಯನಕ್ಕೆ ಈ ಮಾತು ಮಾರ್ಗದರ್ಶಿಯಂತಿದೆ.

ಹಾಗೆ ವಿವಿಧ ಘಟ್ಟಗಳಲ್ಲಿ ಹೊಸಗನ್ನಡದ ಭಾಷೆ, ಶೈಲಿ, ಭಿನ್ನವಾಗಿರುವುದನ್ನು ಕಾಣಬಹುದು. ನವೋದಯ ಭಾಷಾ ಶೈಲಿಯು ಸರಳ ಮತ್ತು ಸುಲಭವಾಗಿದ್ದು ಯಾವುದೇ ಸಂಕೀರ್ಣತೆಗೆ ಒಳಗಾಗದಿರುವದನ್ನು ಕಾಣುತ್ತೇವೆ. ಪ್ರಗತಿಶೀಲ ಸಾಹಿತ್ಯವನ್ನು ಅವಲೋಕಿಸಿದಾಗ ಅವರ ಭಾಷಾ ಶೈಲಿಯಲ್ಲಿ ಆವೇಶ ಆಕ್ರೋಶ ಹಾಗೂ ಪ್ರತಿಭಟನೆಯು ಸುಧಾರಾತ್ಮಕ ನುುವನ್ನು ಹೊಂದಿರುವುದನ್ನು ಕಾಣುತ್ತೇವೆ. ಮತ್ತು ನವ್ಯ ಭಾಷಾ ಶೈಲಿಯು ಶಿಷ್ಟ ಹಾಗೂ ಪ್ರತಿಮಾ ವಿಧಾನದ ನೂಪಣೆ ಹೊಂದಿದ್ದು ಕಂಡುಬರುತ್ತದೆ. ಆದರೆ ದಲಿತ-ಬಂಡಾಯ ಭಾಷಾ ಶೈಲಿಯಲ್ಲಿ ಜಾತಿ ಮತ್ತು ವರ್ಗ ಸಂಘರ್ಷದ ಕುರಿತು ಚರ್ಚಿತವಾಗಿದ್ದರೂ ಅದರ ಜೊತೆಗೆ ಬಡತನ, ಹಸಿವು, ಜಮೀನ್ದಾರಿ, ಕಾರ್ಯ, ಬಂಡವಾಳಶಾಹಿ,ಮತ್ತು ನೌಕರಶಾಹಿ ಪ್ರಭುತ್ವಗಳ ಬಹುಮುಖ ಚಿತ್ರವನ್ನು ಕಾಣುತ್ತೇವೆ.

ಹಾಗೆ ಯಾದಗಿರಿ ಜಿಲ್ಲೆಯ ಎಲ್ಲ ಸಾಹಿತಿಗಳು ತಮ್ಮ ಸಾಹಿತ್ಯದಲ್ಲಿ ಭಾಷೆ, ಶೈಲಿಯನ್ನು ಸಮರ್ಪಕವಾಗಿ ಬಳಸಿಕೊಂಡಿರುವುದು ಕಂಡುಬರುತ್ತದೆ. ಎಲ್ಲಾ ಸಾಹಿತಿಗಳು ಹೊಸಗನ್ನಡ ಭಾಷೆಯನ್ನು ಬಳಸುವುದರ ಜೊತೆಗೆ, ಜಿಲ್ಲೆಯ ಸುತ್ತಮುತ್ತಲಿನ ಆಡುನುಡಿ, ದ್ವಿರುಕ್ತಿ, ಜೋಡಿನುಡಿ, ವರ್ಣನೆ, ನೇರನುಡಿ, ಸಂಭಾಷಣೆ, ಅನ್ಯಭಾಷೆ ಗ್ರಾಮೀಣ ಬೈಗುಳು, ಹಾಸ್ಯ ಭಾಷಾಶೈಲಿಯನ್ನು ತಕ್ಕ ಮಟ್ಟಿಗೆ ಬಳಸಿದ್ದಾರೆ.

**ಭಾಷೆ ;**

ಭಾಷೆ ಎಂಬುದು ಮಾನವನ ಅಭಿವ್ಯಕ್ತಿಯ ಸಾಮರ್ಥ್ಯ. ತನ್ನ ಭಾವನೆಗಳನ್ನು ವಿಚಾರಗಳನ್ನು ಮತ್ತೊಬ್ಬರಿಗೆ ಹಂಚಿಕೊಳ್ಳಲು ಭಾಷೆಯು ಅತ್ಯವಶ್ಯಕವಾಗಿದೆ. ಭಾಷೆ ವಿಚಾರ ವಾಹಕವಾಗಿ, ಭಾವನೆಗಳ ಪೋಷಕವಾಗಿ, ಎಲ್ಲದಕ್ಕೂ ಮಿಗಿಲಾಗಿ ವಿಚಾರ ಪ್ರಚೋದಕವಾಗಿ, ಕಾರ್ಯಪ್ರೇರಕವಾಗಿ ಕಾರ್ಯನಿರ್ವಹಿಸುತ್ತದೆ.

ಇದಮಂಧಂ ತಮಃ ಕೃತ್ಸ್ನಂ ಜಾಯೇತ ಭುವನತ್ರಯಂ ।

ಯದಿ ಶಬ್ದಾಹ್ವಯಂ ಜ್ಯೋತಿರಾಸಂಸಾರಂ ನ ದೀಪ್ಯತೇ ॥ ಎಂದು ದಂಡಿ ಹೇಳುತ್ತಾನೆ.

"ಮಾತೆಂಬ ಜ್ಯೋತಿ ಬೆಳಗದಿದ್ದರೆ ಲೋಕವೆಲ್ಲ ಕತ್ತಲೆಯಿಂದ ತುಂಬಿರುತಿತ್ತು. ಅಂಧಕಾರದಲ್ಲಿ ತೊಳಲುತಿತ್ತು ಎಂದಿದ್ದಾನೆ"

ಭಾಷೆಯ ಅವಶ್ಯಕತೆ ಹಾಗೂ ಅದರ ಅದ್ಭುತ ಶಕ್ತಿ ಒಬ್ಬ ಸಾಹಿತಿಗೆ ಅತ್ಯಂತ ಅವಶ್ಯಕವಾಗಿದೆ. ಈ ಭಾಷೆಯ ಮೂಲಕವೇ ತನ್ನ ಎಲ್ಲ ವಿಚಾರಗಳನ್ನು ಸಾಹಿತ್ಯದ ಮೂಲಕ ತಿಳಿಸಲು ಸಾಧ್ಯವಾಗುತ್ತದೆ.

ಕವಿ (ಸಾಹಿತಿ) ಏನನ್ನೇ ಸಾದಿಸಿದರೂ ಆತ ಅದನ್ನು ಭಾಷೆಯಲ್ಲೇ ಸಾಧಿಸಬೇಕು. ಆದ್ದರಿಂದ ಕವಿ (ಸಾಹಿತಿ)ಯ ಸಾಧನೆಯಲ್ಲಿ ಭಾಷೆಯ ಸಾಧನೆಯಾಗುತ್ತದೆ. ಕವಿಯ (ಸಾಹಿತಿ)ಯ ಸಿದ್ಧಿಯಲ್ಲಿ ಭಾಷೆ ಸಿದ್ಧಿಯಾಗುತ್ತದೆ".

ಬರಹವು ಬದುಕಿನ ಬಣ್ಣದ ಬಟ್ಟೆಯಾಗಬಾರದು ಬದುಕಿನ ಚರ್ಮವಾಗಬೇಕು.... ಬಟ್ಟೆಯಾಗುವ ಸಾಹಿತ್ಯ ಬದುಕಿನ ಭಾವವಾಗುವುದಿಲ್ಲ; ಬದುಕಿನ ಹೊದಿಕೆಯಾಗುತ್ತದೆ. ಸಾಹಿತ್ಯ ಬದುಕಿನ ಚರ್ಮವಾದಾಗ ಅವಿನಾಭಾವ ಸಂಬಂಧ ಸಾಧ್ಯವಾಗುತ್ತದೆ".

ವಿಶ್ವನಾಥನು ತನ್ನ ಸಾಹಿತ್ಯ ದರ್ಪಣದಲ್ಲಿ (ಕ್ರಿ.ಶ.೧೪೫೦) "ವಾಕ್ಯಂ ರಸಾತ್ಮಕಂ ಕಾವ್ಯಂ"[೭] ಎಂದು ಹೇಳುತ್ತಾನೆ.

ಭಾಷೆ ಎನ್ನುವುದು ಅಭಿವ್ಯಕ್ತಿ ಮಾಧ್ಯಮ. ಅನುಭವಕ್ಕೆ ಆಕಾರ ಕೊಟ್ಟು ಪರಿಸರವನ್ನು ಚಿತ್ರಿಸುವುದರ ಮೂಲಕ ಸಹೃದಯರಿಗೆ ಅದರ ಭಾವನೆಯನ್ನು ಅರ್ಥಪೂರ್ಣವಾಗಿ ಮುಟ್ಟಿಸುವ ಕೆಲಸವನ್ನು ಭಾಷೆ ಮಾಡುತ್ತದೆ.

ಸೃಜನಶೀಲತೆಯ ಸಂವಹನ ಕ್ರಿಯೆಗೆ ಸಾಹಿತಿಗಳ ಮಾತೃಭಾಷೆ ಅತ್ಯಗತ್ಯವಾದುದು. ಸಾಹಿತಿಗಳ ಪ್ರಾದೇಶಿಕ ಭಾಷೆಯನ್ನು ಬಳಸುವದರಿಂದ ಆ ಕೃತಿಗೆ ಅದರದೇ ಆದ ವೈಶಿಷ್ಟ್ಯತೆ ಇರುತ್ತದೆ. ಅಷ್ಟೇ ಅಲ್ಲದೆ ಸೃಜನಶೀಲತೆಯು ವಿವಿಧ ಸಾಧ್ಯತೆಗಳನ್ನು ಪ್ರಕಟಿಸಲು ಅನುಕೂಲವಾಗುತ್ತದೆ. ಇದರಿಂದ ಆ ಕೃತಿ ಪ್ರದೇಶದ ಜನರ ಮೆಚ್ಚುಗೆಗೆ ಪಾತ್ರವಾಗುತ್ತದೆ. ಆದರೆ ಸಂವಹನ ಕ್ರಿಯೆ ಸಾಧ್ಯವಾಗದೆ ಹೋದಾಗ ಆ ಕೃತಿ ಎಷ್ಟೆ ವಸ್ತು, ಧೋರಣೆಯ ದೃಷ್ಟಿಯಿಂದ ಮಹತ್ವದಾಗಿದ್ದರೂ ತಿರಸ್ಕೃತವಾಗುತ್ತದೆ. ಅದ್ದರಿಂದ ಸಾಹಿತಿಗಳ ಪ್ರಾದೇಶಿಕ ಭಾಷೆಯ ಕೃತಿ ಮಹತ್ವದ್ದೆನಿಸುತ್ತದೆ.

ಯಾದಗಿರಿ ಜಿಲ್ಲೆಯ ಕನ್ನಡ ಸಾಹಿತಿಗಳು ಎಲ್ಲ ಸ್ತರದಿಂದ ಬಂದವರು. ಶುದ್ಧ ಅನಕ್ಷರಸ್ತರಿಂದ ಹಿಡಿದು ಉನ್ನತ ಶಿಕ್ಷಣ ಪಡೆದವರೂ ಇದ್ದಾರೆ. ಅಧ್ಯಪಕ ವೃತ್ತಿಯಿಂದ ಹಿಡಿದು ಅಂಗಡಿಯಲ್ಲಿ ಗುಮಾಸ್ತ ಕೆಲಸಮಾಡುವವರೂ ಇದ್ದಾರೆ. ಅವರು ಬಳಸಿದ ಕನ್ನಡ ಹೊಸಗನ್ನಡ. ಕಥೆ, ಕಾದಂಬರಿ, ನಾಟಕ, ಚರಿತ್ರೆ, ಕಾವ್ಯಗಳನ್ನು ಬರೆದದ್ದು ಹೊಸಗನ್ನಡದ ಶಿಷ್ಟ ಭಾಷೆಯಲ್ಲಿ ಎಲ್ಲರೂ ಕನ್ನಡದಲ್ಲೆ ಶಿಕ್ಷಣ ಪಡೆದವರಾಗಿದ್ದಾರೆ. ಆದರಿಂದ ಕನ್ನಡ ಅಭಿಮಾನ ಅವರ ಎಲ್ಲ ಕೃತಿಗಳಲ್ಲಿಎದ್ದು ಕಾಣುತ್ತದೆ.

ಯಾದಗಿರಿ ಪ್ರದೇಶ ಹೈದ್ರಾಬಾದ ನಿಜಾಮನ ಆಳ್ವಿಕೆಗೆ ಒಳಪಟ್ಟ ಪ್ರದೇಶವಾಗಿದ್ದರಿಂದ ಉರ್ದು ಪ್ರಭಾವ ಹಾಗೂ ಆಂದ್ರ ಪ್ರದೇಶಕ್ಕೆ ಹೊಂದಿಕೊಂಡ ಗಡಿಯಾದುದ್ದರಿಂದ ತೆಲಗು ಪ್ರಭಾವ ಅಲ್ಲಲ್ಲಿ ಕಂಡು ಬರುತ್ತದೆ. ಹೊಸಗನ್ನಡವಾದುದ್ದರಿಂದ ಅಲ್ಲಲ್ಲಿ ಇಂಗ್ಲೀಷ್ ಪದಗಳು ನುಗ್ಗಿ ಬರುತ್ತವೆ. ಯಾದಗಿರಿ ಜಿಲ್ಲೆಯ ಸಾಹಿತ್ಯದಲ್ಲಿ ಬಳಕೆಯಾದ ಭಾಷೆಯನ್ನು ಕುರಿತು ಗಮನಿಸೋಣ.

"ಬ್ಯಾಸ್ಗಿ ಸುಗ್ಗಿ ಬಂದ್ರ ಮಕ್ಳ ಮನ್ಸು ಮೋಡ ಇದ್ದಂಗ. ಯಾಕಂದ್ರ ಅಜ್ಜಿ ಊರಿಗೆ ಹಾರಿ ಹೋಗದ ಅವರ ಕೆಲಸ ಅಜ್ಜಿ ಊರಿಗೆ ಹೊಗದು ; ಫ್ರೀಯಾಗಿ ಇರೋದು ಅಜ್ಜಿ ಕೊಟ್ಟ ಉಂಡಿ,

ಕೊಡುಬಳೆ, ಚಕೂಲಿ, ಅದು ಇದು ಅಂತ ತಿಂದಿದ್ದೇನೆ. ತಿಂದ್ದದ್ದು ಮಗಳ ಮಕಳ ಮ್ಯಾಲ ಅಜ್ಜಿ ಪ್ರೀತಿ ಬಾಳ" (ಆಯಿಗೆ ಮೀಸಿ ಇಲ್ಲ.(ಕತೆ)ಚಂದ್ರಕಾಂತ ಕರದಳ್ಳಿ ಪು.೩೯)

" ಕುರಡಾ ಕೈಯಲ್ಲಿ ಕಂದಿಲ್ಲ ಹಿಡಕೊಂಡು ಹೊಂಟ್ಟಿದ್ನಲ್ಲ. ದಾರಿಯಲ್ಲಿ ಹೋಗೊ ಜನ ಕೇಳಿದರು ಏನಪ್ಪಾ ಕುರಡಪ್ಪಾ ಕಣ್ಣೆ ಕಾಣುವುದಿಲ್ಲಾ ನಾಗೆ ಕಂದಿಲ್ಲು ಏಕಪ್ಪಾ ! ನಾಗ ಬೆಳಕಿದ್ರೂ ಅಷ್ಟೇ ಕತಲಿದ್ರೂ ಅಷೇ ಎಂದು. ಆ ಕುರುಡ ಉತ್ತರ ಕೊಟ್ಟ. ನೋಡಪ್ಪಾ ನನಗ ಕಣ್ಣು ಕಾಣುವುದಿಲ್ಲ. ಬೆಳಕು ಅಷ್ಟೇ ಕತ್ತಲು ಅಷ್ಟೇ ನಾವಿದ್ದರಲ್ಲ. ಕಣ್ಣಿದ್ದೂರೂ. ನಾವಿಲ್ಲದೇ ಬಂದು ನನಗೆ ಡಿಕ್ಕಿ ಹೊಡಿದೀರಿ ಅನ್ನೋ ಕಾರಣಕ್ಕೆ ಕೈಯಲ್ಲಿ ಕಂದಿಲ್ಲೊ ಹಿಡಿದೀ"

(ಕುರುಡ ಮತ್ತು ಕಂದಿಲ್ಲು ಚಂದ್ರಕಾಂತ ಕರದಳ್ಳಿ ಪು.೭೬)

ಹೀಗೆ ಒಂದು ಕಥೆ ಹೇಳುವುದಕ್ಕೆ ಬೇಕಾಗುವ – ಸರಳ ಸಹಜ ಆಡುನುಡಿಯಲ್ಲಿ ಲೇಖಕರು ಬಳಸುವುದನ್ನು ಕಾಣಬಹುದು. ಮಕ್ಕಳಿಗೆ ನೀತಿಯನ್ನು ಭೋದಿಸುವುದೇ ಲೇಖಕರ ಉದ್ದೇಶವಾಗಿರುವುರಿಂದ ಇಂತ ಭಾಷೆಯನ್ನು ಸೂಕ್ತವಾಗಿ ಬಳಸಿರುವರು.

" ಆದರೇ ಅದು ಆಳವಾದ ಮಡವು ಅದನ್ನು ಈಗಲೂ ಜನರು ಸೋತರಾಜನ ಮಡವು ಎಂದೇ ಕರೆಯುತ್ತಾರೆ. ಜರುಗಿದ ಘಟನೆ ಜನರಿಗೆ ತಿಳಿದುಹೊಯಿತು. ಆರಾಜನ ಕ್ರತ್ಯಕ್ಕೆ ಯಾರು ಅವನ ಪ್ರಾಣ ಉಳಿಸಲು ಪ್ರಯತ್ನಿಸಲಿಲ್ಲ. ಕಾಪಾಡಿ ಕಾಪಾಡಿ ಎನ್ನುತಾ ಆ ಮಡುವಿನಲ್ಲಿ ಮರಣ ಅಪ್ಪಿಕೊಂಡ. ದುಷ್ಟ ಬುದ್ಧಿಗೆ ತಕ್ಕ ಶಿಕ್ಷೆಯಾಯಿತೆಂದು ಜನರು ಸಂತೋಷಪಟ್ಟರು."

(ಚೆಲ್ಲಿದ ನಗು ಸಂಗಣ್ಣ ಹೊತಪೇಟಿ ಪು.೩೮)

"ಕಾಲಚಕ್ರ ಉರಳುತ್ತಲಿದೆ ಸಿಕ್ಕ ಸಮಯವನ್ನು ಸಿಕ್ಕ ಅಧಿಕಾರವನ್ನು ಸದುಪಯೋಗ ಪಡಿಸಿಕೊಂಡು ಜನನಾಯಕ, ದೇಶಪ್ರೇಮಿ, ಭ್ರಷ್ಟಾಚಾರದಿಂದ ದೂರ ಉಳಿದು ಕೀರ್ತಿ ಪಾತ್ರನಾಗಬೇಕೆಂಬುದು ಚುನಾಯಿಸಿದ ಪ್ರಜೆಗಳ ವಿಚಾರವಾಗಿದೆ. (ಹುಚ್ಚು ಹೊಳೆ ಸಂಗಣ್ಣ ಹೋತಪೇಟೆ ಪು.೭೬)

ಹೀಗೆ ಕಥೆಗಳಲ್ಲಿ ನೀತಿಯ ಸಂದೇಶ ಹಾಗೂ ಪ್ರಸುತ ಸಮಸ್ಯೆಗಳ ಸುತ್ತ ಹೆಣೆದ ಸಂಗತಿಗಳನ್ನು ಕಂಡರಿಸಿರುವರು ಗಮನಿಸಿಬೇಕಾದ ವಿಷಯವಾಗಿದೆ. ಇಲ್ಲಿನ ಯಾವದೇ ಕಥೆಗಾರರ ಕಥೆಗಳ ಕೊನೆಗೆ ಒಂದು ಸಂದೇಶ ಜೀವನ ಮೌಲ್ಯವನ್ನು ಕಾಣಬಹುದಾಗಿ. ಅದು ಕಥೆಗಾರರ ಉದ್ದೇಶವು ಹೌದು.

ಚರಿತ್ರೆ ಮತ್ತು ಜೀವನ ಚರಿತ್ರೆಗಳನ್ನು ಬರೆಯುವಾಗ ಇಲ್ಲಿನ ಲೇಖಕರು ಪರಿಶ್ರಮ ವಹಿಸಿದ್ದಾರೆ. ಅದು ಸಗರ ನಾಡಿನ ಚರಿತ್ರೆ ಇರಬಹುದು, ಯಾದಗಿರಿಯ ಚರಿತ್ರೆ ಇರಬಹುದು ಇಲ್ಲವೇ ಸ್ಥಳೀಯ ಪುಣ್ಯ ಪುರುಷ್ಯ ಜೀವನ ಚರಿತ್ರೆ ಇರಬಹುದು. ಅದರಲ್ಲಿ ಲೇಖಕರ, ಭಕ್ತಿ, ಶ್ರದ್ಧೆ, ಪ್ರಾಮಾಣಿಕತೆಯನ್ನು ಕಾಣಬಹುದು.

" ಈ ಭೀಮರಾಯನ ಗುಡಿ ಒಂದು ಶೈವ ದೇವಾಲಯವಾಗಿದ್ದಿರಬಹುದು. ಅಥವಾ ಶೈವ ದೇವಾಲಯದ ಕಲ್ಲು ಬೋದಿಗೆ, ಕಂಬಗಳಿಂದ ಈಗಿನ ಗುಡಿ ನಿರ್ಮಿಸಿರುವ ಸಾಧ್ಯತೆಯು ಉಂಟು, ಏಕೆಂದರೆ ಶೈವ ದೇವಾಲಯದ ನಿಚ್ಚಳ ಕುರುಹುಗಳನ್ನು ಇಲ್ಲಿ ಬಳಸಿರುವ ಸಾಮಗ್ರಿ ಗಳಿಂದ ಅರಿಯಬಹುದು. ಗರ್ಭಗ್ರಹ ತೆರೆದ ಸಭಾಮಂಟಪ ನವರಂಗಗಳನ್ನು ಹೊಂದಿದ ಈ ಮಂದಿರದ ಗರ್ಭಗೃಹ ಲಲಾಟ ಬಿಂಬ ಗಜಲಕ್ಷ್ಮೀಯಾಗಿದ್ದು, ಕೆಳಬಾಗ ಅಕ್ಕಪಕ್ಕ ಪದ್ಮನಿಧಿ ಶಂಕನಿಧಿ, ದ್ವಾರ ಪಾಲಕರನ್ನು ಕತ್ತಿದ್ದಾರೆ. ಇವರು ಶೈವ ದೇವಾಲಯಕ್ಕಿರುವ ದ್ವಾರ ಪಾಲಕರು. ಮೂಲೆಯಲ್ಲಿ ಒಂದು ಶಿವಲಿಂಗವಿದೆ.

(ಸಗರನಾಡಿನ ಸಿರಿ : ಡಿ.ಎನ್.ಅಕಿ ಪು.೨೨)

"ಈ ಮಾದೇವಪ್ಪ ಅವರು ಶರಣ ತತ್ವ ಚಿಂತನೆಗಳನ್ನ ಬರಹದಲ್ಲಿ ಮಾತ್ರ ಅಲ್ಲ ಅದರಂತೆ ಬದುಕಿದರು, ತಮ್ಮ ಕುಟುಂಬದ ಸದಸ್ಯರು ಹಾಗೆ ಬದುಕುವಂತಹ ಪರಿಸರ ಒಂದನ್ನು ನಿರ್ಮಾಣ ಮಾಡಿಕೊಟ್ಟಿದ್ದಾರೆ. ಅವರ ವಿಶಾಲ ಹೃದಯ, ಉದ್ಧಾತ ಗುಣ, ಕೀರ್ತಿಯ ಮದದಬೆನ್ನು ಹತ್ತದೆ. ಪ್ರಮಾಣಿಕ ಕಾಯಕಮಾಡಿದ್ದಕ್ಕಾಗಿ ಹೈದ್ರಾಬಾದ ಕಾರ್ನಾಟಕದಲ್ಲಿ ಚಿರಸ್ಮರಿಣೀಯವಾಗಿ ನಿಲ್ಲುತ್ತದೆ".

(ಒಡನಾಡಿ ಲಿಂಗಣ ಸಂತ್ಯಪೇಟ ಸಂ.)

" ಶ್ರೀ ಮಹಾಂತ ಸ್ವಾಮೀಗಳು ಒಬ್ಬ ರಾಜಕೀಯ ಧುರೀಣರು, ಸಮಾಜ ಸುಧಾರಕರು, ಬಡವ ಬಲ್ಲಿರ, ದೀನ ದಲಿತರ, ಕಾಳಜಿವುಳ್ಳವರು ಜನನಾಯಕರಾಗಿ ಹುನಚಗಿಯ ಜನರ ಮನೆಮಾತಾಗಿದ್ದವರು. ಕಲೆ ಸಾಹಿತ್ಯ, ಸಂಗೀತ ಪ್ರೇಮಿಗಳು ಆಗಿದ್ದರು".

(ಹುಣಚಿಗಿಯ ಹೊಂಬೆಳಕು : ವೀರೇಶ ಹಿರೇಮಠ)

“ ನಮ್ಮ ನಾಡು ಶರಣರ ನಾಡು. ಸಾಧು ಸತ್ಪುರಷರ ಬೀಡು ಇದಕ್ಕೆ ನಮ್ಮ ಯಾದಗಿರಿಯ ಹೊರತಾಗಿಲ್ಲ. ಅನೇಕ ಶರಣರು ಮಹಾಮುರುಷರು ಕಾಲಕಾಲಕ್ಕೆ ಈ ನಾಡಿನಲ್ಲಿ ಜನಸಿಬಂದು ತಮ್ಮ ವಚನ – ತತ್ವ ಪದಗಳ ಆಧ್ಯಾತ್ಮಿಕ ವಿಚಾರಗಳ ಮೂಲಕ ಜನರನ್ನು ಉದ್ಧರಿಸುತ ಬಂದಿದ್ದಾರೆ. ಅವರಲ್ಲಿ ಕೊಡಲೂರಿಷಾ.” ಬಸವಲಿಂಗ ಶರಣರು ಒಬ್ಬರು.

(ಬಸವರಾಜ ಸಾಗರ: ಕೊಡಲೂರೇಶ ಬಸವಲಿಂಗ ಶರಣರು)

ಹೀಗೆ ಚರಿತ್ರೆ,ಜೀವನ ಚರಿತ್ರೆಗಳನ್ನು ಹೇಳುವಲ್ಲಿ ಇಲ್ಲಿನ ಸಾಹಿತಿಗಳು ಅಭಿಮಾನದಿಂದ, ಭಕ್ತಿಯಿಂದ ಬರೆದುದನ್ನು ಗಮನಸಬಹುದು.

ಯಾದಗಿರಿ ಜಿಲ್ಲೆಯ ಪ್ರಬಂದ ಸಾಹಿತಿಗಳು ಗಮನಾರ್ಹರಾಗಿದ್ದಾರೆ.

ಚಿಂತನೆಗಳಾಗಲಿ, ಹಾಸ್ಯ ವಿಡಂಬನೆಯ ಪ್ರಬಂಧಗಳಾಗಲಿ, ಲಲಿತ ಪ್ರಬಂಧಗಳಾಗಲಿ ಪ್ರಭಾವಶಾಲಿಯಾಗಿ ಮೂಡಿ ಬಂದಿವೆ. ಇಲ್ಲಿ ಬಳಸಿದ ಭಾಷೆ ಪ್ರಬಂಧಗಳಿಗೆ ಹೇಳಿ ಮಾಡಿಸಿದ ಭಾಷೆಯಾಗಿದೆ.

“ ಆಶೆ ಇರಬೇಕು. ಆದರೆ ಅದು ಮಿತವಾಗಿರಬೇಕು. ಅತಿ ಆಶೆ ಗತಿಗೆಡಸಿತು. ಆಶೆ ದುಃಖಕ್ಕೆ ಮೂಲ ಕಾರಣವಾಗಿದೆ. ಆಶೆಯೂ ವ್ಯಕ್ತಿಯ ಒಳಿತನ್ನು ಸಾಧಿಸುವದರೊಂದಿಗೆ ಜೊತೆಗೆ ಒಳಿತೆಗೆ ಅನುಕೂಲಕರವಾಗಿರಬೇಕು. ಅತಿಯಾದರೆ ಅಮೃತವು ವಿಷ ಎನ್ನುವಂತೆ ನಮ್ಮ ಆಸೆ ಇರಬಾರದು. ಆಶೆ. ಸಂಜೀವಿನಿ ಮಂತ್ರದಂತೆ ಇರಬೇಕು. (ದೊಡ್ಡ ಬಸಪ್ಪ, ಬಳೂರಿಗಿ : ಭವದ ಬೀಜ)

“ಕೂದಲು ಕೆಡಿಸಿತ್ತು ಮನೆಯನ್ನು,ಕೂದಲು ಕೆಡಸಿತ್ತು ಗಡಿಯನ್ನು. ಕೂದಲು ಕೆಡಸಿತ್ತು ಕವಿಯನ್ನು ಎನ್ನುವ ಮಾತು ಸುಳಲ್ಲ. ಕೂದಲು ಹೆಣ್ಣಿಗೆ ಮಹತ್ವದ ಆಭರಣ ಎನ್ನುತ್ತಾರೆ. ಕೂದಲೇ ಸರ್ವಸ್ವ, ಕೂದಲೇ ಸತ್ಯ, ಜಗನ್ಮಿಥ್ಯ”

(ಶ್ರೀನಿವಾಸ ಜಾಲವಾದಿ ಮೀಸೆಮಾವ)

ಹೀಗೆ ಪ್ರಬಂಧಕ್ಕೆ ಯಾವ ಭಾಷೆ ಬೇಕೋ ಅದೇ ಭಾಷೆಯನ್ನು ಶೈಲಿಯನ್ನು ಬಳಸಿ ಪ್ರಬಂಧ ಸಾಹಿತ್ಯ ರಂಜಕವಾಗುವಂತೆ, ವ್ಯಂಜಕವಾಗುವಂತೆ ರಚಿಸಿರುವುದು ಗಮನಾರ್ಹವಾಗಿದೆ.

ಯಾದಗಿರಿ ಜಿಲ್ಲೆಯ ಕಾವ್ಯ ಗದ್ಯ ಸಾಹಿತ್ಯಕ್ಕಿಂತ ಸಮೃದ್ಧವಾಗಿ ಬೆಳೆದಿದೆ. ದ್ವಪದಿ, ತ್ರಿಪದಿ, ಚೌಪದಿ, ಷಟ್ಪದಿ, ಹಾಗೂ ಸ್ವಚ್ಛಂದದ ಸಾಲುಗಳಲ್ಲಿಯೂ ಕಾವ್ಯ ರಚನೆ ನಡೆದಿರುವುದು ಇಲ್ಲಿನ ವಶೇಷ ಇಲ್ಲಿನ ಕವಿಗಳಲ್ಲಿ ಪ್ರಯೋಗ ಶೀಲತೆ ಕಂಡು ಬರುತ್ತದೆ. ಇಲ್ಲಿನ ಕಾವ್ಯದಲ್ಲಿ ನವೋದಯದ ಪ್ರಭಾವ ಹೆಚ್ಚಾಗಿದ್ದು ದಲಿತ–ಬಂಡಾಯದ ಎರಡೋ ಮೂರೋ ಕವಿಗಳು ಕಂಡುಬರುತ್ತಾರೆ.  ರಾಷ್ಟ್ರ ಮಟ್ಟದಲ್ಲಿ ರಾಜ್ಯ ಮಟ್ಟದಲ್ಲಿ ನ್ಲುಬಲ್ಲ ಕವಿಗಳು ವಿರಳವೆಂದೆ ಹೇಳಬಹುದು,. ಆದರೆ ಅವರ ಉತ್ಸಾಹ ಉಲ್ಲಾಸ, ಎಲ್ಲಯೂ ಕಡಿಮೆಯಾದಂತೆ ಕಾಣಿಸುವುದಿಲ್ಲ.

ಈ ಭಾಗದ ಒಬ್ಬೊಬ್ಬ ಕವಿಗೆ ಇದೇ ಭಾಗದ ಕವಿ ಬೆನ್ನುತಟ್ಟಿ, ಹುರಿದುಂಬಿಸಿ ಮುನ್ನುಡಿ ಹಿನ್ನುಡಿ, ಹಿತನುಡಿಗಳಿಂದ ಕವಿತೆ ಬರೆಯುವಂತೆ, ಬರೆದುದನ್ನು ಪ್ರಕಟಿಸುವಂತೆ ಪ್ರೋತ್ಸಾಹಿಸಿದ್ದಾರೆ. ಇದು ಗಮನಾರ್ಹ ಸಂಗತಿಯಾಗಿದೆ. ಶ್ರೀ ನರಸಿಂಹ ಗುಪ್ತ ಬಳಿ ಚಕ್ರ ಅವರು ಬರೆದ ಶ್ರೀಗುರು ಶಂಕರಲಿಂಗ ಶರಣರ ಪುರಾಣ ಷಟ್ಪದಿಯಲ್ಲಿ ರಚಿತವಾಗಿದ್ದು, ಸರಳ, ನೇರ ಹೊನಗನ್ನಡ ಬಳಸಿದ್ದು,

ಶಿವೆಯ ಮದುವೆಯ ಮಂಟಪವು ಜಡ
ಭವೆಯ ಪರಿಣಯ ವಿಭ್ರಮವು ವಾ
ಸವನ ಸಾಯದ ಸಂಭ್ರಮದ ಪಾಂಚಲಿ ಸೀತೆಯರು
ವಿವಿಧತೆಯ ವೂವಾಹ ಮಂಗಳ
ವರ ಜಯಸ್ವನ ಕೀಳೆನೆ
ಭುವಿಯ ತುಂಬುತ್ತ ರವಿಯ ಮುತಿತು ಗುರುವರನ!

ಎಂದು ಸಹಜವಾಗಿ ಓದಿಸಿಕೊಂಡು ಹೋಗುತ್ತದೆ. ವಿಶೇಷವೆಂದರೆ. ಇಲ್ಲಿ ಷಟ್ಪದಿಗಳ ಭಾವಾರ್ಥವನ್ನು ನೀಡಲಾಗಿದ್ದು ಇನ್ನೂ ಸರಳವಾಗಿ ಓದುಗರು ಕಾವ್ಯವನ್ನು ಗ್ರಹಿಸಲು ಸಾಧ್ಯವಾಗಿದೆ.

ಡಾ. ಅಬ್ದುಲ್ ಕರೀಂ ಕನ್ಯ ಕೋಳೂರು, ಅವರ ಭಾಷೆ ಗಟ್ಟಿಯಾಗಿದ್ದು, ಕಾವ್ಯಕ್ಕೆ ಬಂದು ಗಂಭೀರತೆಯನ್ನು ಆಳವನ್ನು ತಂದುಕೊಟ್ಟಿದೆ. ಮಮತೆಯ  ಸುಳಿ ಮಂಥರೆಯಲ್ಲಿ

ಪ್ರೀತಿಯಲ್ಲದ ನೋಟ ಹೂವಿಲ್ಲದ ತೋಟ

ಪರಿಮಳ ಇಲ್ಲದ ಹೂ ಶಾಂತಿಯಿಲ್ಲದ ಬಾಳು

ಭ್ರಾಂತಿ ತುಂಬಿದ ಗೋಳು ಶಾಂತಿಯೇ ಬೇಕು

ಕಾರ್ಗತ್ತಲ ದಾರಿಯಲ್ಲಿ ಬೆಳಕಿನ ಕ್ರಾಂತಿ ಇರಲು !!

ಎಂದು ಬದುಕಿನಲ್ಲಿ ಶಾಂತಿ ನೆಲೆಸಬೇಕಾದರೆ ಏನೇನು ಬೇಕು ಎಂಬುದನ್ನು ಸಾಧಾರವಾಗಿ ಹೇಳುವ ಪರಿ ಅನನ್ಯವಾಗಿದೆ.

ಶ್ರೀ ಜಿ.ಎಸ್.ಬಸವರಾಜ ಶಾಸ್ತ್ರಿ ಅವರು ದ್ವಿಪದಿಯಲ್ಲಿ ಪ್ರಯೋಗ ಮಾಡಿದ್ದಾರೆ. ಅವರು ಹೇಳುವ ಭಾಷೆ ಮಾತು ಹೊಸದಾಗಿಲ್ಲ ಆದರೆ ಅದನ್ನು ಅವರು ದಾಖಲಿಸಿ ಇಡಬೇಕೆಂದು, ಮುಂದಿನ ಪೀಳಿಗೆಗೆ ನೀಡಬೇಕೆಂದು ಮಾಡಿದ ಪ್ರಯತ್ನ ಯಶಸ್ವಿಯಾಗಿದೆ.

ಬಿಟ್ಟಿಕೂಳು ತಿನ್ನೋದಕ್ಕಿಂತ

ರಟ್ಟೆಮುರಿದು ದುಡಿಯೋದು ಕಲಿ ॥

ಮುಂದಿನೂರಿನ ಆಸೆಗಾಗಿ

ಹಿಂದಿನೂರನು ಜರಿಯಬೇಡ॥

ಅಮ್ಮನ ಮಾತು ಕೇಳದಿದ್ದರೆ

ನಮ್ಮದಿ ನಾಗೆ ಸಿಕ್ಕುವುದಿಲ್ಲ॥

ಹೀಗೆ ಗಾದೆ ಮಾತುಗಳನ್ನೇ ಕವಿತೆಯಾಗಿಸಿ, ಕವಿತೆಯೇ ಗಾದೆಮಾತಾಗಿಸಿದ್ದು ಅವರ ಭಾಷಾ ಬಳಕೆಯ ಕೌಶಲವಾಗಿದೆ. ಎನ್ನಬಹುದು.

ಶ್ರೀ ಚಂದ್ರಶೇಖರ ಆನೆಗುಂದಿ ಅವರ ಕಾವ್ಯದ ಭಾಷೆ ಮನಸ್ಸನ್ನು ಸೆಳೆಯುತ್ತದೆ. ಅವರ ಕಾವ್ಯದಲ್ಲಿ ಸರಳತೆ, ಲೋಕಾನುಭವ ಸಾಮಾಜಿಕ ಕಳಕಳಿ ಎದ್ದು ಕಾಣುತ್ತದೆ. : ಅವರ ಕರುಳಿನ ಕುಡಿಯಲ್ಲಿ

ಇಲ್ಲೆ ಭಗತಸಿಂಗ ಮತ್ತೆ ಚಂದ್ರಶೇಖರ

ಇಲ್ಲೆ ಬಾಲ ಲಾಲ ಮತ್ತೆ ಪಾಲರೆನುವರೋ

ಇಲ್ಲೆ ನೇತಾಜಿ ಸುಭಾಷ ಚಂದ್ರಬೋಸರೋ

ನಮಗೆ ಸ್ವಾತಂತ್ರ್ಯ ವಿತ್ತ ಸರ್ವ ಶ್ರೇಷ್ಠರೊ

ವೆಂದೇ ಮಾತರಂ ವಂದೇ ಮಾತರಂ॥

ನಾಡಿಗಾಗಿ ಮಡಿದ ವೀರ ಪುತ್ರರನ್ನು ನೆನೆದು ಬಳಸಿದ ಭಾಷೆ ಒಂದು ಕಳಕಳಿಯ ಭಾಷಾ ಶೈಲಿಯೇ ಆಗಿದೆ ಎನ್ನಬಹುದು.

ಶ್ರೀ ಕೃಷ್ಣ ಸುರಪುರ ಅವರ ಕಾವ್ಯದಲ್ಲಿ ಪ್ರಚಲಿತ ಸಂಗತಿಗಳ ನೇರ – ಸರಳ ಅಭಿವ್ಯಕ್ತಿಯಿದೆ. ಅವರು ಬಳಸುವ ಭಾಷೆ ವಚನಗಳ ಪ್ರಭಾವಕ್ಕೆ ಒಳಗಾದ ಭಾಷೆ, ಅವರ ಎದೆಗಡಲ ಮತ್ತು ಸಂಗ್ರಹದಲ್ಲಿ,

ಮುಗಿಲಗಲ ಜಗದಗಲ ಯುಗದಗಲ ಸೂಸಿಹುದು

ತಾಯಿತನದಮೃತದಾ ಸೊಗದ ಸೋನೆ

ಮಗುವು ತಾಯಿಯ ಮೇಲಾಡೆ ಅಂದಗೆಟ್ಟೀತೆಂದು

ನವಯುಗಕ್ಕೆ ದಾವಿಸಿದೆ ಹೊಸದೊಂದು ಬೇನೆ!

ಎಂದು ಹೊಸಯುಗದ ತಾಯಂದಿರ ತಪ್ಪು ಭ್ರಮೆಯನ್ನು ವ್ಯಂಗ್ಯವಾಗಿ ಬಿಡಿಸಿದ್ದಾರೆ.

ಶ್ರೀ ಸಂಗಣ್ಣ ಹೋತಪೇಟ ಅವರು ಆಡುವ ದಿನದ ಭಾಷೆಯನ್ನೇ ಕಾವ್ಯವಾಗಿಸಿದ್ದು ಸಹಜವಾಗಿದೆ. ಲೋಕೋತ್ತರ ಸಂಗ್ರಹದಲ್ಲಿ

ರೈತನಿ ಉಪಕಾರಿ

ಜಗದ ಜೀವಿಗೆ ಸಹಕಾರಿ

ಕೊಡುವೆ ನೀ ಅನ್ನವನ್ನು

ಪಡೆಯುವೆ ನೀ ಏನನ್ನು ॥

ಎಂದು ರೈತನ ಬಾಳಿನ ವ್ಯಥೆಯನ್ನು ನವಯುಗಕ್ಕೆ ತಿಳಿಸುವ ರೀತಿ ನೇರವಾಗಿದೆ. ಅವರದೆ ಇನ್ನೊಂದು ಹನಿ ಕವನ ಹೀಗೆ ಹೇಳುತ್ತದೆ.

ಅರಿತರೆ ಅಲ್ಲಾ ಬಹುದೂರು ಇಲ್ಲಾ

ಭಗವಂತ ಬೇರಿಲ್ಲಾ, ನೀನು ಬೇರಿಲ್ಲಾ

ಆತ್ಮ ಜ್ಞಾನಿಗಿಲ್ಲ ಕುಲ ಛಲ

ಡಾಂಭಿಕ ಗುರುವಿಗೆ ಕುಲ ಛಲ ಎಲ್ಲಾ!

ಎಂದು ಬದುಕಿನ ತತ್ವಜ್ಞಾನವನ್ನುಏ ಸರದ ಭಾಷೆಯಲ್ಲಿ ಹೇಳಿಬಿಡುತ್ತದೆ.

ಯಾದಗಿರಿ ಜಿಲ್ಲೆಯಲ್ಲಿ ಮಹಿಳಾ ಸಾಹಿತಿಗಳು ಕಡಿಮೆ. ಅವರಲ್ಲಿ ಶ್ರೀಮತಿ ಸಾವಿತ್ರಿ ಜತ್ತಿ, ಅವರು ಒಬ್ಬರು. ಕತೆ, ಹರಟೆ, ಕಾವ್ಯದಲ್ಲಿ, ಕೃಷಿ, ಗೈದರು,. ತವರಿನ ಸಳೆತ ಹೆಣ್ಣಿಗೆ ಯಾವಾಗಲೂ ಇದ್ದದ್ದೆ ಅದನ್ನು ತಮ್ಮ ಸರಳ ಸಹಜ ಭಾಷಾಶೈಲಿಯಲ್ಲಿ, ಅರಳು ಮಲ್ಲಿಗೆಯಲ್ಲಿ

ನನ್ನ ತವರು ಆನಂದದಾ ಸಾಗರವು ಅಲ್ಲಿಇದೆ ಪ್ರೀತಿ ಪ್ರೇಮಗಳ ಆಗರವು

ಆಗಿದೆ. ಮಮತೆಯ ಶಿಖರವು!

ಎಂದು ನೇರವಾಗಿ ಬಣ್ಣಿಸಿದ್ದಾರೆ.

ಶ್ರೀ ಗಾಳೆಪ್ಪ ಪೂಜಾರಿ ಈ ಭಾಗದ ಒಬ್ಬ ಗಮನಾರ್ಹ ದಲಿತ ಸಂವೇದನೆಯ ಕವಿಯಾಗಿದ್ದು ಸಮರ್ಥ ಭಾಷೆಯನ್ನು ಬಳಸಿ ಕಾವ್ಯದ ಶಕ್ತಿಯನ್ನು ಹೆಚ್ಚಿಸಿದ್ದಾರೆ. ಅವರ ಇದೊಂದು ಬದುಕು ಸಂಗ್ರಹದಲ್ಲಿ.

ಹೊಲೆಮಾದಿಗ ಕೇರಿ

ಮುರುಕು ಮನೆಗಳು

ಹರುಕು ಗುಡಿಸಲು

ಬಟ್ಟೆಯಿಲ್ಲದ ಮಕ್ಕಳು

ಆಶ್ರಯ ಯೋಜನೆಯ ಮನೆಗಳು

ಕಟ್ಟಿದ ಮೂರೇ ದಿನಗಳಲ್ಲಿ

ಸೀಳಿ ನಿಂತ ಗೋಡೆಗಳು!

ಎಂದು ಸರಕಾರದ – ಜನತೆಯ– ಸಮಾಜದ ಅಭದ್ರಸ್ಥಿತಿಯನ್ನು ಚೆನ್ನಾಗಿ ನಿರೂಪಿಸಿದ್ದಾರೆ.

ಶ್ರೀ ಗೊಂದಡಗೆ ವಿಶ್ವನಾಥರೆಡ್ಡಿ ಕೃಷಿಕರಾಗಿದ್ದು.

ಒಕ್ಕಲಿಗನ ಕಷ್ಟ – ಕಾರ್ಪಣ್ಯಗಳನ್ನು ಸ್ವತಃ ಬಲ್ಲವರು. ಕೇವಲ ಹತ್ತನೇ ಕಲಿತವರು. ಅದರೂ ಅವರ ಕಾವ್ಯ ರೈತನ ಸಂಕಟವನ್ನು ಚೆನ್ನಾಗಿ ತಿಳಿಸಿ ಆಕ್ರೋಶವನ್ನು ವ್ಯಕ್ತಪಡಿಸುತ್ತದೆ. ಅವರ ಗಾಳಿಗಿಟ್ಟ ದೀಪ ಸಂಗ್ರಹದಲ್ಲಿ,

ರೈತನೆ ದೇಶದ ಬೆನ್ನಲುಬು ಎಂದು ಹೇಳಿ

ಅವನ ಕಷ್ಟಗಳನು ಬರಿಗಣ್ಣಿನಿಂದ ನೋಡಿ

ಮೊಸಳೆ ಕಣ್ಣೀರು ಸುರಿಸುವ

ಪ್ರಜಾ ಪ್ರತಿನಿಧಿಗಳಿಗೆ

ಒಂದೇ ಸಲ ಆರೆತ್ತಿನ ಬಾದುಕೋಲಿನಿಂದ ಹೊಡೆಯುವ ಅಪೇಕ್ಷೆ!

ಎಂದು ನೇರವಾಗಿ ರಾಜಕಾರಣಿಗಳ ಮೇಲೆ ಬಾರುಕೋಲು ಬೀಸಬೇಕೆಂದು ನುಡಿಯುವ ಮಾತು ರೈತನ ಸಿಟ್ಟನ್ನು ಅಭಿವ್ಯಕ್ತ ಪಡಿಸುವ ಸಮರ್ಥ ಭಾಷೆಯಾಗಿದೆ.

ಕೆಲವು ಕವಿಗಳು ಅತ್ಯಂತ ಬಾಲಿಶವಾದ ಭಾಷೆಯನ್ನು ಬಳಸಿ, ಹಿಂದಿನವರು ಬಳಸಿದ ಭಾಷೆಯನ್ನು ಪದಗಳನ್ನೇ ಬಳಸಿ, ಹಿಂದಿನವರು ಬಳಸಿದ ಭಾಷೆಯನ್ನೇ ಪದಗಳನ್ನೇ ಹಿಂದುಮುಂದಾಗಿಸಿ ಕಾವ್ಯ ಬರೆದದ್ದು ಇಲ್ಲಿ ಕಂಡು ಬರುತ್ತದೆ.

ಗುರುವಿಗೆ ಸಾಟಿ ಬೇರಿಲ್ಲ

ಹರಗುರು ಎಂದರೆ ಭಯವಿಲ್ಲ

ಗುರುನಾಮಕ್ಕೆ ಸಾಟಿ ಬೇರಿಲ್ಲ

ಗುರು ಭಕ್ತರಿಗೆ ದುರಿತವಿಲ್ಲ

ಜನುಮ ಜನುಮದಲಿ ಪಾಪವ ಇಲ್ಲ.

(ಜ್ಞಾನಸಾಗರ : ಡಿ.ಎಸ್. ಕುಮಾರ : ಕಾವ್ಯ)

ಮಕ್ಕಳನ್ನು ಕುರಿತು ಬರೆದ ಕವಿತೆಗಳಲ್ಲಿ ಮಕ್ಕಳ ವಯೋಮಾನಕ್ಕೆ ಅನುಗುಣವಾದ ಭಾಷೆಶೈಲಿಯನ್ನೇ ಬಳಸಿದ್ದು ಗಮನಸತಕ್ಕ ಸಂಗತಿಯಾಗಿದೆ. ಶ್ರೀ ಚಂದ್ರಕಾಂತ ಕರದಳ್ಳಿ ಅವರು ತಮ್ಮ ನೂರೊಂದು ಹೊಸ ಒಗಟುಗಳು 'ಕೃತಿಯಲ್ಲಿ,

ಪಾತರಗಿತ್ತಿ ಪಕ್ಕಾ

ನೋಡಿದೇನೆ ಅಕ್ಕಾ

ಧಾರವಾಡದಲ್ಲಿ ಕೂತು

ನಾಕು ತಂತಿ ನಾಕ ಪಡೆದ ಜ್ಞಾನ ಪೀಠ

ಯಾರು ಹೇಳಿ ಈತ?

ಎಂದು ಸರಳ– ಸಹಜ – ಮಾಹಿತಿ ಪೂರ್ಣ ಪದಶೈಲಿ ಬಳಸಿದ್ದು ಗಮನಾರ್ಹವಾಗಿದೆ.

ಹೀಗೆ ಯಾದಗಿರಿ ಜಿಲ್ಲೆಯ ಸಾಹಿತಿಗಳು ಶಿಷ್ಟ ಎನ್ನಬಹುದಾದ ಭಾಷೆಯನ್ನು ಬಳಸಿ, ಎಲ್ಲರಿಗೂ ತಿಳಿಯುವಂತೆ ಬರೆದಿದ್ದಾರೆ. ಅಬ್ಬರದ ಪ್ರಚಾರವಿಲ್ಲದೆ. ಆಡಂಬರದ ಚಮತ್ಕಾರ ವಿಲ್ಲದೆ. ಇವರ ಕೃತಿಗಳು ನೈಜವೆನಿಸುವಂತೆ ರಚನೆಗೊಂಡಿದೆ.

"ಕಾವ್ಯ ಕ್ಷಷ್ಟ ಅನ್ನುತ್ತಾರೆ. ಕಾವ್ಯ ಸುಲಭ ಅನ್ನುತ್ತಾರೆ. ಕಾವ್ಯ ಸುಲಭ ಮತ್ತು ಕಷ್ಟ. ಕಾವ್ಯದ ಮುಖಾಂತರ ಏನನ್ನೋ ಹೇಳಿದಾಗ ಸುಲಭ ಹೇಳದಿದ್ದಾಗ ಕಷ್ಟ. ಎಂಬ ಮಾತು ಇಲ್ಲಿ ಗಮನಾರ್ಹ

(ಉದಯವಾಣಿ : ಜೋಗಿ ಕಾಲಂ : ೨.೧೧.೨೦೧೪)

## ೪.೨ ಯಾದಗಿರಿ ಜಿಲ್ಲೆಯ ಹೊಸಗನ್ನಡ ಸಾಹಿತ್ಯದ ಮಹತ್ವ

ಪೀಠಿಕೆ :

ಯಾದಗಿರಿಯ ಹೊಸಗನ್ನಡ ಸಾಹಿತ್ಯವನ್ನು ಶರಣರು–ಸಂತರು–ಕವಿಗಳು–ತತ್ವಪದಕಾರರು, ಸುಶಿಕ್ಷಿತರು ಹಾಗೂ ಅಶಿಕ್ಷಿತರು ಎಲ್ಲರೂ ಸೇರಿ ಶ್ರೀಮಂತಗೊಳಿಸಿದ್ದಾರೆ. ಅವರ ಸಾಹಿತ್ಯದಲ್ಲಿ ವೈವಿಧ್ಯತೆ ಇಲ್ಲದೇ ಹೋದರೂ ವೈಪುಲ್ಯತೆ ಇದೆ.

ಇಲ್ಲಿನ ಕವಿಗಳಲ್ಲಿ ಈ ನಾಡಿನ ಬಗ್ಗೆ, ನುಡಿಯ ಬಗ್ಗೆ, ಇಲ್ಲಿ ಸಾಹಿತ್ಯ ಬೆಳೆಯ ಬೇಕೆಂಬ ಉತ್ಸಾಹ ಲವಲವಿಕೆ ಎದ್ದು ಕಾಣುತ್ತದೆ. ಇದೇ ಇಲ್ಲಿನ ಸಾಹಿತ್ಯದ ಮಹತ್ವ. ಅತಿ ಶ್ರೇಷ್ಠ ಸಾಹಿತ್ಯ ರಚನೆ ಇಲ್ಲಿ ಆಗಲಿಲ್ಲವೆಂದರೂ ನಡೆಯುತ್ತದೆ. ಕೆಲವು ಮಹತ್ವದ ಸಾಹಿತ್ಯಕರನ್ನು ಇಲ್ಲಿ ಗಮನಿಸಲಾಗಿದೆ.

**ಏಲೇಶ್ವನದ ಕೇತಯ್ಯ :**

ಈಗಿನ ಎಲ್ಹೇರಿಯೇ ಏಲೇಶ್ವರ ಎಂಬ ಗ್ರಾಮ ಈತನಗೆ ಸಾಯಮ್ಮ ಎಂಬ ಹೆಂಡತಿ ಶಿವಣ್ಣನೆಂಬ ಮಗ. ಶಿವಕ್ಕನೆಂಬ ಮಗಳು ಇದ್ದರು ನಿಷ್ಠಾವಂತನಾಗಿ ವೀರಶೈವಾಚಾರವನ್ನು ಮಾಡುತ್ತಿದ್ದನು ತುಂಡು ಭೂಮಿಯಲ್ಲಿ ವ್ಯವಸಾಯ ಮಾಡಿಕೊಂಡು ಜೀವನ ನಡೆಸುತ್ತಿದ್ದನು.

ಈತನ ವಚನಗಳು ಮಾನವ ಬದುಕಿಗೆ ತುಂಬಾ ಸಹಾಯಕವಾಗಿವೆ. ವ್ರತ ನಿಯಮಗಳಿಗೆ ಕಟ್ಟುಬಿದ್ದ ಅಂಥ ಸಂಪ್ರದಾಯದ ಮೂಢ ಜನರು ಮೋಕ್ಷ ಸಾಧನೆಗಾಗಿ ಪುಣ್ಯಕ್ಕಾಗಿ, ಡಾಂಬಿಕ ಉಪವಾಸ ಮಾಡುವುದನ್ನು ಕೇತಯ್ಯನವರು ಸೂಕ್ಷ್ಮವಾಗಿ ವಿಡಂಬಿಸುತ್ತಾರೆ.

ಮನಕ್ಕೆ ವ್ರತಮಾಡಿ. ತನುವಿಗೆ ಕ್ರಿಯೆ ಮಾಡಬೇಕು

ಇಂದ್ರಿಯಂಗಳಿಗೆ ಕಟ್ಟನಿಕ್ಕಿ, ಆತ್ಮನ ಸಂದೇಹವ ಬಿಡಿಸಿ ಕ್ರಿಯೆ ಮಾಡಬೇಕು.

ಹೀಂಗಲ್ಲದೆ ವ್ರತಾಚಾರಿಯಲ್ಲ

ಮನಕ್ಕೆ ಬಂದಂತೆ ಹರಿದು ಬಾಯಿಗೆ ಬಂದಂತೆ ನುಡಿದು

ಇಂತೀ ನಾ ವ್ರತಿಯೆಮದರೆ ಮಾಣ ಏಲೇಶ್ವರಲಿಂಗನು

(ಸಂ.ವ.ಸಂ.1,ಏ,ಕೇ,ವ,51)

## ಕೂಡಲೂರು ಬಸವಲಿಂಗ ಶರಣರು :

ಕೂಡಲೂರು ಬಸವಲಿಂಗ ಶರಣರು 18ನೆಯ ಶತಮಾನದ ಕೊನೆಯ ಭಾಗದಲ್ಲಿ ಜನಿಸಿದರು.[1] ಅಪ್ಪಟ ಜನಪದ ಕವಿಗಳಾದ ಕೂಡಲೂರು ಬಸವಲಿಂಗ ಶರಣರ ಜನನದ ಮಿತಿ ಹಾಗೂ ಜೀವನ ಚರಿತ್ರೆಯ ಬಗ್ಗೆ ಖಚಿತವಾದ ಐತಿಹಾಸಿಕ ಆಧಾರ ಇಲ್ಲ.

ಆತನಲ್ಲಿ ಕಾವ್ಯ ರಚನಾಶಕ್ತಿ ತನ್ನಂದ ತಾನೇ ಪುಟಿದೇಳುತ್ತದೆ. ಬಸವಲಿಂಗಪ್ಪನು ಮುಂದೆ ಲೌಕಿಕ–ಪಾರಮಾರ್ಥಿಕ ಎರಡು ಕೂಡಿಯೇ ಜೀವನ ನಡೆಸಿ ತಾನೂ ಪದ ಕಟ್ಟಿ ಹಾಡುತ್ತಾನೆ. ಅದು ಈ ಕೆಳಗಿನಂತಿದೆ.

ವ್ಯಾಪಾರ ಎನಗಾಯಿತೋ ಕೂಡ್ಲೂರ ಸಂತೇಲಿ

ವ್ಯಾಪಾರ ಎನಗಾಯಿತೋ

ವ್ಯಾಪಾರ ಎನಗಾಯ್ತು ಶ್ರೀಪತಿ ದಯದಿಂದ

ಆ ಪರಬ್ರಹ್ಮನು ತಾನೆ ತಾನಾದದ್ದು.

## ಮೋಟ್ನಳ್ಳಿ ಹಸನಸಾಹೇಬ :

ಮೋಟ್ನಳ್ಳಿ ಹಸನಸಾಹೇಬರು ಕೇವಲ ಧಾರ್ಮಿಕ ವಿಷಯ ಮಾತ್ರ ಅಷ್ಟೇ ಅಲ್ಲ ಸಾಮಾಜಿಕ ವಿಡಂಬನೆಯನ್ನು ಸಹ ತುಂಬಾ ಮಾರ್ಮಿಕವಾಗಿ ತಮ್ಮ ಹಾಡುಗಳಲ್ಲಿ ಹೇಳಿಕೊಂಡಿದ್ದಾರೆ.

ಕಜ್ಜಿಯೆಂಬುದು ಪರಮ ತುರಿಯು

ಲಜ್ಜೆ ನಾಚಿಕೆ ಬಿಟ್ಟಂಥ ಸಿರಿಯು

ಹೆಜ್ಜೆ ಹೆಜ್ಜೆಗೆ ಹೆದರವಲ್ಲದು

ಕಜ್ಜಿ ಬಿಲ್ಜಿ ಕವರೆ ಕವರುತ

ಗಿಜ್ಜಿ ಗಿಜ್ಜಿ ತಾನಾದರೂ ನನ್ನ

ಅಜ್ಜ ಮತ್ಯಾರಿಗೂ ಬಿಡನೆಂಬುವದು

ಹಣದ ವ್ಯಾಮೋಹ ಇರುವವರ ಕುರಿತು ಈ ಮೇಲಿನ ಮಾತು ಸಾಹೇಬರು ಬಹಳ ಸ್ವಾರಸ್ಯಕರವಾದ ಹಾಡಿನ ರೂಪದಲ್ಲಿ ಹೇಳಿದ್ದಾರೆ.

ಮೋಟ್ನಳ್ಳಿ ಹಸನಸಾಹೇಬರು ಸರಳ ಸಜ್ಜನಿಕೆಯ ಸೌಜನ್ಯ ಮೂರ್ತಿ ನಿಷ್ಠುರವಾದಿ. ಒಬ್ಬ ಶ್ರೇಷ್ಠ ಅನುಭಾವಿ ಕವಿ ಜನಪದ ಕವಿ ತತ್ವಪದಕಾರ, ಮುಸ್ಲಿಂ, ಧರ್ಮದಲ್ಲಿ ಜನಿಸಿದ ಹಸನ ಸಾಹೇಬರು, ವೀರಶೈವ ಸಂಸ್ಕೃತಿಯಲ್ಲಿ ಬೆಳೆದು, ವೀರಶೈವ ಧರ್ಮದ ತತ್ವಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡ ಮಹಾಶಿವಯೋಗಿ

**ಚಂದ್ರಶೇಖರ ಶಾಸ್ತ್ರಿಗಳು :**

ನವೋದಯ ಸಾಹಿತ್ಯದ ಕಾಲ ಪಾಶ್ಚಾತ್ಯ ವಿದ್ಯಾಭ್ಯಾಸಕ್ಕೆ ಇಂಗ್ಲೀಷಿನ ವ್ಯಾಮಹಕ್ಕೆ ಒಳಗಾಗುವ ಕಾಲದಲ್ಲಿ ಶಾಸ್ತ್ರಿಗಳು ಸಂಸ್ಕೃತವನ್ನು ಬಿಡಲಿಲ್ಲ. ೧೯೧೭ ರಲ್ಲಿ ವಾರಣಾಸಿ (ಕಾಸಿ) ಗೆ ತೆರಳಿ ಸಂಸ್ಕೃತವನ್ನು ಮುಂದುವರೆಸಿದರು. ಏಳು ವರ್ಷ ಪಮಡಿತ ಪದವಿಯನ್ನು ಪಡೆದು ಸಾಹಿತ್ಯ ಮತ್ತು ವ್ಯಾಕರಣದಲ್ಲಿ ಪಂಡಿತ ಪದವಿಯನ್ನು ಪಡೆದರು. ೧೯೨೪ ರಲ್ಲಿ ವ್ಯಾಕರಣ ತೀರ್ಥ ಪದವಿಯನ್ನು ಪಡೆದುಕೊಂಡರು. ೧೯೨೪ ರಲ್ಲಿ ವಾರಾಣಾಸಿಯಿಂದ ವಾಪಾಸಾದ ಚಂದ್ರೇಖರ ಶಾಸ್ತ್ರಿಗಳಿಗೆ ಮುಂದೆ ಒಂದು ಮಹತ್ವದ ಹೊಣೆಗಾರಿಕೆಯ ಕೆಲಸ ಬಂತು. ಯಾದಗಿರಿಯ ಸಜ್ಜನಶೆಟ್ಟಿ  ಶಂಕ್ರಣ್ಣನವರು ಸಂಸ್ಕೃತ ಕಾಲೇಜು ಪ್ರರಂಭಿಸಿದರು ಶಾಸ್ತ್ರಿಗಳು ಅದರ ಪ್ರಿನ್ಸಿಪಾಲರಾಗಿ ನೇಮಕಗೊಂಡರು ಕಾಲೇಜಿನ ಅಭಿವೃದ್ಧಿಗಾಗಿ ಶ್ರಮಿಸಿದ ಚಂದ್ರಶೇಖರ ಶಾಸ್ತ್ರಿಗಳು ಅನೇಕ ವಿದ್ಯಾರ್ಥಿಗಳನ್ನು  ಬೆಳೆಸಿದ್ದಾರೆ.

ಜೀವನ ಚರಿತ್ರ ಸಂಶೋಧನೆ, ವಚನ ಸಂಪಾದನೆ ವಿಮರ್ಶಾತ್ಮಕ ಕೃತಿಗಳನ್ನು ರಚಿಸಿದ್ದಾರೆ :

೧. ಬಸವತತ್ವ ರತ್ನಾಕರ ೧೯೬೧

೨. ಭಗವಾನ್ ಬಸವೇಶ್ವರ ಜಯಂತಿ ೧೯೨೭

೩. ಲಿಮಗಧಾರಣವೂ ವೇದ ಮಂತ್ರಗಳು ೧೯೨೬

೪. ಚಾಣುಕ್ಯ ನೀತಿ ದರ್ಪಣ ೧೯೨೭

೫. ಧರ್ಮವೀರ ಶಂಕ್ರಣ್ಣನವರ ಚರಿತ್ರೆ ೧೯೨೮

೬. ಧಾರವಾಡದ ಮೃತ್ಯುಂಜಯ ಸ್ವಾಮಿಗಳ ಚರಿತ್ರೆ ೧೯೬೧

೭. ಕೊಲ್ಲಿಪಾಕಿ ೧೯೨೭

೮. ರಾಜಗಿರಿ ೧೯೨೭

೯. ಶಬರ ಶಂಕರ ಪಾರ್ಥಪೌರುಷ ೧೯೬೫

೧೦. ಸ್ವತಂತ್ರ ಸಿದ್ದಲಿಂಗೇಶ್ವರ ವಚನ

೧೧.ಕಾಡಸಿದ್ದೇಶ್ವರ ವಚನ

೧೨.ಸಿದ್ದೇಶ್ವರ ವಚನ ೧

## ಕಾವ್ಯತೀರ್ಥ ಜಿ. ಎಂ. ಗುರುಸಿದ್ದ ಶಾಸ್ತ್ರಿಗಳು:

ಆಗಿನ ಕಾಲದಲ್ಲಿ ಕಾಶಿಗೆ ಹೋಗಿ ಸಂಸ್ಕೃತ ವಿದ್ಯಾಭ್ಯಾಸ ಕಲಿತುಕೊಂಡು ಬಂದಿದ್ದಾರೆ. ಸಿಕಂದರಬಾದಿನಲ್ಲಿ ಸಂಸ್ಕೃತ ಪದವಿಯನ್ನು ಮುಗಿಸಿ ಕ್ರ.ಶ. ೧೯೨೮ ರಲ್ಲಿ ಪುನಾಃ ಕೇಂದ್ರದಿಂದ ಕಾವ್ಯ ತೀರ್ಥ ಪದವಿ ಪಡೆದು ಯಾದಗಿರಿಗೆ ಮರಳುತ್ತಾರೆ ಆಗ ತಾನೇ ಅವರ ಕಾಕನವರಾದ ಬಸವರಾಜಶಾಸ್ತ್ರಿಗಳು ಧರ್ಮ ಸಂಜೀವಿನಿ ಎಂಬ ಪತ್ರಿಕೆ ನಡೆಸುತ್ತಿದ್ದರು. ಆಗ ಶಾಸ್ತ್ರಿಗಳಿಗೆ ಅದರ ಜವಾಬ್ದಾರಿಯನ್ನು ವಹಿಸಿಕೊಡುತ್ತಾರೆ.

ಗುರುಸಿದ್ದ ಶಾಸ್ತ್ರಿಗಳು ತಾವೇ ಒಂದು ಸ್ವಂತ ಪತ್ರಿಕೆ ತೆಗೆಯುತ್ತಾರೆ. ಕ್ರಿ.ಶ. ೧೯೫೩ ರಲ್ಲಿ ಹೈದರಾಬಾದ ಕನ್ನಡಿಗ ಎಂಬ ಸಾಪ್ತಾಹಿಕ ಪತ್ರಿಕೆಯನ್ನು ಆರಂಭಿಸಿದರು. ೨ ಪತ್ರಿಕೆಯ ಜೊತೆಯಲ್ಲಿಯೇ ಶಾಸ್ತ್ರಿಗಳು ಉತ್ತಮ ಕೃತಿಗಳನ್ನು ರಚನೆ ಮಾಡಿದರು :

೧. ಶಹಾಪುರದ ಚರಬಸವೇಶ್ವರ ಚರಿತ್ರೆ

೨. ಹಿರೇನಂದೂರ ಮಲಯ ಶಾಂತೇಶ್ವರರು

೩. ಶಿವನಗುಂಡ ಸ್ಥಳ ಮಹಾತ್ಮೆ (ಜೇವರ್ಗಿ)

೪. ಅಬ್ಬೆ ತುಮಕೂರಿನ ವಿಶ್ವರಾಧ್ಯರ ಚರಿತೆ

೫. ವೀರಭದ್ರ ವಿಜಯ–ನಾಟಕ

೬. ಮಾಯಾ ಕೋಲಾಹಲ–ನಾಟಕ

೭. ಕಾಳೆಬೆಳಗುಂದಿಯ ಬನದೇಶ್ವರರ ಸುಪ್ರಭಾತ

ವಿಶ್ವಕಲ್ಯಾಣ ವೈಚಾರಿಕ ಮಾಸಪತ್ರಿಕೆ ಯಾದಗಿರಿಯಲ್ಲಿ ನಡೆಸುವ ಕಾರಣದಿಂದಲೇ ಬಿ.ಮಹಾದೇವಪ್ಪನವರಿಗೆ ಸುಮಾರು ೨೦ ವರ್ಷಗಳ ಕಾಲ ಯಾದಗಿರಿಯವರೇ ಎಂದು ಗುರುತಿಸುವುದು ವಾಡಿಕೆಯಾಗಿದೆ.

